# ಗೀತಾಶಾಸ್ತ್ರಾರ್ಥವಿವೇಕ

ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
೨೦೦೦

## ಭಗವದ್ಗೀತೆಯ ವಿಷಯದಲ್ಲಿ ಪ್ರಕಟಿತವಾಗಿರುವ ಕೆಲವು ಗ್ರಂಥಗಳು

೧. **ಶ್ರೀಮದ್ಭಗವದ್ಗೀತೆಯ ಸಾರ ಮತ್ತು ಪ್ರಧಾನೋಪದೇಶಗಳು :** ಶ್ರೀಶ್ರೀಗಳವರು **ಶ್ರೀಮದ್ಭಗವದ್ಗೀತಾಭಾಷ್ಯಸಾರವನ್ನೊಳಗೊಂಡ** ಗ್ರಂಥದಲ್ಲಿ ಪ್ರತಿ ಅಧ್ಯಾಯದ ಕೊನೆಯಲ್ಲಿ ಸಂಗ್ರಹಿಸಿ ಕೊಟ್ಟಿರುವ ಸಾರವನ್ನೊಳಗೊಂಡ ಗ್ರಂಥ ಮತ್ತು ಶ್ರೀಶ್ರೀಗಳವರೇ 1967ನೇ ಗೀತಾ-ಜಯಂತಿಯ ಸಂದರ್ಭದಲ್ಲಿ **ಶ್ರೀಮದ್ಭಗವದ್ಗೀತೆಯ ಪ್ರಧಾನೋಪದೇಶಗಳು** ಎಂಬ ಉಪನ್ಯಾಸವನ್ನೂ ಕೊನೆಯಲ್ಲಿ ಸೇರಿಸಿದೆ. ಗೀತಾಪ್ರಿಯರಾದ ವಾಚಕರೆಲ್ಲರೂ ಓದಲೇಬೇಕಾದ ಗ್ರಂಥವಿದು.

**(ಎರಡನೆಯ ಮುದ್ರಣ : 1973 ಪುಟಗಳು ಕ್ರೌನ್ 4 + 62)**

೨. **ಗೀತಾಮನನ :** ಕಾರ್ಯಾಲಯದ ಪಂಡಿತರಾದ ವೇ|| ಲಕ್ಷ್ಮೀ-ನರಸಿಂಹಮೂರ್ತಿಗಳು ಭಗವದ್ಗೀತೆಯ ಕೆಲವು ಮೆಚ್ಚಾದ ೧೦೧ ಶ್ಲೋಕಗಳನ್ನು ಅಧ್ಯಾಯಕ್ರಮದಿಂದ ಸಂಗ್ರಹಿಸಿ ಪ್ರತಿಪದಾರ್ಥಸಮೇತ ಗೀತೆಯಸಾರವನ್ನು ಮನನಮಾಡಲು ಅನುಕೂಲವಾಗುವಂತೆ ಬರೆದು, ವಿಶೇಷವಾಗಿ ಶಿಕ್ಷಣ ಕ್ಷೇತ್ರದ ಮೇಲೆ ಗೀತೆಯ ಪ್ರಭಾವವನ್ನು ಬೀರಲು ಕೈಗೊಂಡಿರುವ ಪುಸ್ತಕವಿದು. ಚಿಕ್ಕ ಮಕ್ಕಳಿಗೂ, ಸ್ತ್ರೀಯರಿಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಗೀತೆಯ ಪರಿಚಯವನ್ನು ಮಾಡಿಕೊಡುವ ಅತ್ಯುತ್ತಮವಾದ ಪುಸ್ತಕ. 1972ರಲ್ಲಿ **ಸ್ತುತಿಪುಷ್ಪಾಂಜಲಿ** ಪುಸ್ತಕದಲ್ಲಿ ಅಡಕವಾಗಿತ್ತು. ಈಗ ಬೇರೆ ಪುಸ್ತಕವಾಗಿಯೇ ಹೊರತಂದಿದೆ.

**(ಎರಡನೆಯ ಮುದ್ರಣ : 1978 ಪು. ಕ್ರೌನ್ 4+44)**

೩. **ಭಗವದ್ಗೀತಾಭಾಷ್ಯ :** ಪೂಜ್ಯಶ್ರೀಶ್ರೀಗಳವರು ಈ ಗ್ರಂಥವನ್ನು 1934ರಲ್ಲಿ **ಮೊದಲನೆಯ** ಬಾರಿಗೆ ಸಂಸ್ಕೃತ ಮೂಲವಿಲ್ಲದೆ **ಏಳು ಸಂಪುಟಗಳಲ್ಲಿ ಪ್ರಕಟಪಡಿಸಿದ್ದರು. ಎರಡನೆಯ** ಸಂಸ್ಕರಣವು ದಿವಂಗತ ಮೈಸೂರು ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ ಕೃಪಾಬಲದಿಂದ **ಸಂಸ್ಕೃತ ಮೂಲ** ಸಮೇತ **ಎರಡು** ಸಂಪುಟಗಳಲ್ಲಿ 1946 ರಲ್ಲಿ ಪ್ರಕಟವಾಯಿತು. ಮೊದಲನೆಯ ಸಂಪುಟದಲ್ಲಿ ೧ರಿಂದ ೮ನೆಯ ಅಧ್ಯಾಯಗಳೂ ಎರಡನೆಯದರಲ್ಲಿ ೯ರಿಂದ ೧೮ ಅಧ್ಯಾಯಪೂರ್ತಾ ಇತ್ತು. ಪುನಃ ಶ್ರೀಶ್ರೀಗಳವರ ಜೀವಿತ ಕಾಲದಲ್ಲಿಯೇ 1962ರಲ್ಲಿ ಒಂದೇ

*(ರಕ್ಷಾಕವಚದ 4ನೇ ಪುಟದಲ್ಲಿ ಮುಂದುವರೆದಿದೆ)*

ಅಧ್ಯಾತ್ಮಗ್ರಂಥಾವಳಿ

# ಗೀತಾಶಾಸ್ತ್ರಾರ್ಥವಿವೇಕ

(ಶ್ರೀಶ್ರೀಗಳವರ ಗೀತಾಶಾಸ್ತ್ರಾರ್ಥ ವಿವೇಕಃ ಎಂಬ
ಸಂಸ್ಕೃತ ಗ್ರಂಥದ ಕಿರುಪರಿಚಯ)


ಬರೆದವರು :
ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ
ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ



ಕ್ರಮಾಂಕ : ೨೧೫

ಪ್ರಕಾಶಕರು :
ಅಧ್ಯಾತ್ಮ ಪ್ರಕಾಶಕಾರ್ಯಾಲಯ
ಹೊಳೆನರಸೀಪುರ
2000

ಮೊದಲನೆಯ ಮುದ್ರಣ ೨೦೦೦

(೨೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

All Rights Reserved

ಅಕ್ಷರ ಜೋಡಣೆ :

**ಪ್ರಶಾಂತ್ ಎಂಟರ್‌ಪ್ರೈಸಸ್**

ನಂ. ೨೧೩, ಬಾಲಾಜಿ ರಸ್ತೆ,

ತ್ಯಾಗರಾಜನಗರ, ಬೆಂಗಳೂರು - ೨೮

ದೂರವಾಣಿ : ೬೭೬೭೦೧೬

ಮುದ್ರಕರು :

**ಪ್ರಾಜ್ಞ ಪ್ರಿಂಟರ್ಸ್**

೨೨೨, ಗೌಡನಪಾಳ್ಯ ಮುಖ್ಯರಸ್ತೆ

ಬೆಂಗಳೂರು -೫೬೦ ೦೬೧

ದೂರವಾಣಿ : ೬೬೬೨೨೩೨

# ಮುನ್ನುಡಿ

ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು 1965ರಲ್ಲಿ **ಗೀತಾಶಾಸ್ತ್ರಾರ್ಥವಿವೇಕಃ** ಎಂಬ ಹೆಸರಿನಿಂದ ಭಗವದ್ಗೀತೆಯಲ್ಲಿ ಪ್ರತಿಪಾದಿಸಿರುವ ಸಾಂಖ್ಯ, ಯೋಗ- ಎಂಬ ಎರಡು ಭಗವತ್ಪ್ರಾಪ್ತಿಯ ಮಾರ್ಗಗಳನ್ನು ವಿವರಿಸುವ ಹಾಗೂ ಗೀತೆಯಲ್ಲಿ ಪ್ರತಿಪಾದಿಸಿರುವ ವಾಸುದೇವತತ್ತ್ವವನ್ನು ತಿಳಿಸುವ **ಸಂಸ್ಕೃತಗ್ರಂಥವೊಂದನ್ನು** ರಚಿಸಿ ಕಾರ್ಯಾಲಯದ ಮೂಲಕ ಪ್ರಕಾಶನಗೊಳಿಸಿದರು. ಶ್ರೀಶ್ರೀಗಳವರು ಬ್ರಹ್ಮೀಭೂತರಾದ ನಂತರ ಅವರ ಶಿಷ್ಯರಾದ ಪಂಡಿತ ವೇ॥ಬ್ರ॥ ಶ್ರೀ॥ ಲಕ್ಷ್ಮೀ-ನರಸಿಂಹ ಮೂರ್ತಿಗಳು ಈ ಗ್ರಂಥದ ಪ್ರಮುಖ ವಿಷಯಗಳನ್ನು ಕುರಿತು ಕನ್ನಡದಲ್ಲಿ **ಅಧ್ಯಾತ್ಮಪ್ರಕಾಶ** ಮಾಸಪತ್ರಿಕೆಯಲ್ಲಿ 1997ನೇ ಜೂನ್‌ನಿಂದ 1999ನೇ ಏಪ್ರಿಲ್ ಪೂರ ಬಿಡಿಲೇಖನಗಳ ರೂಪದಲ್ಲಿ ಪ್ರಕಟಿಸಿದರು. ಈ ಲೇಖನಗಳನ್ನು ಓದಿದ ಅಧ್ಯಾತ್ಮವಿಚಾರರಸಿಕರಾದ ಕೆಲವು ವಾಚಕರು ಈ ಬರಹಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸುವಂತೆ ಸೂಚಿಸಿದರು. ಅದರಂತೆ ಈಗ ಈ ಪುಸ್ತಿಕೆಯು ಪ್ರಕಟವಾಗಿ ವಾಚಕರ ಕರಕಮಲವನ್ನು ಅಲಂಕರಿಸಿರುತ್ತದೆ.

ಈ ಗ್ರಂಥದ ಪ್ರಕಟನೆಗೆ ಈ ಕೆಳಗೆ ಕಂಡ ದಾನಿಗಳು ಧನಸಹಾಯವನ್ನು ನೀಡಿ ಪ್ರೋತ್ಸಾಹಿಸಿರುತ್ತಾರೆ.

1. ಶ್ರೀಮತಿ ಪ್ರಭಾಮಣಿ ಶ್ರೀನಿವಾಸನ್‌ರವರು ಬೆಂಗಳೂರು ರೂ. 5001
2. ಶ್ರೀಮತಿ ಕೆ. ಶಾರದಮ್ಮ ಮೈಸೂರು ರೂ. 1001
   (ತಾಯಿ ದಿವಂಗತ ಮಲ್ಲಮ್ಮನವರ ನೆನಪಾಗಿ)
3. ಶ್ರೀಮತಿ ಕಮಲಮ್ಮ ಕೃಷ್ಣಮೂರ್ತಿ ಬೆಂಗಳೂರು ರೂ. 250
   (ಇವರ ಮಾತಾಪಿತೃಗಳಾದ ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀ ಕೃಷ್ಣಯ್ಯರ್‌ರವರ ಹೆಸರಿನಲ್ಲಿ)

ಒಟ್ಟು ರೂ. 6252

ಶ್ರೀಮತಿ ಪ್ರಭಾಮಣಿಶ್ರೀನಿವಾಸನ್‌ರವರು ಬ್ರಹ್ಮಜ್ಞಕವಿ ಶ್ರೀ ದೇವರಾಯ ಕುಲಕರ್ಣಿಗಳ ವೇದಾಂತ ಪ್ರವಚನಗಳಿಂದ ಪ್ರಭಾವಿತರಾಗಿ, ಅವರೂ ಮತ್ತು ಅವರ ತಾಯಿಯವರಾದ ಶ್ರೀಮತಿ ಶಾರದಮ್ಮನವರು ಆಸಕ್ತಿವಹಿಸಿ ಮತ್ತು ಹೆಚ್ಚಿನ ಧನಸಾಹಾಯವನ್ನು ನೀಡಿ, ಈ ಪುಸ್ತಕವನ್ನು ದಿ|| ದೇವರಾಯ ಕುಲಕರ್ಣಿಗಳ ನೆನಪಾಗಿ ಅಧ್ಯಾತ್ಮಪ್ರಕಾಶಕಾರ್ಯಾಲಯದ ಮೂಲಕ ಪ್ರಕಾಶನಗೊಳಿಸಿರುತ್ತಾರೆ.

ಇವರಿಗೂ ಮತ್ತು ಈ ಪುಸ್ತಕ ಹೊರಬರಲು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಗುರುಭಕ್ತವೃಂದದವರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಮರ್ಪಿಸಲಾಗಿದೆ.

ಹೊಳೆನರಸೀಪುರ
ತಾ|| 29.7.2000

ಪ್ರಕಾಶಕರು
**ಅಧ್ಯಾತ್ಮಪ್ರಕಾಶಕಾರ್ಯಾಲಯ**

# ಪೀಠಿಕೆ

ಭಗವದ್ಗೀತೆಯು ಅವತಾರಮಾಡಿದ ಕಾಲದಿಂದ ಈವರೆಗೆ ಗೀತೆಯ ಬಗ್ಗೆ ಅನೇಕ ವಿದ್ವಾಂಸರುಗಳು ಹಾಗೂ ಲೌಕಿಕರು ತಮ್ಮ ತಮ್ಮ ದೃಷ್ಟಿಕೋನದಿಂದ ವ್ಯಾಖ್ಯಾನಗಳನ್ನೂ ವಿವರಣೆಗಳನ್ನೂ ಬರೆದಿರುತ್ತಾರೆ. ಈಗಲೂ ಬರೆಯುತ್ತಿದ್ದಾರೆ. ಇದು ಭಗವದ್ಗೀತೆಯ ಅಸಾಧಾರಣ ಮಹಿಮೆಯಾಗಿದೆ. ಆದರೆ ಭಗವದ್ಗೀತೆಗೆ ಭಾಷ್ಯವನ್ನು ಅನುಗ್ರಹಿಸಿರುವ ಶ್ರೀಶಂಕರಭಗವತ್ಪಾದರು ಈ ಕ್ಷೇತ್ರದಲ್ಲಿ ಅತ್ಯಂತ ಪ್ರಾಚೀನರಾಗಿದ್ದು ಅವರ ಭಾಷ್ಯವು ಗೀತೆಯೆಂಬ ಅಮೃತ ಸರೋವರಕ್ಕೆ ಸ್ಫಟಿಕ ಸೋಪಾನದಂತೆ ಇದೆ. ಆದ್ದರಿಂದ ಗೀತಾಶಾಸ್ತ್ರಾರ್ಥವನ್ನು ಅನುಸಂಧಾನಮಾಡುವ ಮುಮುಕ್ಷುಗಳು ಶ್ರೀಭಗವತ್ಪಾದರ ಭಾಷ್ಯಾನುಗುಣವಾಗಿ ಮೊದಲು ಮಾಡಿ ಅನಂತರ ಉಳಿದ ಭಾಷ್ಯಕಾರರ ಹಾಗೂ ವ್ಯಾಖ್ಯಾನಕಾರರ ಗ್ರಂಥಗಳನ್ನೂ ಅಧ್ಯಯನಮಾಡಿ ಗೀತೆಯ ವಿಶ್ವರೂಪವನ್ನು ಸಾಕ್ಷಾತ್ಕರಿಸಿಕೊಂಡು ಕೃತಾರ್ಥರಾಗಬಹುದಾಗಿದೆ. ಈ ಅರ್ಥದಲ್ಲಿ ಗೀತೆಯು ಸಾರ್ವಕಾಲಿಕ ಅಧ್ಯಾತ್ಮ ಗ್ರಂಥವಾಗಿದೆ.

ಪೂಜ್ಯ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ ಕೃತಿಯಾದ **ಗೀತಾಶಾಸ್ತ್ರಾರ್ಥವಿವೇಕಃ** ಎಂಬ ಸಂಸ್ಕೃತ ಗ್ರಂಥದ ಆಧಾರದಿಂದ ಕೆಲವು ಲೇಖನಗಳನ್ನು ನಾನು **ಅಧ್ಯಾತ್ಮಪ್ರಕಾಶ** ಮಾಸಪತ್ರಿಕೆಯಲ್ಲಿ ಪ್ರಕಟಿಸಿದ ಅನಂತರ ಕೆಲವು ಜಿಜ್ಞಾಸುಗಳ ಇಚ್ಛೆಯಂತೆ ಈಗ ಗ್ರಂಥರೂಪವಾಗಿ ಹೊರತರಲಾಗಿದೆ. ಆದರೆ ಶ್ರೀಶ್ರೀಗಳವರ ಸಂಸ್ಕೃತಗ್ರಂಥದ ಸಂಪೂರ್ಣ ಅನುವಾದವು ಇದಲ್ಲ. ಆ ಗ್ರಂಥವು ಇನ್ನೂ ವಿಸ್ತಾರವಾಗಿದ್ದು ಪ್ರತಿಯೊಂದು ವಿಷಯಕ್ಕೂ ಭಗವತ್ಪಾದರ ಭಾಷ್ಯವಾಕ್ಯಗಳನ್ನೇ ನೇರಾಗಿ ಹೆಣೆದು ವಿಷಯಾನುಗುಣವಾದ 22 ವಿವೇಕಭಾಗಗಳನ್ನು ಹೊಂದಿದ್ದು ಗೀತೆಯ ಸಾರಸಂಗ್ರಹವಾಗಿದೆ. ಸಾಮಾನ್ಯ ಸಂಸ್ಕೃತ ಭಾಷಾ-ಪರಿಚಯವುಳ್ಳವರು ಕೂಡ ಆ ಗ್ರಂಥವನ್ನು ಓದಿ ಅನುಸಂಧಾನ ಮಾಡಬಹುದು. ಅದೊಂದು ಅಪೂರ್ವಗ್ರಂಥವೆಂದರೂ ಒಪ್ಪುವಂತಿದೆ.

ಈಗ ತಮ್ಮ ಕೈಯಲ್ಲಿರುವ ಗ್ರಂಥವು ಮೂಲಗ್ರಂಥದ ಪರಿಚಯ ಮಾಡಿಕೊಟ್ಟು ಅದನ್ನು ಓದಬೇಕೆಂಬ ಹಸಿವನ್ನು ಹುಟ್ಟಿಸುತ್ತದೆ. ಸನ್ಮಾನ್ಯ ವಾಚಕರು ಈ ಅಲ್ಪಸೇವೆಯನ್ನು ಸ್ವೀಕರಿಸಿ ಹರಸಬೇಕಾಗಿ ಪ್ರಾರ್ಥನೆ.

ತಾ|| 12.7.2000 ಇತಿ

ಹೊಳೆನರಸೀಪುರ **ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ**

ಪಂಡಿತ

# ವಿಷಯಾನುಕ್ರಮಣಿಕೆ


| ಕ್ರಮಸಂಖ್ಯೆ | ವಿಷಯ | ಪುಟ |
|---|---|---|
| ೧. | ಭಕ್ತಿಯೋಗ (ಕರ್ಮಯೋಗ ಮತ್ತು ಧ್ಯಾನಯೋಗವೂ) | ೧ |
| ೨. | ಜ್ಞಾನಯೋಗ | ೬ |
| ೩. | ಕ್ಷೇತ್ರಜ್ಞನು ಪರಮಾತ್ಮನೇ | ೧೧ |
| ೪. | ಜ್ಞಾನದಿಂದ ಸದ್ಯೋಮುಕ್ತಿ | ೧೪ |
| ೫. | ಭಕ್ತಿ-ಜ್ಞಾನಗಳ ಸಂಬಂಧ | ೨೨ |
| ೬. | ಭಗವತ್ತತ್ತ್ವವಿವೇಕ | ೨೭ |
| ೭. | ಪರಮಪುರುಷಾರ್ಥ ವಿವೇಕ | ೩೭ |
| ೮. | ಶಾಸ್ತ್ರಾರ್ಥೋಪಸಂಹಾರ | ೪೨ |

# ಗೀತಾಶಾಸ್ತ್ರಾರ್ಥವಿವೇಕ

## ೧ ಭಕ್ತಿಯೋಗ

ಭಗವದ್ಗೀತೆಯಲ್ಲಿ ಭಗವಂತನು ಅರ್ಜುನನಿಗೆ ಉಪದೇಶಮಾಡುವಾಗ ಮೊದಲು ಆತ್ಮಜ್ಞಾನವನ್ನೇ ಹೇಳಿದ್ದರೂ ಅನಂತರ ಆತ್ಮಜ್ಞಾನಕ್ಕೆ ಇನ್ನೂ ಅಧಿಕಾರ (ಅರ್ಹತೆ) ವು ಸಾಲದೆ ಇರುವವನಿಗೆ ಕರ್ಮಯೋಗವನ್ನು ಸಾಧನವಾಗಿ ಹೇಳಿರುತ್ತಾನೆ. ಅನಂತರ ಧ್ಯಾನಯೋಗವನ್ನು ಹೇಳಿರುತ್ತಾನೆ. ಕರ್ಮಯೋಗವು ಶರೀರಪ್ರಧಾನವಾದುದರಿಂದ ಬಹಿರಂಗವಾಗಿದ್ದು ಹೆಚ್ಚುಜನ ಸಾಧಕರಿಗೆ ಎಟುಕುವಂಥದ್ದಾಗಿದೆ. ಮನುಷ್ಯನು ಹೇಗೂ ಜೀವನದಲ್ಲಿ ಕರ್ಮಪ್ರವೃತ್ತನಾಗಿಯೇ ಇರುತ್ತಾನೆ. ಯಾವನೊಬ್ಬನೂ ಒಂದುಕ್ಷಣವೂ ಸುಮ್ಮನೆ ಕುಳಿತಿರುವದಿಲ್ಲ. ನಿದ್ರೆಮಾಡುವಾಗಲೂ ಸಹ ಆಹಾರವು ಅರಗುವದು, ಉಸಿರಾಡುವದು, ರಕ್ತಪರಿಚಲನೆ - ಮುಂತಾದ ಸಹಜಕರ್ಮಗಳು ನಡೆದೇ ಇರುತ್ತವೆ. ಆದರೆ ಇವುಗಳಿಂದ ಜೀವನವು ಸಾಗಬಹುದೇ ಹೊರತು ಭಗವಂತನ ಪ್ರಾಪ್ತಿಯಾಗುವದಿಲ್ಲ. ಆದ್ದರಿಂದಲೇ ಭಗವನಂತನು ಸಹಜಕರ್ಮವನ್ನೇ ಕರ್ಮಯೋಗವಾಗಿ ಪರಿವರ್ತಿಸಿ ಅರ್ಜುನನಿಗೆ ಕರ್ಮಗಳನ್ನು ಮಾಡಲೇಬೇಕೆಂದು ಒತ್ತಿ ಹೇಳಿರುತ್ತಾನೆ. ಇಲ್ಲಿ ಯೋಗವೆಂದರೆ ಉಪಾಯವು. ಮನುಷ್ಯನು ತಾನು ಮಾಡುವ ಕರ್ಮಗಳನ್ನೇ ಭಗವದಾರಾಧನೆಯಾಗಿ ಪರಿವರ್ತಿಸಿಕೊಂಡಲ್ಲಿ ಕರ್ಮಯೋಗವಾಗಿಬಿಡುವದು. ಈ ವಿಷಯದಲ್ಲಿ ಭಗವಂತನ ಉಪದೇಶವು ಹೀಗಿದೆ : -

**ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।**

**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥ಗೀ.೧೮-೪೬॥**

ಯಾವ ಭಗವಂತನ ಶಕ್ತಿಯಿಂದಲೇ ಎಲ್ಲಾ ಪ್ರಾಣಿಗಳ ಜೀವನಪ್ರವೃತ್ತಿಯು ನಡೆಯುತ್ತಿರುವದೋ ಯಾವ ಪರಮಾತ್ಮನಿಂದ ಈ ಜಗತ್ತೆಲ್ಲವೂ ವ್ಯಾಪ್ತವಾಗಿರುವದೋ ಆತನನ್ನು ಮಾನವನು ತನ್ನ ಕರ್ಮದಿಂದಲೇ ಆರಾಧಿಸಿದಾಗ ಸಿದ್ಧಿಯನ್ನು ಪಡೆಯುವನು - ಎಂಬಿದು

ಮೇಲಿನ ಶ್ಲೋಕದ ಅಭಿಪ್ರಾಯ. ಇಲ್ಲಿ ಸಿದ್ಧಿ ಎಂದರೆ ಜ್ಞಾನನಿಷ್ಠೆಗೆ ತಕ್ಕ ಯೋಗ್ಯತೆ - ಎಂದರ್ಥ. ಇದಾದರೋ ಮನುಷ್ಯನಿಗೆ ತನ್ನ ವರ್ಣಕ್ಕೆ ವಿಹಿತವಾದ ಶಾಸ್ತ್ರೀಯಕರ್ಮಗಳನ್ನು ಭಗವಂತನ ಆರಾಧನಾರೂಪವಾಗಿ ಅನುಷ್ಠಾನಮಾಡುವದರಿಂದಲೇ ಪ್ರಾಪ್ತವಾಗಲಿದೆ. ಇದನ್ನು ಮತ್ತೆ ''ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸದ್ಧಿಂ ಲಭತೇ ನರಃ'' ಎಂಬ ಶ್ಲೋಕದಲ್ಲಿ ವಿವರಿಸಿ ಆಯಾ ಬ್ರಾಹ್ಮಣಾದಿವರ್ಣದ ಅಧಿಕಾರಿಗಳಿಗೆ ಅವರವರ ಶಾಸ್ತ್ರವಿಹಿತಕರ್ಮಗಳಿಂದಲೇ ಸಂಸಿದ್ಧಿಯು ಲಭಿಸುತ್ತದೆಯೆಂದು ಭಗವಂತನು ತಿಳಿಸಿದ್ದಾನೆ. ಆದ್ದರಿಂದ ಒಂದುರೀತಿಯಿಂದ ನೋಡಿದಾಗ ಕರ್ಮಯೋಗದ ಗುಟ್ಟು ಎಂದರೆ ಭಕ್ತಿಯೋಗವೆಂದೇ ತಿಳಿದುಬರುತ್ತದೆ. ಏಕೆಂದರೆ ಈ ಕರ್ಮಗಳಲ್ಲಿ ಭಗವಂತನ ಸಂಬಂಧವಿದ್ದೇ ಇರುತ್ತದೆ.

ಇದೇ ರೀತಿಯಾಗಿ ಧ್ಯಾನಯೋಗದ ರಹಸ್ಯವೂ ಭಕ್ತಿಯೋಗವೇ ಆಗಿದೆ. ಆದರೆ ಬೇರೆ ಬೇರೆಯ ದೇವತೆಗಳನ್ನು ಧ್ಯಾನಮಾಡುವವನೂ ಯೋಗಿ - ಎನಿಸಬಹುದಾದರೂ ಯಾವನು ಇಂದ್ರಿಯಮನೋಬುದ್ಧಿಗಳನ್ನು ಬಿಗಿಹಿಡಿದು ಭಗವಂತನಲ್ಲಿಯೇ ಮನಸ್ಸಿಟ್ಟು ತಾತ್ಪರ್ಯದಿಂದ ಧ್ಯಾನಮಾಡುವನೋ ಅವನನ್ನೇ ಇಲ್ಲಿ ಧ್ಯಾನಯೋಗಿಯೆಂದು ಕರೆದಿದೆ. ಇಂಥವನಿಗೇ ಹೆಚ್ಚುಕಾಲ ಮಾಡಿದ ಧ್ಯಾನದ ಫಲವಾಗಿ ರಜೋಗುಣ-ತಮೋಗುಣಗಳು ಪರಿಹಾರವಾಗಲಾಗಿ ಯೋಗಸಿದ್ಧಿಯುಂಟಾಗುವದು. ಇಂಥ ಸಂಸ್ಕಾರವು ಬೆಳೆದುಕೊಂಡಾಗ ಭಗವಂತನಲ್ಲಿ ಶ್ರದ್ಧೆ, ಭಕ್ತಿಗಳುಂಟಾಗಿ ಧ್ಯಾನಯೋಗದ ಪರಮರಹಸ್ಯವಾದ ಭಕ್ತಿಯೋಗವು ಸಿದ್ಧಿಸುವದು. ಭಗವದ್ಗೀತೆಯ ಆರನೆಯ ಅಧ್ಯಾಯದ ೧೪, ೪೫, ೪೭ನೆಯ ಶ್ಲೋಕಗಳನ್ನು ನೋಡಿರಿ.

ಇನ್ನು ಯಜ್ಞದಾನತಪೋರೂಪವಾದ ಶಾಸ್ತ್ರವಿಹಿತವೇ ಆಗಿರುವ ಕರ್ಮಯೋಗವನ್ನು ಸಾಧಕರು ಅನುಷ್ಠಾನಮಾಡುತ್ತಾರಾದರೂ ನೇರಾಗಿ ಅಷ್ಟರಿಂದಲೇ ಜ್ಞಾನೋತ್ಪತ್ತಿಯಾಗಲಾರದು. ಆದರೆ ಈ ಅನುಷ್ಠಾನ-ಗಳನ್ನು ಕಾಮಗಳಿಲ್ಲದೆ ಮಾಡಿದರೆ ಅಂತಃಕರಣಶುದ್ಧಿಯಾಗುತ್ತದೆ. ಹೀಗೆಯೇ ಉಪಾಸನಾರೂಪವಾದ ಶಾಸ್ತ್ರವಿಹಿತವಾದ ಧ್ಯಾನವೂ ಅಧ್ಯಾತ್ಮ

ಯೋಗರೂಪವಾದ ಧ್ಯಾನವೂ ನೇರಾಗಿ ಸಮ್ಯಗ್ದರ್ಶನರೂಪವಾದ ಜ್ಞಾನವನ್ನುಂಟುಮಾಡಲಾರವು. ಆದರೆ ಚಿತ್ತಶುದ್ಧಿಯನ್ನುಂಟುಮಾಡುವ ಮೂಲಕವೇ ಆತ್ಮಜ್ಞಾನಕ್ಕೆ ಸಾಧನಗಳಾಗಬಲ್ಲವು. ಈ ವಿಷಯದಲ್ಲಿ ಗೀತೆಯ ಐದನೆಯ ಅಧ್ಯಾಯದ ೧೧ನೆಯ ಶ್ಲೋಕವನ್ನೂ ಆರನೆಯ ಅಧ್ಯಾಯದ ೧೨ನೆಯ ಶ್ಲೋಕವನ್ನೂ ನೋಡಿರಿ.

ರಜೋಗುಣಾಶ್ರಯವಾದ ಕರ್ಮವನ್ನು ಮಾಡುವದರಿಂದ ತಮೋಗುಣವನ್ನು ಗೆಲ್ಲಬಹುದು. ಸಾತ್ತ್ವಿಕವಾದ ಧ್ಯಾನವನ್ನು ಮಾಡುವದರಿಂದ ರಜೋಗುಣವನ್ನೂ ಹಿಮ್ಮೆಟ್ಟಿಸಬಹುದಾಗಿದೆ. ಗೀತೆಯ ಹದಿನಾಲ್ಕನೆಯ ಅಧ್ಯಾಯದ ೧೦ನೇ ಶ್ಲೋಕವನ್ನು ನೋಡಿರಿ. ಅಲ್ಲಿ ರಜೋಗುಣ ಹಾಗೂ ಸತ್ತ್ವಗುಣಗಳ ಆಶ್ರಯದಿಂದ ಅವುಗಳಿಗಿಂತ ಬೇರೆಯಾದ ಗುಣಗಳನ್ನು ಹಿಮ್ಮೆಟ್ಟಿಸಲು ಸಾಧ್ಯವೆಂದು ತಿಳಿಸಲಾಗಿದೆ. ಆದರೆ ಕೇವಲ ಧ್ಯಾನದಿಂದಾಗಲಿ, ಕೇವಲ ಕರ್ಮವನ್ನಾಶ್ರಯಿಸುವದ ರಿಂದಾಗಲಿ ಎಲ್ಲಾ ರೀತಿಯಿಂದಲೂ ಪೂರ್ಣವಾಗಿ ಗುಣತ್ರಯಗಳನ್ನೂ ಗೆಲ್ಲಲಾಗುವದಿಲ್ಲ. ಒಂದು ಗುಣವು ಎದ್ದುಕೊಂಡಾಗ ಉಳಿದೆರಡು ಗುಣಗಳು ಹಿಮ್ಮೆಟ್ಟಲ್ಪಟ್ಟರೂ ಅವು ಬೀಜರೂಪವಾಗಿ ಉಳಿದುಕೊಂಡಿರುತ್ತವೆ. ಆದ್ದರಿಂದ ಕೇವಲ ಶುದ್ಧಸತ್ತ್ವಗುಣವನ್ನು ಅವಲಂಬಿಸಿದಾಗ ಮಾತ್ರವೇ ಭಗವಂತನ ವಿಷಯವಾದ ಯೋಗದಿಂದ ಕಾಮಗಳು ನಾಶವಾಗಲಾಗಿ ಗುಣತ್ರಯಗಳನ್ನೂ ತೊಲಗಿಸಿಕೊಳ್ಳಲು ಸಾಧ್ಯವಾದೀತು. ಈ ವಿಷಯಕ್ಕೆ ಗೀತೆಯ ಎರಡನೆಯ ಅಧ್ಯಾಯದ ೪೫ನೆಯ ಶ್ಲೋಕವನ್ನು ನೋಡಿರಿ.

ಕರ್ಮಗಳೆಲ್ಲವೂ ಕರ್ಮಯೋಗವಾಗುವಿಕೆ ಹಾಗೂ ಧ್ಯಾನವು ಧ್ಯಾನಯೋಗವಾಗುವದು ಸಹ ಭಗವಂತನ ಸಂಬಂಧದಿಂದಲೇ - ಎಂದು ತಿಳಿಯಬೇಕು. 'ಸ್ವಕರ್ಮಣಾ ತಮಭ್ಯರ್ಚ್ಯ', 'ಯೋಗಿನಾಮಪಿ ಸರ್ವೇಷಾಂ' ಎಂಬೀ ಶ್ಲೋಕಗಳಲ್ಲಿ ಈ ವಿಚಾರವನ್ನು ಭಗವಂತನೇ ಸ್ಪಷ್ಟಗೊಳಿಸಿರುತ್ತಾನೆ. ಈ ರೀತಿಯಾಗಿ ಆಚರಿಸಲ್ಪಟ್ಟಾಗ ಕರ್ಮ-ಧ್ಯಾನಯೋಗಗಳು ಕ್ರಮವಾಗಿ ಭಕ್ತಿಯೋಗವಾಗಿ ಮಾರ್ಪಡುತ್ತವೆ ಮತ್ತು ಗುಣಾತೀತನಾಗಲು ಸಾಧನವಾಗುತ್ತವೆ. ಇದನ್ನು 'ಮಾಂ ಚ ಯೋऽವ್ಯಭಿಚಾರೇಣ

ಭಕ್ತಿಯೋಗೇನ' ಎಂಬ ಶ್ಲೋಕದಲ್ಲಿ ಸ್ಪಷ್ಟಪಡಿಸಲಾಗಿದೆ. ಶ್ರೀ ಶಂಕರಾಚಾರ್ಯರೂ ತಮ್ಮ ಭಾಷ್ಯದಲ್ಲಿ ಹೀಗೆಂದಿದ್ದಾರೆ : 'ನಾರಾಯಣನಾದ ಮತ್ತು ಕರ್ಮಫಲಗಳಿಗೆ ಒಡೆಯನಾದ ನನ್ನನ್ನು ಯಾವ ಸಂನ್ಯಾಸಿಯಾಗಲಿ, ಕರ್ಮನಿಷ್ಠನಾಗಲಿ - ಭಕ್ತಿಯೋಗದಿಂದ - ಎಂದರೆ ನನ್ನನ್ನು ಭಜಿಸುವದನ್ನು ಬಿಟ್ಟು ಬೇರಾವ ಸಾಧನಗಳನ್ನೂ ಕೈಗೊಳ್ಳದೆ ಮಾಡುತ್ತಲೇ ಇರುವನೋ ಅವನು ಈ ಎಲ್ಲಾ ಗುಣಸಮೂಹಗಳನ್ನೂ ದಾಟಿ ಮೋಕ್ಷಕ್ಕೆ ತಕ್ಕವನಾಗುತ್ತಾನೆ''.

ಇನ್ನು ಭಗವಂತನ ಅನುಗ್ರಹದ ಮೂಲಕವೇ ಎಲ್ಲಾ ಪುರುಷಾರ್ಥಗಳೂ ಸಿದ್ಧಿಸಬೇಕಾಗಿದೆಯಾದ್ದರಿಂದ ಕರ್ಮ ಭಕ್ತಿ ಜ್ಞಾನ ಎಂಬೀ ಯಾವ ಯೋಗಗಳೇ ಆಗಲಿ - ಅಥವಾ ಯಾವ ಅಧ್ಯಾತ್ಮಸಾಧನವೇ ಆಗಲಿ - ಎಲ್ಲವೂ ಭಗವಂತನ ಮೂಲಕವೇ ಫಲಪ್ರದವಾಗಬೇಕಾಗಿದೆ. ಬೇರೆ ಯಾವ ಮಾರ್ಗವೂ ಇಲ್ಲ - ಎಂಬ ವಿಷಯವನ್ನು ಗೀತೆಯಲ್ಲಿಯೇ ತಿಳಿಸಿದೆ. 'ಯತ್ಕರೋಷಿ ಯದಶ್ನಾಸಿ', 'ಶುಭಾಶುಭಫಲೈರೇವಂ' ಎಂಬ ಶ್ಲೋಕಗಳ ಅರ್ಥವನ್ನು ಮನನಮಾಡಿರಿ. ಶಂಕರಭಾಷ್ಯದಲ್ಲಿ ಹೀಗಿದೆ : ''ಸಂನ್ಯಾಸವೂ ಯೋಗವೂ -ಆಗಿರುವ ಎಂದರೆ ಭಗವಂತನಿಗೆ ಕರ್ಮಫಲಗಳನ್ನು ಸಮರ್ಪಿಸುವದರಿಂದ ಸಂನ್ಯಾಸವೆನಿಸಿದ್ದು ಭಗವಂತನೊಡನೆ ಸಂಬಂಧವನ್ನೂ ಹೊಂದಿರುವದರಿಂದ ಯೋಗವೆನಿಸಿದ್ದು - ಇಂಥ ಸಂನ್ಯಾಸಯೋಗಗಳಿಂದ ಕೂಡಿದ ಅಂತಃಕರಣವುಳ್ಳವನು ಬದುಕಿರುವಾಗಲೇ ಕರ್ಮಬಂಧದಿಂದ ವಿಮುಕ್ತನಾಗಿ ಪರಬ್ರಹ್ಮವನ್ನು ಸೇರುತ್ತಾನೆ''.

ಏಳನೆಯ ಅಧ್ಯಾಯದ ಆರಂಭದಲ್ಲಿ ಭಗವಂತನು ಹೀಗೆಂದಿರುತ್ತಾನೆ : 'ಎಲೈ ಪಾರ್ಥನೆ, ಯಾವನು ನನ್ನಲ್ಲಿಯೇ ಭಕ್ತಿಯುಳ್ಳವನಾಗಿ ಯೋಗವನ್ನು ಮಾಡುತ್ತಿರುವನೋ- ಎಂದರೆ ಯಾವನಾದರೊಬ್ಬನು ಪುರುಷಾರ್ಥವನ್ನು ಬಯಸುವವನು ಅಗ್ನಿಹೋತ್ರ, ದಾನ, ತಪಸ್ಸೇ ಮುಂತಾದವುಗಳನ್ನು ಆಚರಿಸುತ್ತಾ ಅವುಗಳಿಂದ ಪುರುಷಾರ್ಥಸಿದ್ಧಿಯಾದೀತೆಂದು ತಿಳಿದಿರುತ್ತಾನೆ. ಆದರೆ ಈ ಯೋಗಿಯು ಬೇರೆ ಯಾವ ಸಾಧನಗಳನ್ನೂ ಬಯಸದೆ ನನ್ನನ್ನೇ (ಭಗವಂತನನ್ನೇ) ನಂಬಿ ಅವನನ್ನೇ

ಆಶ್ರಯಿಸಿ, ಆತನಲ್ಲಿಯೇ ಮನಸ್ಸನ್ನಿಟ್ಟು ಧ್ಯಾನಮಾಡುತ್ತಾನೆ. ಇಂಥವನು ನನ್ನನ್ನೇ ಸಮಗ್ರವಾಗಿ ಎಂದರೆ ವಿಭೂತಿ, ಬಲ, ಶಕ್ತಿ ಐಶ್ವರ್ಯ, ವೀರ್ಯ, ತೇಜಸ್ಸೇ - ಮುಂತಾದ ಗುಣಗಳ ಸಮೇತನಾದ ಭಗವಂತನನ್ನು ಅರಿತು ಕೊಳ್ಳುವನು. ಕಡೆಗೆ ದೇಹಪಾತಕಾಲದಲ್ಲಿ ಯೋಗ, ಭಕ್ತಿ ಇವುಗಳ ಬಲ ದಿಂದ ಪರಮವಾದ ದಿವ್ಯಪುರುಷನನ್ನು ಸೇರುವನು' - ಎಂದು ಎಂಟನೆಯ ಅಧ್ಯಾಯದ ೧೦ನೆಯ ಶ್ಲೋಕದಲ್ಲಿ ಭಗವಂತನು ತಿಳಿಸಿರುತ್ತಾನೆ.

**ಭಕ್ತ್ಯತಿಶಯದಿಂದ ಜ್ಞಾನಪ್ರಾಪ್ತಿ** : ವೇದಾಂತಗಳಲ್ಲಿ ಜ್ಞಾನ ದಿಂದಲೇ ಮುಕ್ತಿ ಎಂದು ಹೇಳಿರುತ್ತದೆಯಾದರೂ ಗೀತೆಯಲ್ಲಿ ಭಕ್ತಿಯ ಅತಿಶಯವು ಸಾಧಕನಲ್ಲಿ ಮೂಡಿದಾಗ ಕಾಲದ ವ್ಯವಧಾನವೇ ಇಲ್ಲದೆ ಭಗವದನುಗ್ರಹದಿಂದ ಸಮ್ಯಕ್‌ಜ್ಞಾನವು ಲಭಿಸುತ್ತದೆ ಎಂದು ಒತ್ತಿ ಹೇಳಿರುತ್ತದೆ. ಈ ವಿಷಯದಲ್ಲಿ 'ತೇಷಾಂ ಸತತಯುಕ್ತಾನಾಂ' 'ತೇಷಾ-ಮೇವಾನುಕಂಪಾರ್ಥಮ್' ಎಂಬೀ ಶ್ಲೋಕಗಳ ಭಾಷ್ಯದಲ್ಲಿ ಶ್ರೀಶಂಕರಾ-ಚಾರ್ಯರು ಬರೆದಿರುವದೇನೆಂದರೆ : ''ಯಾರು ಸತತಯುಕ್ತರಾಗಿ ಪ್ರೀತಿ ಪೂರ್ವಕವಾಗಿ ನನ್ನನ್ನು ಭಜಿಸುವರೋ ಅವರಿಗೆ ನಾನು ಬುದ್ಧಿಯೋಗ ವನ್ನು ಅನುಗ್ರಹಿಸುವೆನು. ಮತ್ತೆ ಹೇಗಾದರೆ ಅವರಿಗೆ ಪರಮಶ್ರೇಯಸ್ಸಾ ದೀತು ? ಎಂದು ಅನುಕಂಪದಿಂದ ಕೂಡಿದ ನಾನು ಅವರ ಅಂತಃಕರಣ ದಲ್ಲಿರುವ ಅಜ್ಞಾನವನ್ನು ನಾಶಗೊಳಿಸುವದಕ್ಕಾಗಿ ಜ್ಞಾನದೀಪವನ್ನು ಬೆಳಗಿಸುವೆನು'' - ಎಂದಿರುತ್ತಾರೆ. ಆದ್ದರಿಂದಲೇ ಗೀತೆಯಲ್ಲಿ ಜ್ಞಾನ ಸಾಧನಗಳನ್ನು ಪ್ರಸ್ತಾಪಿಸುವಾಗ ನಡುವೆ ಭಕ್ತಿಯನ್ನೂ ಅಡಕಮಾಡಿದೆ. ಅಲ್ಲಿ ಭಾಷ್ಯಕಾರರು ಬರೆದಿರುವದೇನೆಂದರೆ ''ವಾಸುದೇವಭಗವಂತನಿ ಗಿಂತ ಮಿಗಿಲಾದವರು ಯಾರೂ ಇರುವದಿಲ್ಲ. ಆದ್ದರಿಂದ ಅವನೇ ನನಗೆ ಗತಿ - ಎಂದು ನಿಶ್ಚಯವುಳ್ಳವನಾಗಿ ಯಾವನು ತನ್ನ ಬುದ್ಧಿಯಲ್ಲಿ ದೃಢ ವಾಗಿ ಭಾವಿಸುವನೋ ಅದನ್ನು ಅವ್ಯಭಿಚರಿತಭಕ್ತಿ ಎಂದು ಕರೆಯುತ್ತಾರೆ. ಅನನ್ಯಯೋಗವೆಂದರೂ ಇದೇ ಆಗಿದೆ.'' ಹಾಗೆಯೇ 'ಇತಿ ಕ್ಷೇತ್ರಂ ತಥಾ ಜ್ಞಾನಂ' ಎಂಬ ಶ್ಲೋಕಭಾಷ್ಯದಲ್ಲಿ ''ವೇದಾರ್ಥವೆಂದರೆ ಇಷ್ಟೇ ಆಗಿದೆ.

ಗೀತಾರ್ಥವೂ ಇಷ್ಟೇ ಸರಿ. ಯಾವನು ನನ್ನ ಭಕ್ತನಾಗಿರುವನೋ ಅವನು ಈ ಕ್ಷೇತ್ರಜ್ಞನೇ ಪರಮಾತ್ಮನೆಂಬ ತತ್ತ್ವವನ್ನು ತಿಳಿದು ಪರಮಗುರುವಾದ ನನ್ನಲ್ಲಿ ಎಲ್ಲಾ ಭಾವಗಳಿಂದಲೂ ತನ್ನ ಮನಸ್ಸನ್ನು ನೆಲೆಗೊಳಿಸಿದವನಾಗಿ 'ವಾಸುದೇವನೇ ಎಲ್ಲವೂ' ಎಂಬ ನಿಶ್ಚಯದಲ್ಲಿ ನಿಂತನಾದರೆ ಪರಮಾತ್ಮ ಭಾವವನ್ನು ಪಡೆಯುವನು'' ಎಂದು ತಿಳಿಸಿದ್ದಾರೆ. ಹೀಗೆ ಭಕ್ತಿಯು ಮುಕ್ತಿಗೆ ಹೆಬ್ಬಾಗಿಲಾಗಿದೆ - ಎಂದು ತಿಳಿಯಬೇಕು.

------

## ೨. ಜ್ಞಾನಯೋಗ

ಗೀತಾಶಾಸ್ತ್ರಾರ್ಥವಿವೇಕದಲ್ಲಿ ಈಗ ಜ್ಞಾನಯೋಗವಿವೇಕವನ್ನು ಕುರಿತು ಪ್ರಸ್ತಾಪಿಸಲಾಗುವದು. ಪ್ರಕೃತಿಪುರುಷಸಂಯೋಗವೇ ಸಂಸಾರಕ್ಕೆ ಕಾರಣವು ; ಅದು ನಿಜವಾಗಿಲ್ಲ - ಎಂಬ ತಿಳಿವಳಿಕೆಯೇ ಮುಕ್ತಿಗೆ ಸಾಧನವು - ಎಂದು ಭಗವಂತನು ೧೩ನೆಯ ಅಧ್ಯಾಯದಲ್ಲಿ ತಿಳಿಸಿದ್ದಾನೆ. ಇದರ ವಿವರವನ್ನು ನೋಡೋಣ.

ಭಕ್ತಿಯೋಗವಾಗಿ ಪರಿಣಮಿಸ್ಪಟ್ಟ ಕರ್ಮಯೋಗ - ಧ್ಯಾನ ಯೋಗಗಳಿಗೆ ಜ್ಞಾನವನ್ನುಂಟುಮಾಡುವ ಸಾಮರ್ಥ್ಯವಿದೆ - ಎಂದು ಈವರೆಗೆ ತಿಳಿಸಿದ್ದಾಗಿದೆ. ಈಗ ಗೀತಾಶಾಸ್ತ್ರಸಂಮತವಾದ ಜ್ಞಾನದ ಸ್ವರೂಪವು ಯಾವದು? ಅದರ ಫಲವೇನು ? ಎಂಬಿದನ್ನು ವಿವರಿಸಲಾಗುವದು. ಭಗವಂತನ ಪರಾಪರಪ್ರಕೃತಿಗಳೆನಿಸಿದ ಕ್ಷೇತ್ರಜ್ಞ - ಮತ್ತು ಕ್ಷೇತ್ರ ಇವುಗಳ ಮಿಥ್ಯಾಸಂಬಂಧವೇ ಸಂಸಾರಕ್ಕೆ ಕಾರಣವು. ಆದ್ದರಿಂದ ಪುರುಷನು ನಿಜವಾಗಿ ತಾನು ಯಾರು ? ಎಂಬಿದನ್ನು ಅರಿತುಕೊಳ್ಳುವ ಮೂಲಕ ಭೂತಪ್ರಕೃತಿಯಿಂದ ಬಿಡುಗಡೆಯನ್ನು ಹೊಂದಿ ತನ್ನ ಆತ್ಮನೇ ಆಗಿರುವ ವಾಸದೇವಭಗವಂತನಲ್ಲಿ ನೆಲೆನಿಂತು ತಾನು ಯಾವಾಗಲೂ ನಿತ್ಯಶುದ್ಧಬುದ್ಧ ಮುಕ್ತನಾದ ಪರಮಾತ್ಮನೇ - ಎಂದು ಅರಿತುಕೊಳ್ಳುವದೇ ಪರಮ ಪುರುಷಾರ್ಥವೆಂದು ಭಗವಂತನೇ ತಿಳಿಸಿರುತ್ತಾನೆ. ಈ ವಿಷಯ ದಲ್ಲಿ ಗೀತೆಯ ೧೩ನೆಯ ಅಧ್ಯಾಯದ ೨೬ನೆಯ ಶ್ಲೋಕದಲ್ಲಿ ಭಾಷ್ಯ ಕಾರರು ಹೀಗೆಂದಿರುತ್ತಾರೆ. ''ಭಿನ್ನಸ್ವಭಾವರೂ ವಿಷಯ - ವಿಷಯಿ

ರೂಪರೂ ಆದ ಕ್ಷೇತ್ರಜ್ಞ ಮತ್ತು ಕ್ಷೇತ್ರ - ಇವುಗಳಲ್ಲಿ ಆಗಿರುವ ಒಂದರ ಧರ್ಮವನ್ನು ಮತ್ತೊಂದರದ್ದು - ಎಂದು ಭ್ರಾಂತಿಯಿಂದ ಆರೋಪಿಸಲ್ಪಟ್ಟ ಮಿಥ್ಯಾಜ್ಞಾನವೇ ಸಂಸಾರಕ್ಕೆ ಕಾರಣವಾಗುತ್ತದೆ. ಆದ್ದರಿಂದ ಶಾಸ್ತ್ರಾನುಗುಣವಾಗಿ ಕ್ಷೇತ್ರಕ್ಷೇತ್ರಜ್ಞರನ್ನು ವಿಂಗಡಿಸಿಕೊಂಡು ಎಲ್ಲಾ ಉಪಾಧಿಗಳನ್ನೂ ಮೀರಿರುವ ನಿರ್ವಿಶೇಷವೂ ಜ್ಞೇಯವೂ ಆದ ಬ್ರಹ್ಮನೇ ತಾನು ಎಂದು ಸ್ವರೂಪವಿದ್ದಂತೆಯೇ ಯಾವನು ಕಂಡು ಕೊಳ್ಳುವನೋ ಮತ್ತು ಕ್ಷೇತ್ರವಾದ ಅನಾತ್ಮವನ್ನು ಕನಸಿನಲ್ಲಿ ಕಂಡ ಪದಾರ್ಥದಂತೆ ಕೇವಲ ತೋರಿಕೆಯು ಮಾತ್ರವೇ, ನಿಜವಾಗಿರುವದೇ ಇಲ್ಲ ಎಂದು ನಿಶ್ಚಯಿಸಿಕೊಳ್ಳುವನೋ ಅಂಥವನಿಗೆ ಖಂಡಿತವಾಗಿಯೂ ಮಿಥ್ಯಾಜ್ಞಾನವು ತೊಲಗಿಹೋಗುತ್ತದೆ''. ಇದರಿಂದ ಸಿದ್ಧವಾಗುವದೇನೆಂದರೆ ಅನಾತ್ಮವಾದ ಪ್ರಕೃತಿಯು ಮಿಥ್ಯೆಯಾಗಿದ್ದು ಸತ್ಯಸ್ವರೂಪನಾದ ಆತ್ಮನಲ್ಲಿ ಯಾವ ವಿಕಾರವನ್ನೂ ಉಂಟುಮಾಡಲಾರದು. ಅದು ಆತ್ಮಜ್ಞಾನವಾದೊಡನೆಯೇ ತಾನು ಇಲ್ಲವಾಗಿಬಿಡುತ್ತದೆ. ಹೀಗೆ ಜ್ಞಾನವುಂಟಾದವರಿಗೆ ಮತ್ತೆ ಹುಟ್ಟುಸಾವುಗಳಿರುವದಿಲ್ಲ. ಅಂಥವನು ಮುಕ್ತನಾಗುತ್ತಾನೆ - ಎಂದು ನಿರ್ಣಯವಾಗುತ್ತದೆ. ಇದೇ ಜ್ಞಾನದಿಂದ ದೊರಕುವ ಮುಕ್ತಿಯು ಎಂದಭಿಪ್ರಾಯ.

ಕ್ಷೇತ್ರಕ್ಷೇತ್ರಜ್ಞರ ವೈಲಕ್ಷಣ್ಯವು ಯಾವ ಜ್ಞಾನದಿಂದ ದೊರಕಿ ಭೂತಪ್ರಕೃತಿಮೋಕ್ಷವು ಎಂದರೆ ಪ್ರಾಣಿಗಳ ಹುಟ್ಟಿಗೆ ಕಾರಣವಾದ ಅವ್ಯಾಕೃತವೆಂಬ ಜಗತ್ತಿನ ಬೀಜಾವಸ್ಥೆಯುಂಟೋ ಅದರಿಂದ ಬಿಡುಗಡೆಯು ಆದೀತೋ ಅಂಥ ಜ್ಞಾನದ ಸ್ವರೂಪವೇನು ? ಎಂಬುದನ್ನೀಗ ವಿಚಾರ ಮಾಡಬೇಕಾಗಿದೆ. ಪ್ರಕೃತಿಯೇ ಕರ್ತೃವೇ ಹೊರತು ಆತ್ಮನಲ್ಲ ಎಂದು ಗೀತೆಯಲ್ಲಿಯೇ 'ಪ್ರಕೃತ್ಯೈವ ಚ ಕರ್ಮಾಣಿ' ಎಂಬ ಶ್ಲೋಕದಲ್ಲಿ ತಿಳಿಸಿದೆ. ಹಾಗಾದರೆ ಆತ್ಮನಿಗೆ ಏನೂ ಕರ್ಮವಿಲ್ಲವಾದರೆ ಸುಮ್ಮನೆ ಇರುತ್ತಾನೆಂದರೂ ತಪ್ಪಲ್ಲವೆ ? ಏಕೆಂದರೆ ಸುಮ್ಮನಿರುವದೂ ಒಂದು ಕರ್ಮವೆನಿಸುವದಿಲ್ಲವೆ? ಎಂದರೆ ಹಾಗಲ್ಲ. ಆತ್ಮನು ಯಾವಾಗಲೂ ಅಕರ್ತನೇ. ಆದರೂ ಅವನಲ್ಲಿ ಅಜ್ಞಾನಿಗಳು ಕರ್ಮವನ್ನು ಅಧ್ಯಾಸಮಾಡುತ್ತಾರೆ. ಆದ್ದರಿಂದಲೇ ತಿಳಿದವರು ಕೂಡ 'ನಾನು ಮಾಡುತ್ತೇನೆ' ಎಂದು ಭಾವಿಸಿ

ಕೊಳ್ಳುತ್ತಾರೆ ಆದ್ದರಿಂದ ಕರ್ಮಾಕರ್ಮಗಳನ್ನು ವಿವೇಕಮಾಡಿದಲ್ಲಿ 'ನಾನು ಅಕರ್ಮನು' ಎಂಬಿದು ಕೂಡ ತಪ್ಪುತಿಳಿವಳಿಕೆಯೆಂದೇ ಗೊತ್ತಾಗುತ್ತದೆ. ಇದನ್ನೇ ಭಗವಂತನು 'ನಾನ್ಯಂ ಗುಣೇಭ್ಯಃ ಕರ್ತಾರಂ' ಎಂಬ ಶ್ಲೋಕದಲ್ಲಿಯೂ ತಿಳಿಸಿರುತ್ತಾನೆ. ಇಲ್ಲಿ ಗುಣಗಳಿಗಿಂತ ತಾನು ಬೇರೆ ಎಂದರೆ ವಿಲಕ್ಷಣನು - ಎಂದು ತಿಳಿದಾಗ ಬ್ರಹ್ಮಾತ್ಮಭಾವವು ಅನುಭವಕ್ಕೆ ಬಂದು ಪ್ರಕೃತಿಪುರುಷಸಂಯೋಗವು ಮಿಥ್ಯಾಜ್ಞಾನದಿಂದಾದದ್ದು - ಎಂದು ತಿಳಿದುಬರುವದರಿಂದ ತಾನು ನಿತ್ಯಮುಕ್ತನು - ಎಂದೇ ಜ್ಞಾನವುಂಟಾಗುತ್ತದೆ.

ಇಲ್ಲಿ ಗುಣಗಳಿಂದ ಆತ್ಮನು ಬೇರೆ - ಎಂಬಿದಕ್ಕೆ ಎರಡು ಅರ್ಥಗಳಿವೆ. (೧) ಗುಣಗಳು ದೇಹೇಂದ್ರಿಯಾದಿಗಳ ರೂಪದಿಂದ ಪರಿಣಾಮ ಹೊಂದಿರುವವಾದ್ದರಿಂದ ಅವುಗಳಿಗೆ ಅಂಟಿಕೊಳ್ಳದೆ ಇರುವ ಆತ್ಮನು ತಾನು - ಎಂದು ಒಂದರ್ಥ. (೨) ಇನ್ನು ಆ ಎಲ್ಲಾ ಗುಣಗಳ ಪರಿಣಾಮ ರೂಪವಾದ ಅನಾತ್ಮಗಳಿಂದಲೂ ಬೇರೆಯಾಗಿದ್ದು ಅತ್ಯಂತಸೂಕ್ಷ್ಮನೂ ವ್ಯಾಪಿಯೂ ಪ್ರತ್ಯಗಾತ್ಮನೂ ಆಗಿರುವ ಆತ್ಮನು ಅವುಗಳನ್ನು ಮೀರಿದ ನಿರತಿಶಯಸ್ವಭಾವವುಳ್ಳವನು ಎಂಬಿದು ಮತ್ತೊಂದು ಅರ್ಥ - ಹೀಗೆ ಆತ್ಮನು ಗುಣಗಳನ್ನು ದಾಟಿದವನಾಗಿರುತ್ತಾನೆ.

ಪ್ರಕೃತಿಪುರುಷರ ವಿವೇಕರೂಪವಾದ ಸಮ್ಯಗ್ ಜ್ಞಾನಮಾತ್ರದಿಂದ ಬ್ರಹ್ಮಪ್ರಾಪ್ತಿಯಾಗುವದೆಂದು ಹೇಳಿರುವದರಿಂದ ಆ ಪ್ರಕೃತಿಯೊಡನೆ ಉಂಟಾಗಿರುವ ಅವಿವೇಕವೇ ಸಂಸಾರಿತ್ವವು - ಎಂದೂ ಹೇಳಿದಂತಾಗಿದೆ. ಇಲ್ಲಿ ಪ್ರಕೃತಿಯು ಸಂಸಾರಕಾರಣವೆಂಬುದು ಹೇಗೆ ? ಪುರುಷನೂ ಕಾರಣನೆಂಬುದು ಹೇಗೆ ? ಎಂದು ಸಂಶಯವುಂಟಾಗಲಾಗಿ ಪ್ರಕೃತಿಯು ದೇಹಾದಿಗಳ ರೂಪದಲ್ಲಿ ಪರಿಣಾಮವಾಗುವದರಿಂದಲೂ ಪುರುಷನು ಆ ಪ್ರಕೃತಿಯ ಧರ್ಮಗಳನ್ನು ಎಂದರೆ ಸುಖದುಃಖಗಳನ್ನು ತನ್ನದೇ - ಎಂದುಕೊಳ್ಳುವದರಿಂದಲೂ ಸಂಸಾರವಾಗಿದೆ - ಎಂದು ಭಗವಂತನು ಹೇಳಿರುತ್ತಾನೆ.

## ಕ್ಷೇತ್ರಜ್ಞನ ಪರಮಾರ್ಥಸ್ವರೂಪ

ಈವರೆಗೆ ಪ್ರಕೃತಿಪುರುಷರ ಮಿಥ್ಯಾಸಂಬಂಧದಿಂದಲೇ ಸಂಸಾರ ವುಂಟಾಗಿದೆ- ಎಂದು ಭಗವಂತನು ತಿಳಿಸಿರುವದನ್ನು ಪ್ರಸ್ತಾಪಿಸಲಾಗಿದೆ. ಈ ಸಂಬಂಧವು ಕಲ್ಪಿತವಾದ್ದರಿಂದಲೇ ಜ್ಞಾನದಿಂದ ಎಂದರೆ ಪ್ರಕೃತಿ ಪುರುಷರನ್ನು ವಿವೇಕಮಾಡಿ ಪುರುಷನು ಬ್ರಹ್ಮವೇ, ಪ್ರಕೃತಿಯು ಅವಿದ್ಯಾ ಕಲ್ಪಿತವೇ - ಎಂದು ನಿಶ್ಚಯಿಸಿಕೊಂಡವನಿಗೆ ಈಗಲೇ ಇಲ್ಲಿಯೇ ಮೋಕ್ಷ ಪ್ರಾಪ್ತಿಯಾಗುವದೆಂದು ಭಗವಂತನು ತಿಳಿಸಲು ಹೊರಟಿರುತ್ತಾನೆ. ಈ ವಿಚಾರಸರಣಿಯು ಕಠಿನವಾಗಿ ಕಂಡರೂ ಇದೊಂದೇ ಮುಕ್ತಿಮಾರ್ಗ ವಾಗಿರುವದರಿಂದ ಜಿಜ್ಞಾಸುಗಳು ಈ ವಿಚಾರಕ್ರಮವನ್ನೇ ಅವಲಂಬಿಸಲೇ ಬೇಕಾಗಿದೆ. ಆದ್ದರಿಂದ ಅದನ್ನೇ ವಿಚಾರಮಾಡೋಣ.

ಗೀತೆಯ ೧೩-೨೨ನೆಯ ಅಧ್ಯಾಯದಲ್ಲಿರುವ ಈ ಶ್ಲೋಕವನ್ನು ನೋಡಿರಿ:

**ಉಪದ್ರಷ್ಟಾನುಮಂತಾ ಚ ಭರ್ತಾ ಭೋಕ್ತಾ ಮಹೇಶ್ವರಃ ।**
**ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ ಪುರುಷಃ ಪರಃ ॥**

ಇದರ ಅಬಿಪ್ರಾಯವು ಹೀಗಿದೆ : ಇದೇ ದೇಹದಲ್ಲಿಯೇ ಇರುವ ಈ ಪುರುಷನು- ಎಂಬ ಮಾತು ವ್ಯವಹಾರದೃಷ್ಟಿಯಿಂದ ನೋಡಿದರೆ ಜೀವಾತ್ಮನೆಂದು ತಿಳಿದುಬರುತ್ತದೆ. ಆದರೆ ಅವನನ್ನು ಪರಃ ಪುರುಷಃ ಎಂದು ಭಗವಂತನೇ ನಿರ್ದೇಶಮಾಡಿ ಅವನು ಪರಮಪುರುಷನೇ - ಪರ ಬ್ರಹ್ಮವೇ- ಎಂದು ತಿಳಿಸಿರುತ್ತಾನೆ : ಮತ್ತು ಈ ಜೀವಪರಮಾತ್ಮರ ಐಕ್ಯ ವನ್ನು ಸ್ಫುಟಗೊಳಿಸುವದಕ್ಕಾಗಿ ಉಪದ್ರಷ್ಟಾ ಮುಂತಾದ ಆರು ವಿಶೇಷಣ ಗಳನ್ನೂ ಕೊಟ್ಟಿರುತ್ತಾನೆ. ಈ ವಿಶೇಷಣಗಳನ್ನು ಶ್ರೀಶಂಕರಾ- ಚಾರ್ಯರು ಹೀಗೆ ವಿವರಿಸಿದ್ದಾರೆ : (೧) ಉಪ ಎಂದರೆ ಹತ್ತಿರದಲ್ಲಿ ಇದ್ದು ಕೊಂಡು- ಆದರೆ ತಾನು ಆ ಪ್ರಕೃತಿಗೆ ಅಂಟಿಕೊಳ್ಳದೆ ದೇಹೇಂದ್ರಿಯಾದಿ ಗಳ ವ್ಯಾಪಾರಗಳನ್ನೆಲ್ಲ ಬೆಳಗುವವನು : ಉದಾಹರಣೆ- ಒಂದು ಯಜ್ಞವು ನಡೆಯುತ್ತಿರುವಾಗ ಯಜಮಾನನೂ ಋತ್ವಿಜರೂ ಕೆಲಸಮಾಡುತ್ತಿರು ವಲ್ಲಿ ತಾನು ಏನನ್ನೂ ಮಾಡದೆ- ಆದರೆ ಆ ಯಜಮಾನಾದಿಗಳ ಕೆಲಸ

ಗಳಲ್ಲಿನ ಗುಣದೋಷಗಳನ್ನು ನೋಡುತ್ತಾ ಇರುವನಲ್ಲ, ಅವನು ಉಪದ್ರಷ್ಟೃವು. ಹಾಗೆಯೇ ಕಾರ್ಯಕರಣಗಳು ವ್ಯಾಪಾರಮಾಡುತ್ತಿರುವಲ್ಲಿ ಈ ಆತ್ಮನು ತಾನು ಅವುಗಳಿಗಿಂತ ವಿಲಕ್ಷಣನಾಗಿ ಆಯಾ ಕಾರ್ಯಕರಣಗಳ ಕೆಲಸಗಳನ್ನು ಹತ್ತಿರದಲ್ಲಿಯೇ ಇದ್ದುಕೊಂಡು ಬೆಳಗುತ್ತಿರುವನು. (೨) ಅನುಮಂತಾ - ಎಂದರೆ ಅನುಮೋದನೆಯನ್ನು ನೀಡುವವನು- ಎಂದರೆ ಸೂರ್ಯನು ಬೆಳಗುತ್ತಿರುವಲ್ಲಿ ಜಗತ್ತಿನ ಎಲ್ಲಾ ಕೆಲಸಗಳೂ ನಡೆಯುತ್ತಿರುವಂತೆ ಆತ್ಮನು ಬೆಳಗುತ್ತಿರುವಾಗ ಆ ಬೆಳಕಿನಿಂದಲೇ ದೇಹೇಂದ್ರಿಯಾದಿಗಳೆಲ್ಲವೂ ವ್ಯಾಪಾರಮಾಡುತ್ತವೆ. ಆದ್ದರಿಂದ 'ಅನುಮಂತಾ' ಎಂದು ಕರೆಯಲಾಗಿದೆ. (೩) ಭರ್ತಾ - ಎಂದರೆ ಭರಿಸುವವನು. ಇವರ ವಿವರ : ದೇಹೇಂದ್ರಿಯಮನೋಬುದ್ಧ್ಯಾದಿಗಳನ್ನು ಬೆಳಗುತ್ತಾ ಅವುಗಳ ಮೂಲಕ ನಡೆಯುವದು, ನೋಡುವದು, ಕೇಳುವದು- ಮುಂತಾದ ಕೆಲಸಗಳನ್ನು ನಿರ್ವಹಿಸುವಂತೆ ಕಂಡುಬರುವದರಿಂದ ಭರ್ತನೆನಿಸಿರುತ್ತಾನೆ. (೪) ಭೋಕ್ತಾ- ಎಂದರೆ ಬೆಂಕಿಯ ಬಿಸಿಯಂತೆ ನಿತ್ಯಚೈತನ್ಯಸ್ವರೂಪನಾದ ಈ ಆತ್ಮನು ಬುದ್ಧಿಯಲ್ಲಿ ಉಂಟಾಗುವ ಸುಖ, ದುಃಖ, ಮೋಹ- ಮುಂತಾದ ವೃತ್ತಿಗಳನ್ನು ತನ್ನ ಚೈತನ್ಯಸ್ವರೂಪದಿಂದ ವ್ಯಾಪಿಸಿಕೊಂಡವನಾಗಿ ಬೆಳಗುತ್ತಾನಾದ್ದರಿಂದ ಭೋಕ್ತಾ ಎನಿಸಿರುತ್ತಾನೆ. (೫) ಮಹೇಶ್ವರನು- ಎಂದರೆ ಸರ್ವಾತ್ಮನಾಗಿದ್ದುಕೊಂಡು ಸ್ವತಂತ್ರನೂ ಆಗಿರುವದರಿಂದ ಆತನನ್ನು ಮಹೇಶ್ವರನೆಂದಿದೆ. (೬) ಪರಮಾತ್ಮನೆಂದರೆ: ದೇಹಾದಿಗಳನ್ನೇ ನಾವು ಆತ್ಮನೆಂದು ಕಲ್ಪಿಸಿಕೊಂಡಿರುವಲ್ಲಿ- ಅವುಗಳೆಲ್ಲಕ್ಕೂ ಒಳಗಿದ್ದುಕೊಂಡಿರುವವನಾದ್ದರಿಂದ ಪರಮಾತ್ಮನೆನಿಸಿರುತ್ತಾನೆ.

ಹೀಗೆ ಮೇಲುನೋಟಕ್ಕೆ ಕ್ಷೇತ್ರಜ್ಞನೆನಿಸಿರುವ ಈ ಆತ್ಮನು ವಿಚಾರಮಾಡಿ ಚೆನ್ನಾಗಿ ವಿಂಗಡಿಸಿ ಅನಾತ್ಮವಾದ ಬುದ್ಧ್ಯಾದಿಗಳಿಗಿಂತ ಅತ್ಯಂತ ಒಳಗಿರುವ ಚೈತನ್ಯಪರ್ಯಂತವಾಗಿ ವಿವೇಕಮಾಡಿದಾಗ ಇವನೇ ಪರಬ್ರಹ್ಮನೆಂದು ತಿಳಿದುಬರುತ್ತಾನೆ. ಈ ವಿಷಯದಲ್ಲಿ ಭಗವಂತನೇ 'ಕ್ಷೇತ್ರಜ್ಞ (ಜೀವ)ನನ್ನು ನಾನು ಎಂದೇ ತಿಳಿ' ಎಂಬುದಾಗಿ ಘಂಟಾ

ಘೋಷವಾಗಿ ಹೇಳಿರುತ್ತಾನೆ. ಅಲ್ಲದೆ ಕ್ಷೇತ್ರವೆಂದರೆ ಯಾವಯಾವದು ? ಎಂದು ಪಟ್ಟಿಮಾಡಿ ವಿಂಗಡಿಸಿ ಅನಂತರ ಕ್ಷೇತ್ರಜ್ಞನನ್ನು ಹೇಳುವ ಮುಂಚೆ ಅವನ ನಿಜರೂಪವನ್ನು ತಿಳಿಯಲು ಅಗತ್ಯವಾದ ಅಮಾನಿತ್ವಾದಿಸಾಧನ ಗಳನ್ನೂ ಹೇಳಲಾಗಿದೆ. 'ಕ್ಷೇತ್ರಜ್ಞನೆಂದರೆ ಯಾರು ? ಅವನ ಮಹಿಮೆಯು ಏನು ? ಎಂಬಿದನ್ನು ಕೇಳು' ಎಂದು ಉಪಕ್ರಮಿಸಿದ ಭಗ ವಂತನು ಮುಂದೆ ಉಪದ್ರಷ್ಟಾ- ಇತ್ಯಾದಿ ವಿವರಣೆಗಳಿಂದ ಕ್ಷೇತ್ರಜ್ಞನನ್ನು ಪರಮಾತ್ಮನೆಂದೇ ತಿಳಿಸಿರುತ್ತಾನೆ.

ಇನ್ನು ಕ್ಷೇತ್ರಜ್ಞನೇ ಪರಮಾತ್ಮನೆನಿಸಿದಾಗ ಅವನು ಇರುವಂತೆಯೇ ತಿಳಿಸಬೇಕಾದ ಸಂದರ್ಭವು ಒದಗಲಾಗಿ ಎಲ್ಲೆಲ್ಲಿಯೂ ಕೈಕಾಲುಗಳುಳ್ಳ ವನು ಎಂದಾರಂಭಿಸಿ ಯಾವ ದೇಂಹೇದ್ರಿಯಗಳೂ ಇಲ್ಲದವನು, ಗುಣ ಗಳಿಲ್ಲದವನು- ಎಂದೇ ವಿಸ್ತರಿಸಿ ಹೇಳಿದೆ. ಇದರ ಅಭಿಪ್ರಾಯವೇನೆಂದರೆ ಸಾಮಾನ್ಯಜನರ ದೃಷ್ಟಿಯಿಂದ ದೇಹೇಂದ್ರಿಯಾದಿಗಳನ್ನು ಅಧ್ಯಾರೋಪ ಮಾಡಿ ಅನಂತರ ಯಾವ ದೇಹೇಂದ್ರಿಯಾದಿಗಳೂ ಇಲ್ಲವೆಂದು ಅಪವಾದ ಮಾಡಲಾಗಿದೆ. ಹೀಗೆ ಕ್ಷೇತ್ರಜ್ಞ- ಈಶ್ವರರ ಏಕತ್ವವನ್ನು ಪ್ರತಿಪಾದನೆ ಮಾಡಿ ಕಡೆಯಲ್ಲಿ ಈ ಏಕತ್ವಜ್ಞಾನಕ್ಕೆ ಪರಮಾತ್ಮಪ್ರಾಪ್ತಿಯೆಂಬ ಫಲವನ್ನೂ ಹೇಳಿದೆ. ವಿಚಾರಶೀಲರು ಈ ಸಮನ್ವಯವನ್ನು ಅನುಸಂಧಾನಮಾಡ ಬೇಕು.

------

## ೩. ಕ್ಷೇತ್ರಜ್ಞನು ಪರಮಾತ್ಮನೇ

ಈವರೆಗೆ ವಿವರಿಸಿರುವಂತೆ ಕ್ಷೇತ್ರಜ್ಞನನ್ನು ಪರಮಾತ್ಮನೆಂದೇ ತಿಳಿದದ್ದಾಯಿತು. ಇನ್ನು ಪರಮಾತ್ಮನ ಸ್ವರೂಪಭೂತವೇ ಆಗಿರುವ ಜ್ಞಾನ- ಸುಖಗಳು ಸಹ ಕ್ಷೇತ್ರಜ್ಞನ ನಿಜಸ್ವಭಾವವಾಗಿವೆ- ಎಂದು ತಿಳಿಸುತ್ತಾರೆ. ಗೀತೆಯ ಶ್ಲೋಕಗಳಲ್ಲಿರುವಂತೆ 'ಜ್ಯೋತಿಷಾಮಪಿ ತತ್ ಜ್ಯೋತಿಃ' 'ಉಪದ್ರಷ್ಟಾ' ಎಂಬೀ ವಿಶೇಷಣಗಳಿಂದ ಕ್ಷೇತ್ರಜ್ಞನ ಜ್ಞಾನವು ಆತ್ಮನ ಸ್ವರೂಪಭೂತವೇ ಆಗಿರುವ ಜ್ಞಾನವೆಂದೂ ಸುಖವು ಕೂಡ ಆತ್ಮ

ಸ್ವರೂಪಕ್ಕೇ ಸೇರಿದ್ದೆಂದೂ ತಿಳಿದುಬರುತ್ತದೆ. ಗೀತೆಯ 'ಯಥಾ ಪ್ರಕಾಶಯತ್ಯೇಕಃ' ಎಂಬ ಶ್ಲೋಕದಲ್ಲಿ ಈ ವಿಷಯವನ್ನು ಕಂಠೋಕ್ತವಾಗಿಯೇ ಹೇಳಿರುತ್ತದೆ. ಹಾಗೆಯೇ ''ಪ್ರಶಾಂತಮನಸಂ..... ಎಂಬ ಶ್ಲೋಕದಲ್ಲಿಯೂ ''ಯುಂಜನ್ನೇವಂ ಸದಾತ್ಮಾನಂ'' ಎಂಬಲ್ಲಿಯೂ 'ಸುಖ' ಶಬ್ದವನ್ನು ಆತ್ಮಸ್ವರೂಪಭೂತವಾದ ಸುಖವೆಂಬರ್ಥದಲ್ಲಿಯೇ ಪ್ರಯೋಗಿಸಿದೆ.

ಇನ್ನು ಕ್ಷೇತ್ರಜ್ಞನು, ಹೇಗೇ ವಿಚಾರಮಾಡಿದರೂ ಕ್ಷೇತ್ರಧರ್ಮಗಳ ಸಂಪರ್ಕವಿಲ್ಲದವನೆಂದೇ ತಿಳಿದುಬರುತ್ತದೆ. ಹೇಗೆಂದರೆ ''ಕ್ಷೇತ್ರಜ್ಞನನ್ನು ನಾನೆಂದು ತಿಳಿ'' ಎಂದು ಭಗವಂತನು ಹೇಳಿರುವದರಿಂದ, ಆತ್ಮನು ಸರ್ವೋಪಾಧಿರಹಿತನೂ ನಿರ್ವಿಶೇಷವಾದ ಬ್ರಹ್ಮಕ್ಕಿಂತ ಅಭಿನ್ನನೂ ಆಗಿರುವದರಿಂದ ಕ್ಷೇತ್ರಜ್ಞನ ಪರಮಾರ್ಥಸ್ವರೂಪವು ಪರಬ್ರಹ್ಮವೇ ಆಗಿರುತ್ತದೆ. ಇನ್ನು 'ಪ್ರಕೃತ್ಯೈವ ಚ ಕರ್ಮಾಣಿ' ಎಂಬಲ್ಲಿ ಕರ್ಮಗಳೆಲ್ಲವೂ ಪ್ರಕೃತಿಯಿಂದಲೇ ಮಾಡಲ್ಪಡುವವು- ಎಂದು ಅವಧಾರಣೆಮಾಡಿ ಹೇಳಿರುವದರಿಂದ ಪುರುಷನನ್ನು ಬೇರ್ಪಡಿಸಲಾಗಿದೆ. ಆದರೆ ಪ್ರಕೃತಿಯು ಕರ್ತೃವೇ- ಎಂದೇನೂ ಹೇಳಿರುವದಿಲ್ಲ. ಇನ್ನು 'ಸರ್ವೇಂದ್ರಿಯ ವಿವರ್ಜಿತಮ್' ಎಂದು ಆತ್ಮನನ್ನು ತಿಳಿಸಿರುವದರ ಮೂಲಕ ಯಾವ ಕರ್ಮ ಸಾಧನಗಳೂ ಆತ್ಮನಿಗೆ ಸೇರಿಲ್ಲವೆಂದೂ ಗೊತ್ತಾಗುತ್ತದೆ. ಹಾಗೆಯೇ 'ಅಚರಂ ಚರಮೇವ ಚ' ಎಂಬ ಮಾತಿನಿಂದ ಕರ್ತೃವಿಗೆ ಕರ್ಮ ಸಾಧನವಾದವುಗಳೆಲ್ಲವೂ ಆತ್ಮನೆಂದೇ ತಿಳಿಸಿದಂತಾಗಿದೆ. ಆದ್ದರಿಂದ ಮಾಡಲಿರುವ ಎಲ್ಲಾ ಕಾರ್ಯಗಳೂ ಪ್ರಕೃತಿಯನ್ನೇ ಆಶ್ರಯಿಸಿದ್ದರೂ ಆತ್ಮನೇ ಮಾಡಿದಂತೆ ಅವಭಾಸವಾಗುತ್ತದೆ- ಎಂಬರ್ಥವನ್ನು ಸ್ವೀಕರಿಸಬೇಕಾಗಿದೆ. ಹೀಗೆಯೇ 'ಅಕರ್ತಾರಮ್' ಎಂಬ ವಿಶೇಷಣವೂ ಸಹ ಕರ್ತೃತ್ವವನ್ನು ಮಾತ್ರವೇ ನಿಷೇಧಿಸುತ್ತದೆ- ಎಂದೂ ಭ್ರಾಂತರಾಗಬಾರದು. ಏಕೆಂದರೆ ಇಲ್ಲಿ ಆತ್ಮನು ಕರ್ತೃವೊ, ಅಕರ್ತೃವೊ- ಎಂಬಿದು ಪ್ರಕೃತವಾಗಿಲ್ಲ. ಮತ್ತೇನೆಂದರೆ 'ಸಮಂ ಸರ್ವೇಷು ಭೂತೇಷು' ಎಂದಂತೆ ಎಲ್ಲೆಲ್ಲಿಯೂ ಇದ್ದುಕೊಂಡಿರುವ ಪರಬ್ರಹ್ಮದ ನಿರ್ವಿಶೇಷತ್ವ

ವನ್ನು ಪ್ರಶಂಸೆಮಾಡುವ ಸಲುವಾಗಿಯೇ ಈ ಪ್ರಕರಣವು ಹೊರಟಿರುತ್ತದೆ. ಇದನ್ನು ಭಾಷ್ಯಕಾರರು ೧೩ - ೨೯ನೆಯ ಶ್ಲೋಕದ ಅವತರಣಿಕೆಯಲ್ಲಿ ಹೀಗೆ ತಿಳಿಸಿದ್ದಾರೆ : ''ಎಲ್ಲಾ ಭೂತಗಳಲ್ಲಿಯೂ ಸಮನಾಗಿರುವ ಭಗವಂತನನ್ನು ಕಂಡುಕೊಂಡವನು ಯಾರನ್ನೂ ಹಿಂಸಿಸುವದಿಲ್ಲ- ಎಂಬಿದು ಸರಿಯಲ್ಲ ; ಏಕೆಂದರೆ ಆಯಾ ಗುಣಕರ್ಮಗಳ ವೈಲಕ್ಷಣ್ಯಗಳಿಂದ ಎಲ್ಲಾ ಪ್ರಾಣಿಗಳಲ್ಲಿಯೂ ಬೇರೆಬೇರೆಯಾಗಿಯೇ ಆಗಿ ಆತ್ಮನು ಕಂಡುಬರುತ್ತಿದ್ದಾನಲ್ಲವೆ ?'' ಎಂದು ಆಶಂಕಿಸಿ ಉತ್ತರವನ್ನು ಹೀಗೆ ಹೇಳಿದ್ದಾರೆ : ''ಹಾಗಲ್ಲ ; ಉಪಾಧಿಗಳ ಸಂಬಂಧದಿಂದ ವಿಲಕ್ಷಣವಾಗಿ ಕಂಡುಬಂದರೂ ಕ್ಷೇತ್ರಜ್ಞನಾದ ಆತ್ಮನು ಎಲ್ಲಾ ಉಪಾಧಿಗಳನ್ನೂ ಮೀರಿದವನಾಗಿದ್ದು ಅಕರ್ತೃವಾಗಿರುವದರಿಂದ ಅಂಥ ಆತ್ಮನನ್ನೇ ಎಲ್ಲಾ ಪ್ರಾಣಿಗಳಲ್ಲಿಯೂ ಕಂಡುಕೊಳ್ಳುವವನೇ ಸಮ್ಯಗ್ದರ್ಶಿಯೇ ಹೊರತು ಭೇದವನ್ನು ಕಾಣುವವನಲ್ಲ ; ಏಕೆಂದರೆ ನಿರ್ವಿಶೇಷನಾದ ಆತ್ಮನು ಆಕಾಶದಂತೆ ಅಖಂಡನಾಗಿರುವದರಿಂದ ಆತ್ಮನಲ್ಲಿ ಭೇದವಿದೆಯೆಂಬುದಕ್ಕೆ ಯಾವ ಪ್ರಮಾಣವೂ ಇರುವದಿಲ್ಲ'' ಎಂದೇ ತಿಳಿಸಿರುತ್ತಾರೆ.

ಈಗ ಕ್ಷೇತ್ರಕ್ಷೇತ್ರಜ್ಞರ ಜ್ಞಾನವು ಎಂಥ ಸ್ವರೂಪದ್ದಾಗಿರುವದು ? ಎಂಬಿದನ್ನು ನೋಡೋಣ. ಭಗವಂತನ ಅಭಿಪ್ರಾಯದಂತೆ ಕ್ಷೇತ್ರವನ್ನೂ ಕ್ಷೇತ್ರಜ್ಞನನ್ನೂ ವಿಂಗಡಿಸಿಕೊಂಡು ಕ್ಷೇತ್ರಜ್ಞನು ಕ್ಷೇತ್ರಕ್ಕಿಂತ ಅತ್ಯಂತ ವಿಲಕ್ಷಣನೆಂದು ತಿಳಿಯುವದೇ ಭಗವಂತನ ಅಭಿಪ್ರಾಯಕ್ಕೆ ಒಪ್ಪಾಗಿರುತ್ತದೆ. ಆದ್ದರಿಂದಲೇ ''ಕ್ಷೇತ್ರಕ್ಷೇತ್ರಜ್ಞಯೋರೇವಮಂತರಂ ಜ್ಞಾನಚಕ್ಷುಷಾ'' ಎಂದು ಉಪಸಂಹಾರದಲ್ಲಿ ಹೇಳಲಾಗಿದೆ. ಆದರೆ ಇಲ್ಲಿ ಆತ್ಮಸ್ವರೂಪಭೂತವಾದ ಜ್ಞಾನವು ವಿವಕ್ಷಿತವಾಗಿಲ್ಲ. ಹೇಗೆಂದರೆ ಕ್ಷೇತ್ರ-ಕ್ಷತ್ರೇಜ್ಞರ ವೈಲಕ್ಷಣ್ಯಜ್ಞಾನವು ಕ್ಷೇತ್ರಜ್ಞನ ಸ್ವರೂಪಭೂತವಾದ ಜ್ಞಾನವನ್ನು ಅರಿಯುವದಕ್ಕೆ ಸಮರ್ಥವಾಗುತ್ತದೆ- ಎಂದು ಹೇಳುವದು ಯುಕ್ತವಾಗುವದಿಲ್ಲ. ಏಕೆಂದರೆ ಕ್ಷೇತ್ರಜ್ಞನ ಸ್ವರೂಪಜ್ಞಾನವು ಕ್ಷೇತ್ರದಲ್ಲಿ ಅಡಕವಾಗಿಲ್ಲ. ಅದನ್ನು ಜ್ಞೇಯವೆಂದು ಬೇರೆಯಾಗಿ ವಿಂಗಡಿಸಿ ಹೇಳಲಾಗಿದೆ. ಭಾಷ್ಯಕಾರರು ಬರೆದಿರುವದೇನೆಂದರೆ : ''ಶಾಸ್ತ್ರಾಚಾರ್ಯೋ-ಪದೇಶದಿಂದ ಉಂಟಾಗುವ ಆತ್ಮಪ್ರತ್ಯಯರೂಪವಾದ ಜ್ಞಾನವು ಕಣ್ಣಿನಂತೆ

ಇದೆ. ಆದ್ದರಿಂದ ಅದನ್ನು ಜ್ಞಾನಚಕ್ಷುವೆಂದೂ ಕರೆಯಲಾಗುತ್ತದೆ. ಈ ಜ್ಞಾನವು ಯಾರಿಗೆ ಉಂಟಾಗಿರುವದೋ ಅವರು ಭೂತಪ್ರಕೃತಿಯಿಂದ ಬಿಡುಗಡೆಯನ್ನು ಹೊಂದುತ್ತಾರೆ.'' ಆದ್ದರಿಂದ ಈ ಜ್ಞಾನವು ಪ್ರಕೃತಿಯ ವಿಶೇಷ ಲಕ್ಷಣಗಳನ್ನಾಗಲಿ, ಪುರುಷನ ಸ್ವರೂಪವನ್ನಾಗಲಿ ತಿಳಿಸುವದಿಲ್ಲ. ಮತ್ತೇನೆಂದರೆ ಶಾಸ್ತ್ರಾಚಾರ್ಯರ ಉಪದೇಶಗಳ ಮೂಲಕ ಜಿಜ್ಞಾಸುವು ತಾನೇ ತನ್ನಲ್ಲಿಯೇ ಪಡೆದುಕೊಳ್ಳುವಂಥ ಅನುಭವರೂಪವಾದ ಅರಿವು. ಇದನ್ನೇ ಭಾಷ್ಯಕಾರರು ''ಆತ್ಮಪ್ರತ್ಯಯಿಕಜ್ಞಾನ''ವೆಂದು ಕರೆದಿರುತ್ತಾರೆ. ಆ ಜ್ಞಾನಕ್ಕೆ ಸಾಧನಗಳಾಗಿಯೇ ಅಮಾನಿತ್ವಾದಿಗಳನ್ನೂ ಹೇಳಲಾಗಿದೆ.

---------

## ೪. ಜ್ಞಾನದಿಂದ ಸದ್ಯೋಮುಕ್ತಿ

ಅಧ್ಯಾತ್ಮಶಾಸ್ತ್ರದಲ್ಲಿ ಜ್ಞಾನವೆಂದರೆ ಬ್ರಹ್ಮವನ್ನು ಅರಿತುಕೊಂಡು ಜ್ಞಾನಸಮಕಾಲದಲ್ಲಿಯೇ ಮುಕ್ತನಾಗುವ ಸ್ವಭಾವದ ಅರಿವು- ಎಂದು ಪ್ರತಿಪಾದಿಸಲಾಗಿದೆ. ಆದ್ದರಿಂದಲೇ ಅಮಾನಿತ್ವಾದಿಜ್ಞಾನಸಾಧನಗಳನ್ನೂ ಪೂರ್ವಭಾವಿಯಾಗಿ ಹೇಳಿರುತ್ತದೆ. ಹೀಗೆ ಈ ಜ್ಞಾನವು ಇಂದ್ರಿಯಜನ್ಯವಾದ ಜ್ಞಾನಕ್ಕಿಂತ ವಿಲಕ್ಷಣವಾಗಿದೆ. ಇಂದ್ರಿಯಜನ್ಯಜ್ಞಾನವಾದರೋ, ಪ್ರಾಕೃತರಿಗೂ ಆಗುತ್ತದೆ. ಅದಕ್ಕೆ ಅಮಾನಿತ್ವಾದಿಸಾಧನಗಳೇನೂ ಬೇಕಿರುವದಿಲ್ಲ. ಇನ್ನು ಲೋಕದಲ್ಲಿ ಕಂಡುಬರುವ ಚಿತ್ರ, ಶಿಲ್ಪ, ನೃತ್ಯ, ಗಾನ, ಗ್ರಂಥರಚನೆ, ಕಾವ್ಯರಚನೆ ಮುಂತಾದ ಪರಿಚ್ಛಿನ್ನಜ್ಞಾನಗಳು ವ್ಯವಹಾರದಲ್ಲಿ ಜ್ಞಾನವಿಶೇಷಗಳೆಂದೇ ಪರಿಗಣಿಸಲ್ಪಟ್ಟಿವೆ. ಆದರೆ ಆತ್ಮಜ್ಞಾನವು ಈ ಗುಂಪಿಗೆ ಸೇರಿದ್ದಲ್ಲ. ಏಕೆಂದರೆ ಇದು ಪರಿಪೂರ್ಣವಾದುದು. ಈ ಜ್ಞಾನವು ಉಂಟಾದದ್ದೇ ಆದರೆ ಇನ್ನು ತಿಳಿಯಬೇಕಾದದ್ದೇನೂ ಉಳಿಯುವದಿಲ್ಲವೆಂದು ಭಗವಂತನೇ ತಿಳಿಸಿರುತ್ತಾನೆ. ಆದ್ದರಿಂದ ಇದು ಬುದ್ಧಿಜನ್ಯವಾದ ಜ್ಞಾನವಲ್ಲ. ಇದು ಸಿದ್ಧಿಸಬೇಕಾದರೆ ಹೊರಗಿನ ಎಲ್ಲಾ ವಿಷಯಗಳಲ್ಲಿಯೂ ವೈರಾಗ್ಯವೂ ಔದಾಸೀನ್ಯವೂ ಸಾಧಕನಿಗೆ ಕರಗತವಾಗಿರಬೇಕು. ಅನಂತರವೂ ಭಗವಂತನು ''ಅಧ್ಯಾತ್ಮಜ್ಞಾನನಿತ್ಯತ್ವ'' ''ತತ್ತ್ವ

ಜ್ಞಾನಾರ್ಥ ದರ್ಶನ'' ಎಂಬ ಮತ್ತೆರಡು ಸಾಧನಗಳನ್ನು ಹೇಳಿರುತ್ತಾನೆ. ಇವುಗಳಿಗೆ ಶ್ರೀ ಶಂಕರಾಚಾರ್ಯರು ಕೊಟ್ಟಿರುವ ವಿವರವೇನೆಂದರೆ : (೧) ಆತ್ಮ-ಅನಾತ್ಮ- ಮುಂತಾದ ಪದಾರ್ಥಗಳ ವಿಂಗಡವಾದ ಹಾಗೂ ಶಾಸ್ತ್ರೀಯವಾದ ತಿಳಿವಳಿಕೆ (೨) ಅಮಾನಿತ್ವವೇ ಮುಂತಾದ ಜ್ಞಾನ ಸಾಧನಗಳ ಅನುಷ್ಠಾನದಿಂದ ಪರಿಪಕ್ವವಾದ ತತ್ತ್ವಜ್ಞಾನವು- ಅದರ ಅರ್ಥ (ಪ್ರಯೋಜನ)ವೆಂದರೆ ಮೋಕ್ಷವು ಅಥವಾ ಸಂಸಾರದಿಂದ ಬಿಡುಗಡೆಯು- ಅದನ್ನು ಕುರಿತ ಚಿಂತನೆಯೇ ತತ್ತ್ವಜ್ಞಾನಾರ್ಥದರ್ಶನವು. ತತ್ತ್ವಜ್ಞಾನದ ಫಲವಾದ ಮುಕ್ತಿಯನ್ನು ಮನಗಂಡಾಗಲೇ ಅದಕ್ಕಾಗಿ ಪ್ರವರ್ತಿಸುವದು ಕಂಡುಬರುತ್ತದೆಯಲ್ಲವೆ ?- ಎಂಬ ವಿವರಣೆಯನ್ನು ಭಾಷ್ಯಕಾರರು ನೀಡಿರುತ್ತಾರೆ.

ಈಗ ಮತ್ತೊಮ್ಮೆ ಭಾಷ್ಯಕಾರರು ಹೆಚ್ಚು ಸ್ಪಷ್ಟವಾಗಿ ತಿಳಿಸಿರುವ ಜ್ಞಾನಸ್ವರೂಪವನ್ನು ನೋಡೋಣ. ಅದರ ವಿವರವು ಹೀಗಿದೆ : ''ಶಾಸ್ತ್ರಾಚಾರ್ಯರುಗಳ ಉಪದೇಶಗಳಿಂದಲೂ - ಮತ್ತು ಜ್ಞಾನವು ಹುಟ್ಟಿ ಪರಿಪಾಕವಾಗುವದಕ್ಕೆ ಕಾರಣವಾಗಿರುವ ಚಿತ್ತಶುದ್ಧಿ, ಅಮಾನಿತ್ವಾದಿಗಳು- ಮುಂತಾದವುಗಳನ್ನು ಬಯಸಿ ಉಂಟಾಗಲಿರುವ ಕ್ಷೇತ್ರಜ್ಞಪರಮಾತ್ಮರ ಏಕತ್ವರೂಪವಾದ ಯಾವ ಜ್ಞಾನವುಂಟೋ ಮತ್ತು ಕರ್ತೃತ್ವವೇ ಮುಂತಾದ ಕಾರಕಭೇದಬುದ್ಧಿಗೆ ಒಳಪಟ್ಟ ಕರ್ಮಗಳೆಲ್ಲದರ ಸಂನ್ಯಾಸದಿಂದೊಡಗೂಡಿರುವ ಸ್ವಾತ್ಮಾನುಭವ ನಿಶ್ಚಯರೂಪವಾದ ಸ್ಥಿತಿಯಲ್ಲಿ ನೆಲೆನಿಲ್ಲುವದೆಂಬುದೇನಿದೆಯೋ ಅದನ್ನೇ ಪರಾಜ್ಞಾನನಿಷ್ಠೆಯೆಂದು ಕರೆಯಲಾಗಿದೆ.''

ಹೀಗೆ ಪ್ರತ್ಯಕ್ಷಾದಿಪ್ರಮಾಣಗಳಲ್ಲಿ ಹೇಗೆ ನೇರಾಗಿ ಜ್ಞಾನವುಂಟಾಗುತ್ತದೆಯೋ ಹಾಗೆಯೇ ಶಾಸ್ತ್ರಪ್ರಮಾಣದಿಂದಲೂ ಚೊಕ್ಕವಾದ ಅರಿವಿನ ರೂಪವಾದ ಜ್ಞಾನವುಂಟಾಗಿಬಿಡುತ್ತದೆ. ಅದನ್ನೇ ಕ್ಷೇತ್ರಕ್ಷೇತ್ರಜ್ಞವಿವೇಕ ರೂಪವಾದ ಜ್ಞಾನವೆಂದು ಕರೆದಿರುತ್ತದೆ.

ಇನ್ನು ಈ ಆತ್ಮಜ್ಞಾನವು ಮಿಥ್ಯಾಜ್ಞಾನವನ್ನು ಕಳೆಯುವ ಮಾತ್ರದಿಂದಲೇ ಆ ಕೂಡಲೆ ಮುಕ್ತಿಯನ್ನು ಕೊಡುತ್ತದೆ ; ಕಾಲಾಂತರದಲ್ಲಲ್ಲ.

ಮತ್ತು ಭಾವನಾತ್ಮಕವಾದ ಉಪಾಸನೆಯು ದೇಹಪಾತವಾದ ಬಳಿಕ ಲೋಕಾಂತರದಲ್ಲಿ ಕ್ರಮಮುಕ್ತಿಯನ್ನು ಉಂಟುಮಾಡುವಂತೆಯೂ ಅಲ್ಲ-ಎಂದೂ ಭಗವಂತನು ಗೀತೆಯಲ್ಲಿ ಅಲ್ಲಲ್ಲಿ ತೋರಿಸಿರುತ್ತಾನೆ. ''ಯೋ ಮಾಂ ಪಶ್ಯತಿ'' (೬-೩೦) ಎಂಬ ಶ್ಲೋಕದ ಭಾಷ್ಯದಲ್ಲಿ ಶ್ರೀಶಂಕರಾಚಾರ್ಯರು ಹೀಗೆಂದಿದ್ದಾರೆ- ''ಆತ್ಮೈಕತ್ವದರ್ಶಿಯಾದವನಿಗೆ ಈಶ್ವರನಾದ ನಾನೂ ಪರೋಕ್ಷನಾಗುವದಿಲ್ಲ. ಹಾಗೆಯೇ ಅವನೂ ನನಗೆ ಪರೋಕ್ಷನಾಗುವದಿಲ್ಲ, ಏಕೆಂದರೆ ನಾನೂ ಅವನೂ ಏಕಾತ್ಮರೇ ಆಗಿರುತ್ತೇವೆ''. ಮತ್ತು ''ಸರ್ವಭೂತಸ್ಥಿತಂ ಯೋ ಮಾಂ'' (ಗೀ. ೬-೩೧) ಎಂಬ ಶ್ಲೋಕದಲ್ಲಿ ''ಸಮ್ಯಗ್ದರ್ಶಿಯಾದವನು ಎಲ್ಲಾ ರೀತಿಯಿಂದಲೂ-ಎಂದರೆ ಯೋಗಿಯಾಗಿರಲಿ, ಸಂನ್ಯಾಸಿಯಾಗಿರಲಿ ಅವನು ನನ್ನ ಪರಮಪದವಾದ ಸ್ಥಾನದಲ್ಲಿರುತ್ತಾನೆ- ಎಂದರೆ ಸದಾ ಮುಕ್ತನೇ ಆಗಿರುತ್ತಾನೆ. ಅವನು ಮುಕ್ತಿಯನ್ನು ಪಡೆಯುವದರಲ್ಲಿ ಯಾರಿಂದಲೂ ತಡೆಯಿರುವದಿಲ್ಲ.''

ಈಗ ಜ್ಞಾನದಿಂದ ನಾಶವಾಗಲಿರುವ ಅಜ್ಞಾನದ ತಿರುಳನ್ನು ವಿಚಾರ ಮಾಡಬೇಕಾಗಿದೆ. ಏಕೆಂದರೆ ಜ್ಞಾನವೆಂದರೇನು ? ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿರುವಂತೆಯೇ ಅಜ್ಞಾನದ ವಿಷಯದಲ್ಲಿಯೂ ಇದೆ. ಒಂದೆರಡು ಉದಾಹರಣೆಗಳು ಹೀಗಿವೆ : (೧) ಗೀತೆಯ 'ನ ಕರ್ತೃತ್ವಂ ನ ಕರ್ಮಾಣಿ' (೫-೧೪) ಎಂಬ ಶ್ಲೋಕದಲ್ಲಿ 'ಸ್ವಭಾವ' ಎಂಬ ಶಬ್ದಕ್ಕೆ ಅವಿದ್ಯಾಲಕ್ಷಣವಾದ ಪ್ರಕೃತಿ - ಎಂದರೆ ಮಾಯೆ- ಎಂದು ವಿವರಣೆಯನ್ನು ನೀಡಲಾಗಿದೆ. 'ದೈವೀ ಹ್ಯೇಷಾ ಗುಣಮಯೀ' ಎಂಬ ಶ್ಲೋಕವೂ ಈ ಗುಣಮಯವಾದ ಪ್ರಕೃತಿಯನ್ನೇ ತಿಳಿಸುತ್ತದೆ. ಇನ್ನು 'ಅಜ್ಞಾನೇನಾವೃತಂ ಜ್ಞಾನಮ್' (೫-೧೫) ಅಜ್ಞಾನವೆಂದರೆ 'ಮಾಡುತ್ತೇನೆ' 'ಮಾಡಿಸುತ್ತೇನೆ' ಮುಂತಾದ ರೂಪವಾದ ಅವಿವೇಕಪುರಸ್ಸರವಾದ ವ್ಯವಹಾರವು, ಇದನ್ನೇ ಅಜ್ಞಾನವೆಂದಿದೆ. ಮತ್ತು 'ಆವರಣ'ವೆಂದರೆ ಹೊರಗಿನ ವಿಷಯಗಳಿಂದ ಸೆಳೆಯಲ್ಪಡುವಿಕೆ ಎಂದೇ ಅಭಿಪ್ರಾಯ. ಹಾಗಲ್ಲದೆ ಸೂರ್ಯನಿಗೆ ಮೋಡವು ಮುಚ್ಚಿಕೊಂಡಂತೆ ಆತ್ಮನನ್ನು ಆವರಣಗೊಳಿಸುವ ರೂಪ

ವಾದದ್ದಲ್ಲ. ಇದನ್ನೇ 'ಕಾಮ'ವೆಂದೂ 'ಆವೃತಂ ಜ್ಞಾನಮೇತೇನ'' (೩.೩೯) ಎಂಬ ಶ್ಲೋಕದಲ್ಲಿ ವಿವರಿಸಲಾಗಿದೆ. ಏಕೆಂದರೆ ನಿತ್ಯಪ್ರಕಾಶ ಸ್ವರೂಪನಾದ ಆತ್ಮನನ್ನು ಯಾವ ಆವರಣವೂ ಮುಚ್ಚಲಾರದು. ಇನ್ನು ಆ ಅಜ್ಞಾನವನ್ನೂ ಆತ್ಮನೇ ಬೆಳಗುತ್ತಾನೆ- ಎಂಬಿದೂ ಅನುಭವದಿಂದ ತಿಳಿಯುತ್ತದೆ. ಹೀಗೆ ಪರಮಾತ್ಮನು ಯಾವಾಗಲೂ ಅಕರ್ತೃವೂ ಅಭೋಕ್ತೃವೂ ಆಗಿರುವನು- ಎಂಬಿದು ಸಿದ್ಧಾಂತವಾಗಿದೆ.

**ಅಜ್ಞಾನದ ಸ್ವರೂಪ** ಗೀತೆಯಲ್ಲಿ ''ಅಜ್ಞಾನೇನಾವೃತಂ ಜ್ಞಾನಂ'' (ಗೀ. ೫ - ೧೫) ಎಂಬಲ್ಲಿ ಅಜ್ಞಾನವೆಂದರೇನು ? ಎಂಬಿದನ್ನು ಕುರಿತು ಶ್ರೀ ಶಂಕರಾಚಾರ್ಯರು ಹೀಗೆ ವಿವರಿಸಿದ್ದಾರೆ : ಅಜ್ಞಾನವೆಂದರೆ ''ನಾನು ಮಾಡುತ್ತೇನೆ ಅಥವಾ ಮಾಡಿಸುತ್ತೇನೆ ; ಊಟಮಾಡುತ್ತೇನೆ ಅಥವಾ ಎಲ್ಲರಿಗೂ ಸಂತರ್ಪಣೆ ಮಾಡಿಸಿ ಊಟವನ್ನು ಹಾಕಿಸುತ್ತೇನೆ-'' ಎಂಬೀ ರೀತಿಯ ತಪ್ಪುತಿಳಿವಳಿಕೆಯು. ಇಂಥ ಅವಿವೇಕಪುರಸ್ಸರವಾದ ತಿಳಿವಳಿಕೆ ಯಿಂದಲೇ ಜೀವರುಗಳು ಸಂಸಾರಿಗಳೆನಿಸಿರುತ್ತಾರೆ'' ಇದರಿಂದ ತಿಳಿದು ಬರುವದೇನೆಂದರೆ : ಅಜ್ಞಾನವು ಒಂದು ಭಾವರೂಪವಾದ ವಸ್ತುವಲ್ಲ. ಆದ್ದರಿಂದಲೇ ಅದು ಆವರಣವೂ ಅಲ್ಲ. ಹಾಗಾದರೆ ಆವರಣ ವೆಂದರೇನು ? ಎಂದು ವಿಚಾರಿಸಲಾಗಿ ಅದು ಈ ಜೀವಾತ್ಮನು ತನ್ನ ಇಂದ್ರಿಯಮನೋಬುದ್ಧಿಗಳ ಮೂಲಕ ಹೊರಗಿನ ದೃಶ್ಯಗಳಿಂದ ಆಕರ್ಷಿತ ನಾಗಿರುವದೇ ಆಗಿದೆ, ಇಷ್ಟೇ ಹೊರತು ಮೋಡದಿಂದ ಸೂರ್ಯನು ಮುಚ್ಚಿದಂತಲ್ಲ (ಇದೂ ಸರಿಯಲ್ಲವೆಂದೂ ಈಗಾಗಲೇ ತಿಳಿಸಿದೆ). ಈ ಆವರಣವೂ 'ಕಾಮ'ದ ನಿಮಿತ್ತವೇ ಎಂದು ಭಗವಂತನೇ ''ಆವೃತಂ ಜ್ಞಾನಮೇತೇನ'' ಎಂಬಲ್ಲಿ ತಿಳಿಸಿರುತ್ತಾನೆ. ಇಲ್ಲಿಯೂ ಹೇಗೆ ಕತ್ತಲೆಯು ಒಂದು ಚಿಕ್ಕ ದೀಪದ ಸುತ್ತಲೂ ಆವರಿಸಿರುವಂತೆ ಮುಖ್ಯಾರ್ಥದಲ್ಲಿಯೇ ಜ್ಞಾನವನ್ನು ಆವರಿಸಿದೆ- ಎಂದಭಿಪ್ರಾಯವಲ್ಲ. ನಿಜವೇನೆಂದರೆ : ಅಜ್ಞಾನವನ್ನು ಕೂಡ- ಅದು ಇದೆ ಎನಿಸಿಕೊಳ್ಳಬೇಕಾದರೆ ಜ್ಞಾನವೇ ಅದನ್ನು ಬೆಳಗಬೇಕಾಗಿದೆ. ಅಥವಾ ಅಜ್ಞಾನವೆಂದರೆ ಮಿಥ್ಯಾಜ್ಞಾನಕ್ಕೆ ಕಾರಣವಾದ ಅವಿವೇಕವು ಹಾಗೂ ಸಂಶಯಜ್ಞಾನವು- ಎಂದೂ

ಅರ್ಥಮಾಡಬಹುದು. ಅದರಿಂದುಂಟಾದ ಮಿಥ್ಯಾಜ್ಞಾನವನ್ನು 'ಮುಹ್ಯನ್ತಿ' ಎಂದು ಇಲ್ಲಿ ಹೇಳಿದೆ. ''ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ'' ಎಂಬಲ್ಲಿ ಅಜ್ಞಾನ- ಸಂಶಯಗಳನ್ನು ಕಳೆದುಕೊಳ್ಳಲು ಶ್ರದ್ಧೆಯು ಜ್ಞಾನಕ್ಕೆ ಉಪಾಯವೆಂದೂ ತಿಳಿಸಿದೆ. ಅನಂತರ 'ಯೋಗ-ಸಂನ್ಯಸ್ತಕರ್ಮಾಣಮ್' ಎಂಬ ಶ್ಲೋಕದಲ್ಲಿ ಅಜ್ಞಾನ ಸಂಶಯಗಳು ಜ್ಞಾನದಿಂದ ಹೋಗುವವು- ಎಂದು ಹೇಳಿರುವದೂ ಯುಕ್ತವಾಗಿದೆ. ಆದರೆ ಅಜ್ಞಾನದಿಂದ ಸಂಶಯವೂ ಮಿಥ್ಯಾಜ್ಞಾನವೂ ಹುಟ್ಟುತ್ತವೆ- ಎಂಬ ವಿಷಯದಲ್ಲಿ 'ಮೇಧಾವೀ ಛಿನ್ನಸಂಶಯಃ' (೧೮-೧೯) ಎಂಬ ಶ್ಲೋಕದಲ್ಲಿ ಭಾಷ್ಯಕಾರರು ಹೇಳಿರುವಂತೆ ಮೇಧಾವಿಯಾದ್ದರಿಂದಲೇ ಸಂಶಯಗಳನ್ನು ಕತ್ತರಿಸಿಕೊಂಡಿರುತ್ತಾನೆ- ಎಂದು ಹೇಳಿರುವದು ಸಮಂಜಸವಾಗಿದೆ. ಹಾಗೆಯೇ 'ತೇಷಾಮೇವಾನುಕಂಪಾರ್ಥಮ್' ಎಂಬ ಶ್ಲೋಕದಲ್ಲಿ 'ಅಜ್ಞಾನಜಂ ತಮಃ ನಾಶಯಾಮಿ' ಎಂಬಲ್ಲಿ ಭಾಷ್ಯಕಾರರು ಅಜ್ಞಾನಜ- ಎಂದರೆ ಅವಿವೇಕದಿಂದುಂಟಾದ - ಎಂದೇ ವಿವರಣೆಯನ್ನು ನೀಡಿದ್ದಾರೆ. ಹೀಗೆ ಜ್ಞಾನನಾಶ್ಯವಾದ ಅಜ್ಞಾನವು ಕೇವಲ ವೃತ್ತಿ ರೂಪ ವಾಗಿರುತ್ತದೆ.

ಹೀಗೆ ಅವಿವೇಕರೂಪವಾದ ಅಜ್ಞಾನವು ಅಭಾವರೂಪವೇ ಆಗಿದ್ದರೂ- ಹೇಗೆ ಲೋಕದಲ್ಲಿ ಅನಿಶ್ಚಿತವಾದ ಎಂದರೆ ಹಗ್ಗವೆಂದು ನಿಶ್ಚಯಿಸಲ್ಪಡದೆ ಇರುವ ಹಗ್ಗವು ಹಾವಾಗಿ ತೋರುತ್ತದೆಯೋ ಹಾಗೆಯೇ ಆತ್ಮನೆಂದು ನಿಶ್ಚಯಮಾಡಲ್ಪಡದ ಸ್ಥಿತಿಯಲ್ಲಿ ಆ ಆತ್ಮನೇ ಪ್ರಪಂಚರೂಪ ವಾಗಿ ಅನಾತ್ಮವಾಗಿ ಕಲ್ಪಿಸಲ್ಪಡುತ್ತಾನೆ. ಸ್ವತಃ ನಿತ್ಯಶುದ್ಧಬುದ್ಧಮುಕ್ತ ಸ್ವಭಾವನಾಗಿರುವ ಆತ್ಮನು ಪರಿಚ್ಛಿನ್ನನಾಗಿ ತೋರುತ್ತಾನೆ. ಆದ್ದರಿಂದ ಈ ಮಿಥ್ಯಾಪ್ರತ್ಯಯವು ತೊಲಗಬೇಕೇ ಹೊರತು ವಸ್ತುವಿನಲ್ಲಿ ಯಾವ ಮಾರ್ಪಾಡೂ ಆಗಬೇಕಾಗಿಲ್ಲ. ಆದ್ದರಿಂದಲೇ ಕಡೆಯಲ್ಲಿ ಭಗವಂತನು ಅರ್ಜುನನನ್ನು ಕುರಿತು 'ಎಲೈ ಪಾರ್ಥನೆ, ನಿನ್ನ ಅಜ್ಞಾನರೂಪವಾದ ಮಿಥ್ಯಾಬುದ್ಧಿಯು ತೊಲಗಿತೆ ?' ಎಂದು ಕೇಳಿರುತ್ತಾನೆ. ಅದಕ್ಕೆ ಉತ್ತರ ವಾಗಿ ಅರ್ಜುನನು ಕೂಡ 'ನಷ್ಟೋ ಮೋಹಃ' ಎಂದಿರುತ್ತಾನೆ. 'ಅಜ್ಞಾನೇ

ನಾವೃತಂ ಜ್ಞಾನಮ್' ಎಂಬಲ್ಲಿಯೂ ಆವರಣವೆಂದರೆ ಅಜ್ಞಾನವು ಮಿಥ್ಯಾಜ್ಞಾನವನ್ನು ಉಂಟುಮಾಡುವ ಮೂಲಕ ಹೊರಮುಖವಾದ ತಿಳಿವಳಿಕೆಗೆ ಕಾರಣವಾಗಿದೆ- ಎಂಬ ತಾತ್ಪರ್ಯವನ್ನು ಗ್ರಹಿಸಬೇಕು.

ಇನ್ನೂ ವಿಚಾರಮಾಡಿದರೆ ಈ ಜ್ಞಾನಾಜ್ಞಾನಗಳ ಬಾಧ್ಯಬಾಧಕ ಭಾವವೂ ಪರಮಾರ್ಥದೃಷ್ಟಿಯಿಂದ ಹೇಳಿದ್ದಲ್ಲ. ಮತ್ತೇನೆಂದರೆ : ಅವಿದ್ಯಾದೃಷ್ಟಿಯಿಂದಲೇ ಎಂಬಿದನ್ನೂ ಮರೆಯಬಾರದು. ಏಕೆಂದರೆ ನಿತ್ಯಚೈತನ್ಯಜ್ಯೋತಿಸ್ವರೂಪನಾದ ಆತ್ಮನಿಗೆ ನಿಜವಾಗಿಯೂ ಅಜ್ಞಾನವು ಉಂಟಾಗಿದ್ದು ಅವನನ್ನು ಅದು ಆಶ್ರಯಿಸಿಕೊಂಡಿದೆ- ಎಂದು ಹೇಳುವದು ಸಾಧುವಾಗಲಾರದು ; ಹಾಗಿದ್ದಲ್ಲಿ ಅಜ್ಞಾನವು ಜ್ಞಾನದಿಂದ ಹೋಗಲಾಡಿಸಲ್ಪಡುತ್ತದೆ- ಎನ್ನಬಹುದಾಗಿತ್ತು. ಆದರೆ ಭಗವಂತನೇ ಹೇಳಿರುವದೇನೆಂದರೆ 'ಬ್ರಹ್ಮತತ್ತ್ವವು ಜ್ಯೋತಿಗಳಿಗೆಲ್ಲ ಮಿಗಿಲಾದ ಜ್ಯೋತಿಯಾಗಿದ್ದು ಕತ್ತಲೆಯ ಆಚೆಗಿದೆ'. ಈ ಮಾತು ಅಜ್ಞಾನವನ್ನು ಮೀರಿ ಆತ್ಮನು ಮಿಗಿಲಾಗಿದ್ದಾನೆಂಬುದನ್ನು ಸಮರ್ಥಿಸುತ್ತದೆ. ಈ ವಿಷಯ ದಲ್ಲಿ ಭಾಷ್ಯಕಾರರಾದ ಶ್ರೀಶಂಕರರು ಹೇಳಿರುವದು ಹೀಗಿದೆ : ''ಆತ್ಮನು ವಿಕಾರವಿಲ್ಲದವನಾಗಿದ್ದುಕೊಂಡೇ ಬುದ್ಧಿಯೇ ಮುಂತಾದವು ಗಳು ಇಂದ್ರಿಯಗಳ ಮೂಲಕ ತಂದು ಒದಗಿಸುವ ಶಬ್ದವೇ ಮುಂತಾದ ವಿಷಯಗಳ ರೂಪವಾದ ವೃತ್ತಿಯಿಂದ ಹೇಗೆ ಉಪಲಬ್ಧಾ (ಜ್ಞಾತಾ) ಎನಿಸಿಕೊಳ್ಳುವನೋ ಹಾಗೆಯೇ ಆತ್ಮಾನಾತ್ಮವಿವೇಕರೂಪವಾದ ಅದೇ ಬುದ್ಧಿವೃತ್ತಿಯಿಂದಲೇ 'ಜ್ಞಾನಿ ಎನಿಸಿಕೊಳ್ಳುತ್ತಾನೆ. ಆದರೆ ಈ ಜ್ಞಾನಾ ಜ್ಞಾನಗಳು ಬುದ್ಧಿವೃತ್ತಿಗಳೇ ಆಗಿವೆ. ಇವುಗಳನ್ನು ಬೆಳಗುವದರಿಂದಲೇ ಆತ್ಮನು ವಿದ್ವಾನ್ - ಅವಿದ್ವಾನ್- ಇತ್ಯಾದಿ ರೂಪದಿಂದ ವ್ಯವಹರಿಸಲ್ಪ ಡುತ್ತಾನೆ.'' ಆದ್ದರಿಂದ ಆತ್ಮನಲ್ಲಿ ಯಾವ ವಿಕಾರವೂ ಇಲ್ಲ. ವಿಕಾರಗಳೆಲ್ಲ ಬುದ್ಧಿವೃತ್ತಿಗಳಿಗೇ ಸೇರಿದ್ದು. ಜ್ಞಾನಾಜ್ಞಾನಗಳೂ ಬುದ್ಧಿವೃತ್ತಿಗಳೇ- ಎಂದು ತಿಳಿಯಬೇಕು. ಜಿಜ್ಞಾಸುಗಳು ಈ ರಹಸ್ಯವನ್ನು ಮನನಮಾಡ ಬೇಕು.

**೧. ಜ್ಞಾನಿಯ ಸ್ತುತಿ :** ಸರ್ವಜ್ಞನಾದ್ದರಿಂದಲೂ ಪುರುಷಾರ್ಥಗಳನ್ನೆಲ್ಲ ಪಡೆದುಕೊಂಡವನಾಗಿರುವದರಿಂದಲೂ ಜ್ಞಾನಿಯನ್ನು ಅಧ್ಯಾತ್ಮಶಾಸ್ತ್ರದಲ್ಲಿ 'ಕೃತ್ಸ್ನವಿತ್' 'ಸರ್ವಕರ್ಮಕೃತ್' 'ನಿತ್ಯಯುಕ್ತಃ' 'ಏಕಭಕ್ತಿಃ' 'ಭಗವತೋಽತ್ಯರ್ಥಂ ಪ್ರಿಯಃ' ಎಂದೆಲ್ಲ ಕರೆಯಲಾಗಿದೆ. ಹೇಗೆಂದರೆ : 'ಜ್ಞಾನಂ ತೇಽಹಂ ಸವಿಜ್ಞಾನಮ್' ಎಂಬ ಶ್ಲೋಕದ ಭಾಷ್ಯದಲ್ಲಿ ಶ್ರೀ ಶಂಕರಾಚಾರ್ಯರು ಹೀಗೆಂದಿರುತ್ತಾರೆ : ''ಯಾವದನ್ನು ಅರಿತಾಗ ಇನ್ನು ಅರಿಯಬೇಕಾದದ್ದೆಂಬುದೇ ಉಳಿದಿರುವದಿಲ್ಲವೋ ಅಂಥ ನನ್ನ ತತ್ತ್ವಜ್ಞಾನವನ್ನು ಪಡೆದವನು ಸರ್ವಜ್ಞನೇ ಆಗುವನು'' ಎಂದು ಹೇಳಿದ ಅನಂತರ ಮತ್ತೊಮ್ಮೆ ಹೀಗೆಂದಿರುತ್ತಾರೆ : ''ಈ ಶಾಸ್ತ್ರವನ್ನು ಈಗಾಗಲೇ ವಿವರಿಸಿರುವಂತೆ ಅರಿತುಕೊಂಡ ಬುದ್ಧಿವಂತನು ಕೃತಕೃತ್ಯನೇ ಆಗಿರುವನು- ಎಂದರೆ ''ವಿಶೇಷವಾದ ಪುಣ್ಯವಶದಿಂದ ಪಡೆದಿರುವ ಬ್ರಾಹ್ಮಣಜನ್ಮದಲ್ಲಿ ಹುಟ್ಟಿದವನು ಯಾವ ಕರ್ತವ್ಯವನ್ನು ಮಾಡಲೇಬೇಕಾಗಿತ್ತೋ ಅದೆಲ್ಲವನ್ನೂ ಭಗವತ್ತತ್ತ್ವವನ್ನು ಅರಿತುಕೊಂಡದ್ದರಿಂದ ಮಾಡಿದಂತೆಯೇ ಆಗಿರುತ್ತದೆ''- ಎಂದಿರುತ್ತಾರೆ.

**೨. ಜ್ಞಾನಿಯು ಕರ್ಮಯೋಗ, ಧ್ಯಾನಯೋಗ, ಭಕ್ತಿಯೋಗ-** ಇವುಗಳ ಪರಮಫಲವಾದ ಬ್ರಹ್ಮನಿಷ್ಠೆಯನ್ನು ಪಡೆದುಕೊಂಡಿರುವನಾದ್ದರಿಂದ ಅವನು ಎಲ್ಲಾ ಶಾಸ್ತ್ರೀಯಕರ್ಮಗಳನ್ನೂ ಮಾಡಿದಂತೆಯೇ ಸರಿ- ಎಂದೂ ಗೀತೆಯಲ್ಲಿ ಹೊಗಳಿರುತ್ತದೆ. ಮತ್ತು ಯಜ್ಞಗಳಲ್ಲೆಲ್ಲ ಜ್ಞಾನಯಜ್ಞವೇ ಶ್ರೇಷ್ಠವೆಂದೂ ಎಲ್ಲಾ ಶಾಸ್ತ್ರೀಯಕರ್ಮಗಳ ಸತ್ಫಲಗಳೂ ಜ್ಞಾನದಲ್ಲಿಯೇ ಕೊನೆಗಾಣುವವೆಂದೂ ಸ್ತುತಿಸಲಾಗಿದೆ. ಜ್ಞಾನವನ್ನು ಮಹತ್ತರವಾದ ತಪಸ್ಸೆಂದೂ ಅತ್ಯಂತ ಪವಿತ್ರವಾದುದೆಂದೂ ರಾಜವಿದ್ಯೆಯೆಂದೂ ರಾಜಗುಹ್ಯವೆಂದೂ ಭಗವಂತನು ವಿಶೇಷವಾಗಿ ಸ್ತುತಿಸಿರುತ್ತಾನೆ. ಮತ್ತು ಈ ಜ್ಞಾನವು ಸರ್ವಪಾಪಹರವಾದುದು, ಸಂಶಯಗಳನ್ನೆಲ್ಲ ಕತ್ತರಿಸಬಲ್ಲದು, ಮೋಹವನ್ನು ಕಳೆಯತಕ್ಕದ್ದು. ಕರ್ಮಬಂಧಗಳಿಂದ ಬಿಡಿಸತಕ್ಕದ್ದು, ಶಾಂತಿ ಮುಂತಾದ ಶಬ್ದಗಳಿಂದ ಹೇಳಲ್ಪಡುವ ಪರಮಪುರುಷಾರ್ಥರೂಪವಾದ ಮುಕ್ತಿಯನ್ನು ಕೊಡತಕ್ಕದ್ದು- ಇತ್ಯಾದಿ ರೂಪವಾಗಿ ಗೀತೆಯಲ್ಲಿ ಜ್ಞಾನವನ್ನು ಸ್ತುತಿಸಿದೆ.

**೩. ಜ್ಞಾನಿಯ ಲಕ್ಷಣಗಳು ಮುಮುಕ್ಷುವಿಗೆ ಪುರುಷಾರ್ಥ ಸಾಧನಗಳು :** ಕೃತಾರ್ಥನಾದ ಜ್ಞಾನಿಯು ನೆಲೆಗೊಂಡಿರುವ ಬ್ರಹ್ಮಾತ್ಮ ವಿವೇಕಪ್ರಜ್ಞೆಯಿಂದ ಕೂಡಿರುವವನಾದ್ದರಿಂದ ಅವನನ್ನು 'ಸ್ಥಿತಪ್ರಜ್ಞ' ನೆಂದೂ ಯೋಗದಿಂದ ತನ್ನ ಆತ್ಮಸ್ವರೂಪದಲ್ಲಿಯೇ ನೆಲೆಗೊಂಡಿರುವ ದರಿಂದ 'ಯುಕ್ತ'ನೆಂದೂ ಭಗವಂತನನ್ನು ಮಾತ್ರವೇ ಅನನ್ಯಭಾವದಿಂದ ಸೇವಿಸುತ್ತಿರುವದರಿಂದ 'ಭಕ್ತ'ನೆಂದೂ ಸತ್ತ್ವಾದಿ ಮೂರುಗುಣಗಳನ್ನು ದಾಟಿರುವವನಾದ್ದರಿಂದಲೂ ನಿರ್ಗುಣವಾದ ಹಾಗೂ ತನ್ನ ಆತ್ಮ ಸ್ವರೂಪವೇ ಆದ ಬ್ರಹ್ಮದಲ್ಲಿ ನೆಲೆನಿಂತಿರುವದರಿಂದಲೂ ಅವನನ್ನು ''ಗುಣಾತೀತ''ನೆಂದೂ ಕರೆಯಲಾಗಿದೆ. ಹೀಗೆ ಜ್ಞಾನಿಗೆ ಯಾವ ಲಕ್ಷಣ ಗಳನ್ನು ಹೇಳಲಾಗಿದೆಯೋ ಅವೇ ಮುಮುಕ್ಷುಗಳಿಗೆ ಸಾಧನಗಳೂ ಆಗಿರುತ್ತವೆ. ಆದ್ದರಿಂದ ಆ ಲಕ್ಷಣಗಳನ್ನು ಇಲ್ಲಿ ವಿಸ್ತಾರವಾಗಿ 'ಪ್ರಜಹಾತಿ ಯದಾ ಕಾಮಾನ್' ಎಂಬುದರಿಂದ ಆರಂಭಿಸಿ 'ತಸ್ಮಾದ್ ಯಸ್ಯ ಮಹಾಬಾಹೋ' ಎಂಬಲ್ಲಿಯವರೆಗೂ ಹೇಳಿರುತ್ತದೆ. ಹಾಗೆಯೇ ಗುಣಾತೀತನಿಗಾಗಿ ಹೇಳಿರುವ ಲಕ್ಷಣಗಳೂ ಜ್ಞಾನಿಗೆ ಅನ್ವಯಿಸುತ್ತವೆ. ಆದ್ದರಿಂದ ಈ ಎಲ್ಲಾ ಸಾಧನಗಳನ್ನೂ ಮುಮುಕ್ಷುಗಳು ನಿರಂತರವಾದ ಅಭ್ಯಾಸದಿಂದ ಸಾಧಿಸಿಕೊಳ್ಳಬೇಕು. ಆಗಲೇ ಸ್ಥಿತಪ್ರಜ್ಞರಾಗಲು ಸಾಧ್ಯ ವಾಗುತ್ತದೆ. ಹೀಗೆ ಎಲ್ಲೆಲ್ಲಿ ಗೀತೆಯಲ್ಲಿ ಭಗವಂತನು ಜ್ಞಾನಿಗಳ ಲಕ್ಷಣ ವನ್ನು ಹೇಳಿರುತ್ತಾನೋ ಅಲ್ಲೆಲ್ಲ ಆ ಗುಣಗಳನ್ನು ಮುಮುಕ್ಷುಗಳಾದವರು ನಿರಂತರವಾದ ಅಭ್ಯಾಸದಿಂದ ಅಳವಡಿಸಿಕೊಳ್ಳಬೇಕು- ಎಂದಭಿಪ್ರಾಯ.

**೪. ಜ್ಞಾನಿಯ ಕರ್ಮವು ಜ್ಞಾನವೇ ; ಸಂನ್ಯಾಸಿಯಾದ ಜ್ಞಾನಿಗೆ ಯಜ್ಞವೆಂದರೆ ಜ್ಞಾನವೇ :** ಜ್ಞಾನಿಯು ತನ್ನ ಜ್ಞಾನದ ಬಲದಿಂದ ಯಾವಾಗಲೂ ನಿಷ್ಕ್ರಿಯನಾದ ತನ್ನ ಆತ್ಮನಲ್ಲಿಯೇ ಇರುತ್ತಾನಾಗಿ ಅವನಿಗೆ ಕರ್ಮಗಳನ್ನು ಮಾಡಿದ್ದರಿಂದಾಗಲಿ ಬಿಟ್ಟದ್ದರಿಂದಾಗಲಿ ಯಾವ ಇಷ್ಟಾನಿಷ್ಟ ಗಳೂ ಆಗಲಾರವು. ಆದ್ದರಿಂದಲೇ ಅವನಿಗೆ ಪರಿಹರಿಸಿಕೊಳ್ಳಬೇಕಾದ ಅನಿಷ್ಟವಾಗಲಿ, ಪಡೆದುಕೊಳ್ಳಬೇಕಾದ ಇಷ್ಟವಾಗಲಿ- ಇರುವದಿಲ್ಲ. ಹೀಗಿ ದ್ದರೂ ಅವನು ಗೃಹಸ್ಥನಾಗಿರಲಿ, ಸಂನ್ಯಾಸಿಯಾಗಿರಲಿ- ಆಯಾ ಆಶ್ರಮಕ್ಕೆ

ಯೋಗ್ಯವಾದ ಕರ್ಮಗಳನ್ನು ಲೋಕದ ಜನರಿಗೆ ಮೇಲುಪಂಕ್ತಿಯಾಗಿ ಮಾಡುತ್ತಿರುವನು. ಆದರೆ ಆ ಕರ್ಮಗಳಾವುವೂ ಅವನನ್ನು ಬಂಧನ ಕ್ಕೊಳಪಡಿಸುವದಿಲ್ಲ. ಏಕೆಂದರೆ ಅವನಿಗೆ ಕರ್ತೃತ್ವಬುದ್ಧಿಯು ಇರುವ ದಿಲ್ಲ- ಎಂದರೆ ಜ್ಞಾನದಿಂದ ಬಾಧಿತವಾಗಿಬಿಟ್ಟಿರುತ್ತದೆ. ಅವನ ದೃಷ್ಟಿ ಯಿಂದ ಆ ಕರ್ಮಗಳೂ ಅವುಗಳಲ್ಲಿ ಬಳಸುವ ಸಾಮಗ್ರಿಗಳೂ ಮತ್ತು ಕರ್ಮದಫಲವೂ ಬ್ರಹ್ಮವೇ ಆಗಿಬಿಟ್ಟಿರುತ್ತದೆ. ಹೀಗೆ ಕರ್ಮಗಳನ್ನು ಸಂನ್ಯಾಸಮಾಡಿ ಪರಮಹಂಸಪರಿವ್ರಾಜಕನಾದವನಿಗೆ ಕರ್ಮತ್ಯಾಗದ ದೋಷವೂ ಅಂಟುವದಿಲ್ಲ. ಏಕೆಂದರೆ ಅವನ ದೃಷ್ಟಿಯಲ್ಲಿ ಎಲ್ಲವೂ ಬ್ರಹ್ಮವೇ ಆಗಿರುತ್ತದೆ. ''ಯಸ್ತ್ವಾತ್ಮರತಿರೇವ ಸ್ಯಾತ್'' (೩-೧೭) 'ನೈವ ತಸ್ಯ ಕೃತೇನಾರ್ಥಃ' (೩ - ೧೮) 'ಕರ್ಮಣೈವ ಹಿ ಸಂಸಿದ್ಧಿಮ್' (೩-೨೦) ಈ ಶ್ಲೋಕಗಳಲ್ಲಿ ಈ ವಿಚಾರವನ್ನು ತಿಳಿಸಲಾಗಿದೆ. ಆದ್ದರಿಂದ ಲೋಕದ ಜನರ ಉದ್ಧಾರಕ್ಕಾಗಿ ಜ್ಞಾನಿಗಳು ಆಚರಿಸುವ ಕರ್ಮಗಳು ಅವರಿಗೆ ಬಂಧಕವಾಗಿರುವದಿಲ್ಲ- ಎಂದು ತಿಳಿಯಬೇಕು.

--------

## ೫. ಭಕ್ತಿ-ಜ್ಞಾನಗಳ ಸಂಬಂಧ

ಈಗ ಭಕ್ತಿ-ಜ್ಞಾನಗಳ ಸಂಬಂಧವನ್ನು ವಿಚಾರಮಾಡೋಣ. ಏಕೆಂದರೆ ಗೀತೆಯಲ್ಲಿ ಜ್ಞಾನವನ್ನು ಹೇಗೆ ಬಹಳವಾಗಿ ಪ್ರಶಂಸೆಮಾಡಿರು ವದು ಕಂಡುಬಂದಿದೆಯೋ ಹಾಗೆಯೇ ಭಕ್ತಿಯನ್ನು ಹೊಗಳಿರುವದೂ ಕಂಡುಬಂದಿದೆ. ಉದಾಹರಣೆಗಾಗಿ ೧೮-೬೮ರಲ್ಲಿ ಹೀಗಿದೆ : ''ಯಾವನು ಈ ಪರಮಗುಹ್ಯವಾದ ಗೀತೋಪದೇಶವನ್ನು ನನ್ನ ಭಕ್ತರಿಗೆ ಹೇಳುವನೋ ಅವನು ನನ್ನಲ್ಲಿ ಪರಭಕ್ತಿಯನ್ನು ಮಾಡಿದವನಾಗಿ ನನ್ನನ್ನೇ ಸೇರುತ್ತಾನೆ''. ೧೮-೬೯ರಲ್ಲಿ ''ಮನುಷ್ಯರಲ್ಲಿ ಅವನಿಗಿಂತ ಹೆಚ್ಚು ನನಗೆ ಪ್ರೀತಿಪಾತ್ರ ನಾದವನು ಬೇರೊಬ್ಬನಿರುವದಿಲ್ಲ ; ಅಲ್ಲದೆ ನನಗೆ ಅವನಿಗಿಂತ ಹೆಚ್ಚು ಪ್ರಿಯನಾದವನು ಬೇರೊಬ್ಬನು ಹುಟ್ಟಲಾರನು'' ಎಂಬುದಾಗಿ ಭಕ್ತಿ ಯನ್ನು ಹೊಗಳುವದರಿಂದಲೇ ಅಧ್ಯಾಯವು ಪೂರೈಸಿರುತ್ತದೆ. ಆದ್ದರಿಂದ

ಜ್ಞಾನಕ್ಕೂ ಭಕ್ತಿಗೂ ಸಂಬಂಧವೇನು ? ಎಂಬಿದನ್ನು ವಿಚಾರಮಾಡ ಬೇಕಾಗಿದೆ.

ಇಲ್ಲಿ ಇದರ ತತ್ತ್ವವು ಹೀಗಿದೆ : ಜ್ಞಾನ, ಭಕ್ತಿ ಎಂಬುದಾಗಿ ಎರಡು ಪದಾರ್ಥಗಳಿಲ್ಲ. ಒಂದೇ ವಸ್ತುವಿನ ಕಲ್ಪಿತಭೇದವನ್ನು ಇಟ್ಟುಕೊಂಡು ಹೊರಟಿರುವ ಉಪದೇಶವಿದಾಗಿದೆ. ಭಕ್ತಿಭಾವವಿಲ್ಲದ ಭಗವಂತನ ತತ್ತ್ವಜ್ಞಾನವಾಗಲಿ ಜ್ಞಾನರಹಿತವಾದ ಭಕ್ತಿಯಾಗಲಿ ಆಲೋಚಿಸುವದಕ್ಕೂ ಸಾಧ್ಯವಾಗುವದಿಲ್ಲ. ''ಅದು ಮಗನಿಗಿಂತಲೂ, ಹಣಕ್ಕಿಂತಲೂ ಅಥವಾ ಅತ್ಯಂತಪ್ರೀತಿಕರವಾದ ಬೇರೆ ಯಾವ ಪದಾರ್ಥಕ್ಕಿಂತಲೂ ಪ್ರೀತಿಪಾತ್ರ ವಾದದ್ದಾಗಿದೆ. ಅದು ಯಾವದೆಂದರೆ ಆತ್ಮನೇ'' ಎಂದು ಶ್ರುತಿಯಲ್ಲಿ ಸರ್ವಾಂತರನಾದ ಆತ್ಮನಲ್ಲಿ ಉಂಟಾಗುವ ಜ್ಞಾನವನ್ನು ವರ್ಣಿಸಿರುತ್ತದೆ. ಆದರೆ ಈ ಸಂದರ್ಭದಲ್ಲಿ ಜ್ಞಾನವೇನೋ ಉಂಟಾಗಿದೆ ; ಆದರೆ ಭಕ್ತಿಯು ಇನ್ನೂ ಮೂಡಿರುವದಿಲ್ಲ- ಎಂದು ಹೇಳಲು ಬರುವಂತೆ ಇಲ್ಲ. ಏಕೆಂದರೆ ಸರ್ವಾಂತರನಾದ ಆತ್ಮನಲ್ಲಿ ನಿರತಿಶಯವಾದ ಪ್ರೀತಿಯು ಅವನ ಜ್ಞಾನವಿಲ್ಲದೆ ಉಂಟಾಗಲೇ ಆರದು. ತಿಳಿಯದೆ ಇರುವ ಪದಾರ್ಥದಲ್ಲಿ ಪ್ರೀತಿಯಾಗಲಿ ಅಪ್ರೀತಿಯಾಗಲಿ ಅಸಂಭವವೇ ಸರಿ. ಆದ್ದರಿಂದಲೇ ಜ್ಞಾನಿಯನ್ನು ಪರಭಕ್ತನೆಂದು ಭಗವಂತನು ನಿರ್ದೇಶಮಾಡಿರುತ್ತಾನೆ. ''ಚತುರ್ವಿಧಾ ಭಜಂತೇ ಮಾಂ'' ಎಂಬ ಶ್ಲೋಕದಿಂದಾರಂಭಿಸಿರುವ ಮೂರು ಶ್ಲೋಕಗಳನ್ನು ನೋಡಿರಿ.

ಇನ್ನು ಆತ್ಮನು (ತಾನು) ಆತ್ಮನಿಗಿಂತ (ಪರಮಾತ್ಮನಿಗಿಂತ) ಬೇರೆ ಯಲ್ಲ. ಭಗವಾನ್‌ವಾಸುದೇವನು ಎಲ್ಲಾ ಪ್ರಾಣಿಗಳಿಗೂ ಆತ್ಮನಾಗಿ ರುತ್ತಾನೆ. ಇದನ್ನು 'ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ' ಎಂಬಲ್ಲಿ ಭಗವಂತನೇ ಉದ್ಘೋಷಿಸಿರುತ್ತಾನೆ. ಆದ್ದರಿಂದ ಭಗವಂತ ನನ್ನು ತನ್ನ ಆತ್ಮನೆಂದೇ ತಿಳಿದವನಿಗೆ ಅಂತಃಕರಣಧರ್ಮಗಳೇ ಆದ ಜ್ಞಾನ ವಾಗಲಿ, ಭಕ್ತಿಯಾಗಲಿ ಬೇರೆ ಬೇರೆ ಎಂದು ಕಲ್ಪಿಸುವದು ವ್ಯವಹಾರದೃಷ್ಟಿ ಯನ್ನು ಅವಲಂಬಿಸದೆ ಸಾಧ್ಯವಾಗುವದಿಲ್ಲ. ಆದ್ದರಿಂದ ಭೂಮವಿದ್ಯೆ ಯಲ್ಲಿ ಜ್ಞಾನಿಯನ್ನು ವರ್ಣಿಸುವಾಗ ''ಎಲ್ಲಿ ಮತ್ತೊಂದನ್ನು ಕಾಣುವದಿ

ಲ್ಲವೋ ಮತ್ತೊಂದನ್ನು ಕೇಳುವದಿಲ್ಲವೋ ಮತ್ತೊಂದನ್ನು ಅರಿಯುವದಿಲ್ಲವೋ'' ಎಂಬಲ್ಲಿ, ಅಥವಾ ಗೀತೆಯಲ್ಲಿಯೇ ''ಯಾವನು ಆತ್ಮರತಿಯೂ ಆತ್ಮತೃಪ್ತನೂ ಆಗಿರುವನೋ'' ಎಂಬಲ್ಲಿ ರತಿಯೇ ಮುಂತಾದವುಗಳು ಜ್ಞಾನಿಗೆ ಆತ್ಮನೇ- ಎಂದು ಹೇಳಿ ಖಚಿತಪಡಿಸಿರುತ್ತದೆ. ಏಕೆಂದರೆ ಬೇರೊಂದು ರೀತಿಯ ರತ್ಯಾದಿಗಳು ಜ್ಞಾನಿಯಲ್ಲಿ ಸಂಭವಿಸುವಂತಿಲ್ಲ. ಹಾಗೆಯೇ ಇಲ್ಲಿಯೂ ಜ್ಞಾನ-ಭಕ್ತಿ ಎಂಬಿವು ಆತ್ಮನಿಮಿತ್ತವಾಗಿಯೇ ಹೊರತು ತನಗಿಂತ ಬೇರೆಯಾದ ಪ್ರೀತಿಪಾತ್ರವಾದ ವಸ್ತುವಿನ ವಿಷಯದ್ದಲ್ಲ- ಎಂದು ಗೊತ್ತಾಗುತ್ತದೆ. ಆದ್ದರಿಂದ ''ಮಮಾತ್ಮಾ ಭೂತಭಾವನಃ'' ಎಂಬಲ್ಲಿ ಭೂತಗಳಲ್ಲಿ ನಾನು ಎನಿಸಿಕೊಂಡಿರುವವನು ನನ್ನ ಆತ್ಮನೇ- ಎಂಬುದಾಗಿ ವಾಸುದೇವನೊಬ್ಬನಲ್ಲಿಯೇ ಲೋಕದ ಜನರ ಬುದ್ಧಿಗೆ ಅನುಗುಣವಾಗಿ ಅಧ್ಯಾರೋಪದೃಷ್ಟಿಯಿಂದ ಆತ್ಮಾ ಎಂದೂ ವಾಸುದೇವನೆಂದೂ ವ್ಯವಹರಿಸಲಾಗಿದೆ. ಹೀಗೆಯೇ ಆತ್ಮಜ್ಞಾನಿ, ಪರಮಾತ್ಮಭಕ್ತ- ಎಂಬ ವ್ಯವಹಾರಗಳನ್ನೂ ಒಂದೆಂದೇ ತಿಳಿಯಬೇಕು. ಇನ್ನು (೧) ''ಸರ್ವಭೂತಸ್ಥಿತಂ ಯೋ ಮಾಮ್'' (೨) ''ಯೇ ತ್ವಕ್ಷರಮನಿರ್ದೇಶ್ಯಮ್'' (೩) ''ಸಂನಿಯಮ್ಯೇಂದ್ರಿಯಗ್ರಾಮಮ್'' ಮುಂತಾದ ಸ್ಥಳಗಳಲ್ಲಿ ನಿರ್ವಿಶೇಷನಾದ ಭಗವಂತನಲ್ಲಿಯೂ ಜ್ಞಾನಿಗಳಿಗೆ ಭಕ್ತಿಯೂ, ಭಗವಂತನಲ್ಲಿಯೇ ಚರ್ಯೆಯೂ ಅವನನ್ನೇ ಬಳಿಸಾರುವಿಕೆಯೂ ಅವನನ್ನೇ ಹೊಂದುವಿಕೆಯೂ ಗೀತೆಯಲ್ಲಿ ಹೇಳಲ್ಪಟ್ಟಿರುವದನ್ನು ಈವರೆಗಿನ ವಿಚಾರಸರಣಿಯಂತೆ ಸುಲಭವಾಗಿ ವ್ಯಾಖ್ಯಾನಿಸಬಹುದಾಗಿದೆ. ಆದ್ದರಿಂದ ಆಯಾ ಸ್ಥಳದಲ್ಲಿ ಭಾಷ್ಯಕಾರರು ಬರೆದಿರುವ ವಿವರಣೆಯನ್ನು ವಾಚಕರು ಗಮನಿಸಬೇಕು.

ಇನ್ನು ಜ್ಞಾನ-ಪರಭಕ್ತಿ- ಭಗವತ್‌ಪ್ರವೇಶ- ಇವುಗಳಿಗೆ ಕಾಲಕೃತವಾದ ಭೇದವೇನೂ ಇರುವದಿಲ್ಲ. ಕಲ್ಪಿತಭೇದವನ್ನು ಆಶ್ರಯಿಸಿಯೇ ಇವುಗಳನ್ನು ನಿರ್ದೇಶಿಸಲಾಗಿದೆ. ಬ್ರಹ್ಮಭೂತನಾದವನು ಜ್ಞಾನನಿಷ್ಠನಾಗುವನು. ಆ ಜ್ಞಾನನಿಷ್ಠನೇ ಪರಭಕ್ತನೆನಿಸುವನು. ಅವನೇ ಭಗವಂತನನ್ನು ನಿಜವಾಗಿ ಬಲ್ಲವನಾಗಿ ಪ್ರವೇಶಮಾಡಿದವನಾಗಿರುವನು. ಇವುಗಳಲ್ಲಿ ಕಾಲ ಭೇದವಿಲ್ಲವೆಂದು ತಿಳಿಯಬೇಕು.

**೧. ಜ್ಞಾನ - ಪ್ರವೃತ್ತಿ ಇವುಗಳ ಸಮನ್ವಯ :** ಭಗವದ್ಗೀತೆಯಲ್ಲಿ ''ಜ್ಞಾನವಾನ್ ಮಾಂ ಪ್ರಪದ್ಯತೇ'' ಎಂಬ ಉಪದೇಶವಿದೆ. ತತ್ತ್ವ ವಿಚಾರವನ್ನು ಸರಿಯಾಗಿ ಮಾಡದೆ ಇರುವವರಿಗೆ ಜ್ಞಾನವೆಂಬುದೇ ಬೇರೆ, ಪ್ರಪತ್ತಿಯೇ ಬೇರೆ- ಎಂಬ ಭ್ರಾಂತಿಯುಂಟಾಗುವದು ಸಹಜ. ಏಕೆಂದರೆ ಮೇಲಿನ ವಾಕ್ಯಕ್ಕೆ ಜ್ಞಾನವನ್ನು ಪಡೆದುಕೊಂಡವನು ನನ್ನನ್ನು ಪ್ರಪತ್ತಿ ಮಾಡುವವನು- ಎಂದರ್ಥವಾಗುತ್ತದೆ. ಆದರೆ ಹಾಗಿಲ್ಲ. ಶ್ರೀ ಶಂಕರ ಭಗವತ್ಪಾದರು ತಮ್ಮ ಭಾಷ್ಯದಲ್ಲಿ ಹೀಗೆಂದಿರುತ್ತಾರೆ : ''ಜ್ಞಾನಕ್ಕಾಗಿ ಉಂಟಾಗಬೇಕಾದ ಸಂಸ್ಕಾರಗಳನ್ನು ಹೊಂದಿರುವ ಅನೇಕಜನ್ಮಗಳು ಕಳೆಯಲಾಗಿ ಪರಿಪಕ್ವವಾದ ನಿಶ್ಚಿತವಾದ ಜ್ಞಾನವನ್ನು ಪಡೆದಂಥ ಸಾಧಕನು ವಾಸುದೇವನಾದ ನನ್ನನ್ನು ನೇರಾಗಿ ಪಡೆಯುತ್ತಾನೆ. ಹೇಗೆ ? ಎಂದರೆ ''ವಾಸುದೇವನೇ ಎಲ್ಲವೂ'' ಎಂಬ ಜ್ಞಾನದಿಂದ ಸರ್ವಾತ್ಮನಾದ ನಾರಾಯಣನನ್ನು ಕಂಡುಕೊಂಡವನಾಗಿ ನನ್ನನ್ನು ಪಡೆಯುತ್ತಾನೆ. ಇಲ್ಲಿ 'ಅನೇಕಜನ್ಮಗಳ ಕಡೆಯಲ್ಲಿ ಭಗವತ್ಪ್ರಾಪ್ತಿಯಾಗಲಿದೆ ; ಒಂದೇ ಜನ್ಮದಲ್ಲಿ ಆಗಲಾರದು'- ಎಂದೇನೂ ಅಭಿಪ್ರಾಯವಿಲ್ಲ. ಏಕೆಂದರೆ ನಿತ್ಯಸಿದ್ಧನೂ ಸರ್ವಾತ್ಮನೂ ಆಗಿರುವ ಭಗವಂತನ ಪ್ರಪತ್ತಿಯಾಗಲಿ ಪ್ರಾಪ್ತಿಯಾಗಲಿ ನಿಜವಾಗಿ ಹೊಸದಾಗಿ ಆಗುವಂಥದ್ದಲ್ಲ. ಮತ್ತೇನೆಂದರೆ : ಅವಿದ್ಯೆಯಿಂದ ಮಾತ್ರವೇ ವ್ಯವಹಿತನಾಗಿದ್ದು ಆ ಪ್ರತಿಬಂಧಕವು ಕಳೆದು ಹೋಗಲಾಗಿ- ಹಗಲುವೇಳೆಯಲ್ಲಿ ಕಿಟಕಿಯನ್ನು ತೆರೆದ ಮಾತ್ರದಿಂದ ಬೆಳಕು ಬರುವಂತೆ ತನ್ನ ಆತ್ಮನೇ ಭಗವಂತನು ಎಂದು ತಿಳಿಯಲಾಗಿ ಆ ಅನುಭವವನ್ನೇ 'ಪ್ರಪದ್ಯತೇ' ಎಂದು ತಿಳಿಸಲಾಗಿದೆ. ಆದರೆ ಈ ಅವಿದ್ಯೆಯನ್ನು ಕಳೆಯುವಿಕೆಯಾದರೊ, ಅಸಂಸ್ಕೃತಬುದ್ಧಿಯವರಿಗೆ ಒಮ್ಮೆಗೇ ದೊರಕಲಾರದು. ಮತ್ತೆ ಹೇಗೆಂದರೆ : ದೀರ್ಘಕಾಲದವರೆಗೂ ಅಭ್ಯಾಸ ಮಾಡಿರುವ ಧ್ಯಾನ ಹಾಗೂ ಯೋಗಗಳ ಮೂಲಕ ಅಂತಃಕರಣ ಶುದ್ಧಿಯನ್ನು ಪಡೆದಂಥ ಸಾಧಕನಿಗೆ ಈ ಬ್ರಹ್ಮಪ್ರಾಪ್ತಿಯು ಅನೇಕ ಜನ್ಮಗಳ ಕೊನೆಯಲ್ಲಿ ದೊರಕುತ್ತದೆ- ಎಂಬರ್ಥದಲ್ಲಿ 'ಬಹಳ ಜನ್ಮಗಳ ಕಡೆಯಲ್ಲಿ' ಎಂದು ಹೇಳಿರುತ್ತದೆ. ಮತ್ತು ಇಲ್ಲಿ ಯೋಗವೆಂದರೆ ನಿದಿ- ಧ್ಯಾಸನವೆಂದರ್ಥ. ಇದು ವಸ್ತುತಂತ್ರವಾಗಿದ್ದು ಬ್ರಹ್ಮವನ್ನೇ ವಿಚಾರ

ಮಾಡಿ ಅನಂತರ ಅಂತಃಕರಣಕ್ಕೆ ತಂದುಕೊಂಡು ಕಟ್ಟಕಡೆಗೆ ತಾನೇ ಬ್ರಹ್ಮವೆಂಬ ಜ್ಞಾನದಲ್ಲಿ ನೆಲೆನಿಂತು ದ್ವೈತವನ್ನು ಬಾಧಮಾಡುವದು. ಹೀಗಿದ್ದರೂ ನೆಲೆನಿಲ್ಲುವದು- ಬಾಧಮಾಡುವದು ಎಂಬಿವು ಕ್ರಿಯೆಗಳೇನೂ ಅಲ್ಲ. ಏಕೆಂದರೆ ಕ್ರಿಯಾಕಾರಕಫಲಭೇದವೆಂಬ ದ್ವೈತಬುದ್ಧಿಯನ್ನೇ ಇಲ್ಲವಾಗಿಸಿಕೊಳ್ಳುವ ಪರಮಾನುಭವವು ಇದು ಎಂದು ಅಭಿಪ್ರಾಯ. ಭಗವಂತನೂ ''ಪ್ರಯತ್ನಾದ್ ಯತಮಾನಸ್ತು......'' (ಗೀ. ೬ - ೪೫) ಎಂಬಲ್ಲಿ ಈ ವಿಷಯವನ್ನು ಸ್ಪಷ್ಟಪಡಿಸಿರುತ್ತಾನೆ.

ಈವರೆಗೆ ತಿಳಿಸಿದಂತೆ ವಿಚಾರಮಾಡಿದಾಗ ಜ್ಞಾನ-ಪ್ರಪತ್ತಿಗಳು ಬೇರೆ ಬೇರೆಯ ಫಲಗಳಲ್ಲವೆಂಬುದು ಗೊತ್ತಾಗಿದೆ. ಗೀತೆಯ ೬-೪೫ನೆಯ 'ಪ್ರಯತ್ನಾದ್ ಯತಮಾನಸ್ತು'' ಎಂಬ ಶ್ಲೋಕದ ಭಾಷ್ಯದಲ್ಲಿ ಶ್ರೀ ಶಂಕರಾಚಾರ್ಯರು ಹೀಗೆಂದಿದ್ದಾರೆ : ಅನೇಕಜನ್ಮಗಳಲ್ಲಿ ಸ್ವಲ್ಪಸ್ವಲ್ಪವಾಗಿಯೇ ಸಂಸ್ಕಾರಗಳನ್ನು ಕೂಡಿಹಾಕಿಕೊಂಡು ಆ ಕೂಡಿಹಾಕಿದ ಸಂಸ್ಕಾರಗಳ ಫಲವಾಗಿ ಜ್ಞಾನಸಂಸಿದ್ಧನಾಗಿ ಎಂದರೆ ಸಮ್ಯಗ್ದರ್ಶನವನ್ನು ಹೊಂದಿದವನಾಗಿ ಪ್ರಕೃಷ್ಟವಾದ ಸದ್ಗತಿಯನ್ನು ಹೊಂದುತ್ತಾನೆ''. ಅದನ್ನೇ ಇಲ್ಲಿ ''ಜ್ಞಾನವಾನ್ ಮಾಂ ಪ್ರಪದ್ಯತೇ'' ಎಂದು ಹೇಳಿದೆ.

ಈಗ ವಾಕ್ಯಶೇಷವನ್ನು ನೋಡೋಣ 'ಜ್ಞಾನವಾನ್ ಮಾಂ ಪ್ರಪದ್ಯತೇ' ಎಂಬ ವಾಕ್ಯದ ಅನಂತರ ''ಕಾಮೈಸ್ತೈಸ್ತೈರ್ಹೃತಜ್ಞಾನಾಃ'' ಎಂಬ ಶ್ಲೋಕವಿದೆ. ಇದರಲ್ಲಿ ಶಾಸ್ತ್ರೋಕ್ತನಿಯಮಾನುಸಾರವಾಗಿ ಆಯಾ ದೇವತೆಗಳನ್ನು ಆರಾಧನೆಮಾಡಿದವರಿಗೆ ಆಯಾ ದೇವತಾಸಾಯುಜ್ಯ ಪ್ರಾಪ್ತಿಯೇ ದೊರಕುವದೆಂದು ಹೇಳಿದೆ. ಇದನ್ನೇ ಮುಂದೆಯೂ ''ದೇವಾನ್ ದೇವಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾಮಪಿ' ಎಂದೂ ಹೇಳಿರುತ್ತದೆ. ಆದರೆ ಮುಂದೆ ''ನ ಮಾಂ ದುಷ್ಕೃತಿನೋ ಮೂಢಾಃ'' ಎಂಬಲ್ಲಿ ದುಷ್ಟರು ನನ್ನನ್ನು ಪ್ರಪತ್ತಿಮಾಡುವದಿಲ್ಲ- ಎಂದೂ ತಿಳಿಸಿದೆ ಆದ್ದರಿಂದ ''ಜ್ಞಾನಕ್ಕಾಗಿ ಪ್ರಪತ್ತಿಯನ್ನು ಮಾಡಬೇಕು'' ಎಂಬರ್ಥವೂ ಹೊರಡುತ್ತದೆ. ಹೀಗೆ ವಿಚಾರದಿಂದ ಸಿದ್ಧವಾಗುವದೇನೆಂದರೆ ಜ್ಞಾನಸಾಧನಗಳ ಅನುಷ್ಠಾನದಿಂದುಂಟಾದ ಪರಿಪಕ್ವವಾದ ಜ್ಞಾನ

ವುಳ್ಳವನಾಗಿ ಪ್ರತ್ಯಗಾತ್ಮನೇ ಆಗಿರುವ ಬ್ರಹ್ಮವನ್ನು ನೇರಾಗಿ ಹೊಂದು ತ್ತಾನೆ- ಎಂಬುದು ಆತ್ಮಾನುಭವಗಮ್ಯವಾದದ್ದೇ ಬ್ರಹ್ಮವು ಎಂದು ತಿಳಿಸಿದಂತಾಗಿದೆ. ಹೀಗೆ ಆಲೋಚಿಸಿದರೂ ಪ್ರಪತ್ತಿ ಎಂಬುದು ಜ್ಞಾನ ಕ್ಕಿಂತ ಬೇರೆಯಾದದ್ದಲ್ಲ- ಎಂದು ಸಿದ್ಧವಾಗುತ್ತದೆ.

ಇದರಿಂದ ಜ್ಞಾನನಿಷ್ಠೆಯೆಂಬ ಶಬ್ದದ ಅರ್ಥವನ್ನು ವಿವೇಚನೆ ಮಾಡಿದಂತಾಗುತ್ತದೆ. ನಿಷ್ಠೆ ಎಂಬ ಶಬ್ದಕ್ಕೆ ಅಲ್ಲಿಯೇ ನೆಲೆನಿಲ್ಲುವದು ಎಂದರ್ಥ. ಮತ್ತು ಮುಂದೆ ಮಾಡಬೇಕಾಗಿರುವ ಕರ್ತವ್ಯದಲ್ಲಿಯೇ ನೆಲೆ ಗೊಳ್ಳುವಿಕೆ ಎಂದರ್ಥವಾಗುತ್ತದೆ. ಜ್ಞಾನನಿಷ್ಠಾ, ಕರ್ಮನಿಷ್ಠಾ- ಇವು ಉದಾಹರಣೆಗಳು. 'ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ''ಎಂಬಲ್ಲಿ ಶ್ರೀಶಂಕರಾಚಾರ್ಯರು'' ನಿಷ್ಠೆ ಎಂದರೆ ನೆಲೆನಿಲ್ಲುವಿಕೆ, ಅನುಷ್ಠಾನ ಮಾಡುವ ವಿಷಯದಲ್ಲಿ ತತ್ಪರತೆ'- ಎಂದು ವಿವರಿಸಿದ್ದಾರೆ. ಜ್ಞಾನಸಾಧನ ಗಳಾದ ಅಮಾನಿತ್ವಾದಿಗಳನ್ನು ನುಷ್ಠಾನಮಾಡುವದರಲ್ಲಿ ತಾತ್ಪರ್ಯ ವುಳ್ಳವನು- ಎಂದರ್ಥ. ಇದನ್ನು 'ಯುಕ್ತಃ ಕರ್ಮಫಲಂ ತ್ಯಕ್ತ್ವಾ' (ಗೀ.೫ -೧೨) ಎಂಬಲ್ಲಿಯೂ ಶ್ರೀ ಶಂಕರಾಚಾರ್ಯರೂ ವಿವರಿಸಿದ್ದಾರೆ. ಅಮಾನಿತ್ವಾದಿಸಾಧನಗುಣಗಳನ್ನು ಉಪಕ್ರಮಮಾಡುವಲ್ಲಿಯೂ ತಿಳಿಸಿದ್ದಾರೆ.

-------

## ೬. ಭಗವತ್ತತ್ತ್ವವಿವೇಕ - ೧

ಈವರೆಗೆ ಗೀತಾಶಾಸ್ತ್ರಾರ್ಥವನ್ನು ಬೇರೆ ಬೇರೆಯ ದೃಷ್ಟಿಯಿಂದ ವಿವೇಚನೆಮಾಡಿದ್ದಾಯಿತು. ಈಗ ಈವರೆಗಿನ ಎಲ್ಲಾ ಸಾಧನಸಿದ್ಧಾಂತ ವಿವೇಕಗಳೂ - ಎಂದರೆ ಕರ್ಮ, ಭಕ್ತಿ, ಧ್ಯಾನ, ಜ್ಞಾನ- ಮುಂತಾದವುಗಳ ನಿಷ್ಕೃಷ್ಟತೀರ್ಮಾನಗಳೂ ಪ್ರತಿಯೊಂದೂ 'ಯೋಗ'ವೆಂಬ ಹೆಸರಿನಿಂದ ಕೂಡಿ ವರ್ಣಿಸಲ್ಪಟ್ಟವೋ ಅವೆಲ್ಲವೂ ಯಾವ ವಾಸುದೇವಭಗವಂತನನ್ನೇ ಗುರಿಯಾಗಿ ಉಳ್ಳವುಗಳಾಗಿವೆಯೋ ಆ ವಾಸುದೇವಪರಬ್ರಹ್ಮದ ಸ್ವರೂಪ ವನ್ನು ಈಗ ವಿವೇಚನೆಮಾಡಲಾಗುವದು. ಇದರಿಂದ ಗೀತಾಶಾಸ್ತ್ರದ ಅಭಿಧೇಯವೇನೆಂಬುದು ಸಿದ್ಧವಾಗಲಿದೆ. ಇಲ್ಲವಾದರೆ ಗೀತಾಶಾಸ್ತ್ರದ

ಪರಮಗುರಿಯೇನೆಂಬುದೇ ತಿಳಿಯುವದಿಲ್ಲ. ಈ ವಿಷಯದಲ್ಲಿ ಭಗವತ್ಪಾದರ ವಿವರಣೆಯು ಹೀಗಿದೆ :

''ವೇದೋಕ್ತವಾದ ಪ್ರವೃತ್ತಿನಿವೃತ್ತಿಗಳೆಂಬ ಎರಡು ಧರ್ಮಗಳಿಂದ ತಿಳಿಯಬೇಕಾಗಿರುವದೆಂದರೆ 'ವಾಸುದೇವ'ನೆಂಬ ಹೆಸರಿನ ಪರಬ್ರಹ್ಮವೇ ಆಗಿದೆ. ಹೀಗೆ ವಾಸುದೇವತತ್ತ್ವವನ್ನು ಅಸಾಧಾರಣವಾಗಿ ನಿರೂಪಣೆ ಮಾಡಿ ಬೋಧಿಸುತ್ತಿರುವ ಗೀತಾಶಾಸ್ತ್ರವು ವಿಶಿಷ್ಟವಾದ ಪ್ರಯೋಜನವುಳ್ಳದ್ದಾಗಿದೆ.'' ಆದ್ದರಿಂದ ಈಗ ವಾಸುದೇವಭಗವತ್ತತ್ತ್ವದ ಬಗ್ಗೆ ವಿಚಾರವನ್ನು ಆರಂಭಿಸೋಣ.

ಗೀತೆಯಲ್ಲಿ (೧) 'ನ ಹಿ ತೇ ಭಗವನ್ ವ್ಯಕ್ತಿಮ್' (೧೦-೧೪) ಮತ್ತು (೨) 'ಕೇಷು ಕೇಷು ಚ ಭಾವೇಷು ಚಿಂತ್ಯೋಽಸಿ ಭಗವನ್ ಮಯಾ' ಹೀಗೆ ಎರಡುಬಾರಿ ಭಗವತ್ ಶಬ್ದವನ್ನು ಉಪಯೋಗಿಸಿದೆ. ಶ್ರೀಕೃಷ್ಣ ಅರ್ಜುನರ ಸಂವಾದರೂಪವಾದ ಗೀತೆಯಲ್ಲಿ ''ಶ್ರೀ ಭಗವಾನುವಾಚ'' ಎಂದು ಅಲ್ಲಲ್ಲಿ ಭಗವಚ್ಛಬ್ದವನ್ನು ಬಳಸಲಾಗಿದೆ. ಶ್ರೀ ಶಂಕರಾಚಾರ್ಯರು ಒಮ್ಮೆ ಮಾತ್ರ (೩-೩೭) ಭಗವಚ್ಛಬ್ದವನ್ನು ಪುರಾಣಗಳಲ್ಲಿ ನೀಡಿರುವ ನಿರ್ವಚನಾನುಗುಣವಾಗಿ ವ್ಯಾಖ್ಯಾನಮಾಡಿರುತ್ತಾರೆ. ಹೇಗೆಂದರೆ : ಸಮಗ್ರವಾದ ಐಶ್ವರ್ಯ, ಧರ್ಮ, ಯಶಸ್ಸು, ಶ್ರೀ (ಸಂಪತ್ತು) ವೈರಾಗ್ಯ, ಮೋಕ್ಷ- ಈ ಆರುಪದಾರ್ಥಗಳಿಗೆ 'ಭಗ' ಎಂದು ಹೆಸರು- ಎಂದು ತಿಳಿಸಿ ''ಭೂತಗಳ ಉತ್ಪತ್ತಿ, ಲಯ, ಆಗತಿ, ಗತಿ, ವಿದ್ಯೆ, ಅವಿದ್ಯೆ- ಇವುಗಳನ್ನು ಪೂರ್ಣವಾಗಿ ಬಲ್ಲವನು ಭಗವಂತನೆನಿಸುತ್ತಾನೆ'' ಎಂದು ವಿವರಿಸಿದ್ದಾರೆ. ಇಲ್ಲಿ ಈ ಐಶ್ವರ್ಯಾದಿಗಳು ಕೃಷ್ಣನೆಂಬ ಹೆಸರಿನ ಭಗವಂತನ ಸೋಪಾಧಿಕ ರೂಪದಲ್ಲಿ ಹೇಗೆ ಅಪರಿಮಿತವಾಗಿವೆಯೋ ಹಾಗೆಯೇ ಜಗತ್ತಿನ ಉತ್ಪತ್ತಿ ಮುಂತಾದ ವಿಷಯದ ಜ್ಞಾನವೂ ಆ ಭಗವಂತನಲ್ಲಿದೆ- ಎಂದು ಗೀತೆಯಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ. ಈ ವಿಷಯದಲ್ಲಿ ಒಂದೆರಡು ಉದಾಹರಣೆಗಳನ್ನು ನೋಡೋಣ. (೧)'ಮತ್‌ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ' ಎಂಬಲ್ಲಿ ಭಗವಂತನು ತನ್ನ ಸೃಷ್ಟ್ಯಾದಿಮಹಿಮೆಯನ್ನು ತಿಳಿಸಿ ಅನಂತರ ತಾನು ಆ

ಯಾವ ಧರ್ಮಗಳಿಗೂ ಅಂಟಿಕೊಳ್ಳದೆ ನಿತ್ಯಶುದ್ಧನಾಗಿರುವೆನೆಂದು ಪ್ರಕಟಿಸಿದ್ದಾನೆ. (೨) 'ಪರಿತ್ರಾಣಾಯ ಸಾಧೂನಾಮ್' ಎಂಬಲ್ಲಿ ತಾನು ಲೋಕಕಲ್ಯಾಣಕ್ಕಾಗಿ ಹಾಗೂ ದುಷ್ಟನಿಗ್ರಹಕ್ಕಾಗಿ ಆಗಾಗ ಅವತಾರಮಾಡಿ ಧರ್ಮಸಂಸ್ಥಾಪನೆಯನ್ನು ಮಾಡುತ್ತಿರುವದಾಗಿಯೂ ತಿಳಿಸಿದ್ದಾನೆ.

ಭಗವಂತನ ರೂಪವು ಸೋಪಾಧಿಕ, ನಿರುಪಾಧಿಕ- ಹೀಗೆ ಎರಡು ರೀತಿಯಾಗಿ ಗೀತೆಯಲ್ಲಿ ವರ್ಣಿಸಲ್ಪಟ್ಟಿದೆ. ನಿರುಪಾಧಿಕರೂಪವನ್ನು 'ಯೇ ತ್ವಕ್ಷರಮನಿರ್ದೇಶ್ಯಮ್' ಎಂಬಲ್ಲಿ ತಿಳಿಸಲಾಗಿದೆ. ಇಲ್ಲಿ ಅಕ್ಷರಶಬ್ದದಿಂದ ಶ್ರುತಿಗಳಲ್ಲಿ ಬ್ರಹ್ಮತತ್ತ್ವವನ್ನು ಹಾಗೆ ನಿರ್ದೇಶಿಸಿರುವದನ್ನೇ ಸೂಚಿಸಿದೆ. 'ಅವ್ಯಕ್ತಮ್'ಎಂಬ ಶಬ್ದವು ನಿರ್ವಿಶೇಷವಾಗಿರುವದರಿಂದಲೇ ಯಾವ ಶಬ್ದಪ್ರತ್ಯಯಗಳಿಗೂ ಬ್ರಹ್ಮವು ಗೋಚರವಲ್ಲವೆಂಬುದನ್ನು ತಿಳಿಸಿದೆ. ಇನ್ನು 'ಅವಿನಾಶಿ ತು ತದ್ವಿದ್ಧಿ' 'ಯೋ ಬುದ್ಧೇಃ ಪರತಸ್ತು ಸಃ' ಎಂಬ ಶ್ಲೋಕಗಳಲ್ಲಿಯೂ ನಿರುಪಾಧಿಕತತ್ತ್ವವನ್ನೇ ತಿಳಿಸಿದೆ. ಮುಂದೆ ಕ್ಷೇತ್ರಜ್ಞಾಧ್ಯಾಯದಲ್ಲಿಯೂ ನಿರುಪಾಧಿಕತತ್ತ್ವವನ್ನೇ ಪ್ರತಿಪಾದಿಸಿದೆ. ಹಾಗೆಯೇ ೧೫ನೇ ಅಧ್ಯಾಯ್ಯದ ಕೊನೆಯಲ್ಲಿಯೂ ಕ್ಷರಾಕ್ಷರಗಳನ್ನು ಮೀರಿದ ನಿರ್ವಿಶೇಷತತ್ತ್ವವನ್ನು ಪುರುಷೋತ್ತಮನೆಂದು ವರ್ಣಿಸಿದೆ. ಆದ್ದರಿಂದ ಗೀತೆಯ ಉಪದೇಶಗಳಲ್ಲಿ ಭಗವತ್ತತ್ತ್ವವನ್ನು ನಿರುಪಾಧಿಕ ವಾಗಿ ತಿಳಿಸಿರುವದನ್ನು ಜಿಜ್ಞಾಸುಗಳು ಅನುಸಂಧಾನಮಾಡಬೇಕು. ಇದನ್ನು ಜ್ಞೇಯ ವೆಂದು- ಎಂದರೆ ಬ್ರಹ್ಮವಿದ್ಯೆಯಿಂದ ಅರಿತು ತತ್ತ್ವಸ್ವರೂಪರೇ ಆಗಿ ಸಾಧಕರು ಸಿದ್ಧರಾಗಿ ಕೃತಾರ್ಥರಾಗಿ ಮೋಕ್ಷವನ್ನು ಹೊಂದುವರೆಂದು ಭಗವಂತನು ತಿಳಿಸಿದ್ದಾನೆ.

ಇನ್ನು ಬ್ರಹ್ಮದ ಸೋಪಾಧಿಕವಾದ ರೂಪವನ್ನೂ ಭಗವಂತನು ಅರ್ಜುನನಿಗೆ ಉಪದೇಶಿಸಿದ್ದಾನೆ. ವಿಭೂತಿಯೋಗದಲ್ಲಿ ಇದರ ವಿವರ ಗಳಿವೆ. ಕಡೆಯಲ್ಲಿ ಇಡಿಯ ಜಗತ್ತನ್ನೇ ಒಂದಂಶದಿಂದ ತಾನೇ ಧರಿಸಿರುವ ದಾಗಿಯೂ ಭಗವಂತನು ತನ್ನ ಸೋಪಾಧಿಕರೂಪವನ್ನು ವಿವರಿಸಿದ್ದಾನೆ. ಎಲ್ಲಾ ಭೂತಗಳ ಆತ್ಮನೇ ತಾನು- ಎಂದೂ ಹೇಳಿಕೊಂಡಿದ್ದಾನೆ. ಸಮಸ್ತಪ್ರಾಣಿಗಳ ಸೃಷ್ಟಿಗೂ ತಾನೇ ಕಾರಣನೆಂದೂ ತಿಳಿಸಿದ್ದಾನೆ. ಹೀಗೆ

ಗೀತೆಯಲ್ಲಿ ತಿಳಿಸಿರುವ ಭಗವಂತನ ಸೋಪಾಧಿಕ- ನಿರುಪಾಧಿಕ ರೂಪಗಳನ್ನು ವಿಂಗಿಡಿಸಿಕೊಂಡು ಸಾಧಕರು ತಮ್ಮ ಶಕ್ತ್ಯನುಸಾರ ಆ ಭಗವಂತನ ಉಪಾಸನೆಯನ್ನಾಗಲಿ ಜ್ಞಾನವನ್ನಾಗಲಿ ಅಳವಡಿಸಿಕೊಂಡು ಕೃತಾರ್ಥರಾಗಬೇಕು.

## ಭಗವತ್ತತ್ತ್ವವಿವೇಕ - ೨

ಈವರೆಗೆ ವಿಚಾರಮಾಡಿರುವಂತೆ ಜಗತ್ತಿನ ಪರಮಾರ್ಥ ಅಥವಾ ತಿರುಳು- ಎಂದರೆ ಭಗವಂತನೇ - ಎಂದು ಗೊತ್ತಾಗಿದೆ. ಇಂಥ ಭಗವಂತನನ್ನು ಸೋಪಾಧಿಕವಾಗಿಯೂ ನಿರುಪಾಧಿಕವಾಗಿಯೂ ಚಿಂತಿಸಬಹುದು. ಯಾವ ಸಾಂಸಾರಿಕಬಂಧವಾಗಲಿ ಬಯಕೆಗಳಾಗಲಿ ಇಲ್ಲದಂಥ ಉತ್ತಮ ದರ್ಜೆಯ ಸಾಧಕರು ಕೇವಲ ತಮ್ಮ ಆತ್ಮನೇ ಭಗವಂತನೆಂಬ ನಿಶ್ಚಯದಿಂದ ಕೂಡಿದವರಾಗಿ ಯಾವ ಪ್ರಯೋಜನವನ್ನೂ ಬಯಸದೆ-ತಾಯಿ ಮಗುವನ್ನು ಪ್ರೀತಿಸುವಂತೆ - ಭಗವಂತನಲ್ಲಿ ಅನನ್ಯಪ್ರೇಮಭರಿತರಾಗಿ ಉಪಾಸನೆಮಾಡುತ್ತಾರೆ- ಹೀಗೆಂದು ಭಗವಂತನೇ ಗೀತೆಯಲ್ಲಿ 'ಅನನ್ಯಾಶ್ಚಿಂತಯಂತೋ ಮಾಮ್' ಎಂದು ಉದ್ಘೋಷಿಸಿರುತ್ತಾನೆ. ಈ ಚಿಂತನೆ ಅಥವಾ ಉಪಾಸನೆಯು ಭಾವನೆಯಲ್ಲ. ಮತ್ತೇನೆಂದರೆ ನಿರುಪಾಧಿಕಬ್ರಹ್ಮಸ್ವರೂಪದ ಅನುಸಂಧಾನವೇ ಆಗಿದೆ. ಈ ವಿಷಯದಲ್ಲಿ ಶ್ರೀ ಶಂಕರಭಗವತ್ಪಾದರು ತಮ್ಮ ಭಾಷ್ಯದಲ್ಲಿ ಹೀಗೆಂದಿರುತ್ತಾರೆ: ''ಅನನ್ಯಾಃ ಅಪೃಥಗ್ ಭೂತಾಃ ಪರಂ ದೇವಂ ನಾರಾಯಣಮ್ ಆತ್ಮತ್ವೇನ ಗತಾಃ ಸನ್ತಃ'' ಎಂದರೆ ಪರಮದೇವನಾದ ನಾರಾಯಣನನ್ನು ತಮ್ಮ ಆತ್ಮನೆಂದೇ ಅರಿತು ಅನನ್ಯರಾಗಿ ಎಂದರೆ ಅವನಿಗಿಂತ ತಾವು ಬೇರೆಯಲ್ಲವೆಂದು ಅರಿತವರಾಗಿ ಉಪಾಸಿಸುತ್ತಾರೆ- ಎಂದಭಿಪ್ರಾಯ. ಇದು ಕೂಡ ಉಪಚಾರಕ್ಕೆ ಹೇಳಿದ ಮಾತಾಗಿದೆ. ಏಕೆಂದರೆ ಜ್ಞಾನನಿಷ್ಠರಲ್ಲಿ ಜ್ಞಾತೃ, ಜ್ಞಾನ, ಜ್ಞೇಯ- ಎಂಬ ಭೇದಗಳು ಉಳಿದಿರುವದಿಲ್ಲ. ಹೀಗೆ ಶಾಸ್ತ್ರದಲ್ಲಿ ಬ್ರಹ್ಮವನ್ನು ಜ್ಞೇಯವೆಂದು ಹೇಳಿದ್ದರೆ ನಿರುಪಾಧಿಕವೆಂದೂ ಉಪಾಸ್ಯವೆಂದು ಹೇಳಿದ್ದರೆ ಸೋಪಾಧಿಕವೆಂದೂ ತಿಳಿಯಬೇಕು.

ಈಗ ಲೋಕಾನುಗ್ರಹಕ್ಕಾಗಿ ಭಗವಂತನು ಧರಿಸುವ ವಿಶ್ವರೂಪವನ್ನು ವಿಚಾರಮಾಡೋಣ. ಗೀತೆಯಲ್ಲಿ ಇಂಥ ಮಾಯಾಮಯರೂಪದ ವರ್ಣನೆಯೂ ಇದೆ. ''ಅಜೋಽಪಿ ಸನ್ ಅವ್ಯಯಾತ್ಮಾ'' ಎಂದಾರಂಭಿಸಿ ''ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ'' ಎಂಬವರೆಗಿನ ಶ್ಲೋಕಗಳಲ್ಲಿ ವರ್ಣಿಸಿರುವದೆಲ್ಲವೂ ಸೋಪಾಧಿಕ ರೂಪವೇ ಆಗಿದೆ. ಹಾಗೆಯೇ ಭಕ್ತರನ್ನು ಅನುಗ್ರಹಿಸುವದಕ್ಕಾಗಿ ತನ್ನ ಯೋಗಮಾಹಾತ್ಮ್ಯೆಯಿಂದ ಭಗವಂತನು ತನ್ನ ಅದ್ಭುತವಾದ ವಿಶ್ವರೂಪವನ್ನು - ಹೇಗೆ ಅರ್ಜುನನಿಗೆ ತೋರಿಸಿದ್ದಾನೋ ಹಾಗೆಯೇ- ಅಲ್ಲಲ್ಲಿ ಸೋಪಾಧಿಕ ರೂಪದಿಂದ ಪ್ರಕಟನಾಗಿರುತ್ತಾನೆ. ಪುರಾಣಗಳಲ್ಲಿ ಇಂಥ ಸಂದರ್ಭಗಳನ್ನು ಕಾಣಬಹುದು. ಉದಾಹರಣೆಗೆ ಪ್ರಹ್ಲಾದ, ಧ್ರುವ, ಬಲಿರಾಜ, ಗಜೇಂದ್ರ- ಮುಂತಾದವರಿಗೆ ಸಮಯಕ್ಕೆ ತಕ್ಕಂತೆ ತನ್ನ ಐಶ್ವರ ರೂಪವನ್ನು ತೋರಿಸಿದ್ದಾನೆ. ಇವೂ ಸೋಪಾಧಿಕರೂಪಗಳೇ ಆಗಿವೆ.

**ಭಗವಂತನ ಪರಭಾವ :** ಹೀಗೆ ಸೋಪಾಧಿಕ- ನಿರುಪಾಧಿಕ ರೂಪಗಳಲ್ಲಿ ನಿರುಪಾಧಿಕರೂಪವೇ ಸ್ವಾಭಾವಿಕ ಅಥವಾ ಪರಮಾರ್ಥವಾದುದು. ಸೋಪಾಧಿಕವು ಭಕ್ತರ ಅನುಗ್ರಹಕ್ಕಾಗಿ ತಾತ್ಕಾಲಿಕವಾಗಿ ಸ್ವೀಕರಿಸಲ್ಪಟ್ಟದ್ದು. ಅದು ಧರ್ಮರಕ್ಷಣೆಗಾಗಿಯೊ, ಭಕ್ತಪರಿ ಪಾಲನೆಗಾಗಿಯೊ- ಧರಿಸಿದ್ದಾಗಿದೆ. ಎಂದರೆ ಆಯಾ ನಾಮರೂಪಗುಣ ಶಕ್ತಿ ಬಲ ವೀರ್ಯತೇಜಸ್ಸು- ಮುಂತಾದ ವಿಶೇಷಗಳಿಂದ ಕೂಡಿದ್ದಾಗಿ ಏಕರೂಪವಾಗಿಯೂ ಬಹುರೂಪವಾಗಿಯೂ ತೋರಿಕೊಂಡದ್ದಾಗಿದೆ. ಈ ತೋರಿಕೆಯ ರೂಪಗಳನ್ನೇ ವೇದಾಂತದಲ್ಲಿ 'ಮಾಯೆ' ಎಂದು ಕರೆಯಲಾಗಿದೆ. ಅಥವಾ ಪ್ರಕೃತಿ ಎಂದೂ ಹೆಸರಿಸಲಾಗಿದೆ. ಈ ಮಾಯೆಯು ಪರಮಾತ್ಮನ ಅಧೀನವಾಗಿದ್ದು ಅವನ ನೆರಳಿನಂತಿದ್ದು ಆ ಭಗವಂತನ ಇಚ್ಛಾನುಸಾರವಾಗಿ ಆಯಾ ಆಕಾರಗಳನ್ನು ಹೊಂದುತ್ತಾ ಭಗವಂತನ ಸಂಬಂಧದಿಂದಲೇ ಅವನ ಅವಲಂಬನೆಯಿಂದಲೇ ತನ್ನನ್ನು ಪ್ರಕಟಿಸಿಕೊಳ್ಳುತ್ತಾ ಪರಿಣಾಮವನ್ನು ಹೊಂದುತ್ತಿರುತ್ತದೆ. ಆದರೆ ಅವ್ಯಯನಾದ ಭಗವಂತನಿಗೆ ಇದರ ಸಂಪರ್ಕವಿರುವದಿಲ್ಲ.

ಇನ್ನು ನಿರುಪಾಧಿಕಬ್ರಹ್ಮಕ್ಕೆ ಶಕ್ತಿಯೆಂದರೇನು ? ಎಂದರೆ ಅದು ಬ್ರಹ್ಮವೇ ಎಂದರ್ಥ. ಸಕ್ಕರೆಯಿಂದ ಮಾಡಿರುವ ಗಣಪತಿಯ ಸೊಂಡಿಲು ಹೊಟ್ಟೆ, ಇಲಿ, ಹಾವು- ಎಲ್ಲವೂ ಸಕ್ಕರೆಯೇ ಅಲ್ಲವೆ ? ಇಲ್ಲಿ ಸ್ವಾರಸ್ಯವೇನೆಂದರೆ ವ್ಯವಹಾರಕಾಲಕ್ಕೆ ಇಲಿ, ಹಾವು-ಇತ್ಯಾದಿಗಳು ಬೇರೆ ಬೇರೆಯಾದರೂ ಅವು ಸಕ್ಕರೆಯಿಂದಲೇ ಹೊರತೋರಿಕೊಂಡಿರುವಾಗ ಆ ನಾಮರೂಪಗಳು ಮಿಥ್ಯೆಯೇ ಹೇಗೋ - ಅಥವಾ ಸಕ್ಕರೆಯ ರೂಪದಿಂದ ಅನನ್ಯವೋ, ಹಾಗೆಯೇ ಭಗವಂತನ ಮಾಯಾಮಯರೂಪಗಳೂ ಅವನೇ ಆಗಿವೆ ಅಥವಾ ಅವನಿಗಿಂತ ಬೇರೆಯಾಗಿರುವದಿಲ್ಲ. ಬೇರೆಯಾಗಿ ತೋರಲು ಅಡ್ಡಿಯಿಲ್ಲ. ಆ ಸ್ಥಿತಿಯಲ್ಲಿ ಅವು ಮಿಥ್ಯೆ ಎಂಬಿದು ಎಲ್ಲರಿಗೂ ಅನುಭವಗಮ್ಯವೇ ಆಗಿದೆ. ಗೀತೆಯಲ್ಲಿರುವ 'ಬ್ರಹ್ಮಣೋ ಹಿ ಪ್ರತಿಷ್ಠಾಽಹಮ್' ಎಂಬ ಶ್ಲೋಕದ ಭಾಷ್ಯದಲ್ಲಿ ಶ್ರೀ ಶಂಕರಾಚಾರ್ಯರು ಹೀಗೆಂದಿದ್ದಾರೆ : ''ಯಾವ ಈಶ್ವರಶಕ್ತಿಯಿಂದ ಭಕ್ತಾನುಗ್ರಹವೆಂಬ ಪ್ರಯೋಜನಕ್ಕಾಗಿ ಬ್ರಹ್ಮವು ಪ್ರವರ್ತಿಸುವದೋ ಆ ಶಕ್ತಿಯು ಬ್ರಹ್ಮವೇ ಆದ ನಾನಾಗಿರುವೆನು. ಶಕ್ತಿ- ಶಕ್ತಿಮಾನ್ ಇವು ಯಾವಾಗಲೂ ಅನನ್ಯವಾಗಿರುವದೇ ಇದರ ರಹಸ್ಯವು'' ಅಥವಾ ಸವಿಕಲ್ಪಕಬ್ರಹ್ಮವು 'ಬ್ರಹ್ಮ' ಎಂಬ ಶಬ್ದದಿಂದಲೇ ಹೇಳಲ್ಪಡುತ್ತಿದೆ. ಅದು ನಿರ್ವಿಕಲ್ಪಬ್ರಹ್ಮವೇ ಆಗಿದೆ. ಹೀಗೆ ಭಗವಂತನೇ ಎಲ್ಲಕ್ಕೂ ಆಶ್ರಯನು. ಬೇರೊಂದು ಆಶ್ರಯವೆಂಬುದೇ ಇಲ್ಲ- ಎಂದು ತಿಳಿಯಬೇಕು. ಹೀಗೆ ಅಧ್ಯಾತ್ಮಶಾಸ್ತ್ರದಲ್ಲಿ ಸೋಪಾಧಿಕ- ನಿರುಪಾಧಿಕಬ್ರಹ್ಮಗಳನ್ನು ನಿರ್ದೇಶಿಸಿದರೂ ನಿರುಪಾಧಿಕವೇ ಪರಮ ಸತ್ಯವೂ ಶಾಶ್ವತವೂ ಆಗಿದ್ದು ಅದೇ ಉಪಾಧಿನಿಮಿತ್ತವಾಗಿ ಸೋಪಾಧಿಕವಾಗಿ ಕಾಣಿಸಿಕೊಂಡು ಜಗದ್ವ್ಯಾಪಾರಗಳನ್ನು ನಿರ್ವಹಿಸುತ್ತಿದೆ- ಎಂದಭಿಪ್ರಾಯ.

## ಭಗವತ್ತತ್ತ್ವವಿವೇಕ - ೩

ಭಗವದ್ಗೀತೆಯಲ್ಲಿ 'ಪರಂ ಭಾವಮಜಾನನ್ತಃ' ಎಂಬಲ್ಲಿ ಹೇಳಿರುವ 'ಪರಭಾವ'ವೆಂದರೇನು ? ಎಂಬಿದನ್ನು ಈ ಹಿಂದೆಯೇ ಪ್ರಸ್ತಾಪಿಸಿದೆ. ಅಲ್ಲಲ್ಲಿ ಗೀತಾ ಶ್ಲೋಕಗಳಲ್ಲಿ ಈ ತತ್ತ್ವವನ್ನು ಬೇರೆ ಬೇರೆಯ ರೀತಿ

ಯಿಂದಲೂ ತಿಳಿಸಿದೆ. ಪರಮಾತ್ಮನ ನಿರ್ವಿಕಲ್ಪಸ್ವರೂಪವನ್ನೇ ಪರಭಾವವೆಂದು ಇಲ್ಲಿ ಕರೆದಿದೆ. ಇದು ವ್ಯಕ್ತಕ್ಕಿಂತಲೂ ಮಿ[illegible]ವ ಸನಾತನವಾದ ತತ್ತ್ವವಾಗಿದೆ. ಮೂಢರಾದವರು ಈ ನನ್ನ ತತ್ತ್ವವನ್ನು ಅರಿಯರು-ಎಂದು ಭಗವಂತನೇ ಹೇಳಿರುತ್ತಾನೆ. ಶ್ರೀ ಶಂಕರಾಚಾರ್ಯರು ತಮ್ಮ ಉಪೋದ್ಘಾತಭಾಷ್ಯದಲ್ಲಿಯೂ ಹೀಗೆಂದಿದ್ದಾರೆ. ''ಆ ಭಗವಂತನು.... ಅಜನೂ ಅವ್ಯಯನೂ ಭೂತಗಳಿಗೆ ಒಡೆಯನೂ ಆಗಿದ್ದು ನಿತ್ಯಶುದ್ಧಬುದ್ಧಮುಕ್ತಸ್ವಭಾವನಾಗಿರುತ್ತಾನಾದರೂ ಲೋಕಾನುಗ್ರಹಕ್ಕಾಗಿ ದೇಹವುಳ್ಳವನಂತೆಯೂ ಹುಟ್ಟಿರುವವನಂತೆಯೂ ಕಂಡುಬರುತ್ತಾನೆ'' ಇಲ್ಲಿರುವ ''ಸದಾ ಸಂಪನ್ನಃ'' ಎಂಬ ಶಬ್ದವು ಭಗವಂತನಿಗೆ ಜ್ಞಾನವೇ ಮುಂತಾದವುಗಳೊಡನೆ ಗುಣಗುಣಿಭಾವಸಂಬಂಧವಿಲ್ಲವೆಂಬುದನ್ನು ತಿಳಿಸುತ್ತದೆ.

**ಭಗವಂತನು ಪರಮಗುರುವಾಗಿರುವಿಕೆ :** ಆ ಭಗವಂತನು ಕಲ್ಪಾದಿಯಲ್ಲೇ ಸಂಪ್ರದಾಯಪ್ರವರ್ತನೆಗಾಗಿ ಸಾಧನರಹಸ್ಯಸಹಿತವಾದ ಸಮ್ಯಗ್ದರ್ಶನವೆಂಬ ಯೋಗವನ್ನು ಅಧಿಕಾರಿಗಳಿಗೆ ಉಪದೇಶಮಾಡಿರುತ್ತಾನೆ. ಸಂಪ್ರದಾಯವು ವಿಚ್ಛಿನ್ನವಾದಾಗ ತಾನೇ ಅವತಾರಮಾಡಿ ತನ್ನ ಪರತತ್ತ್ವವನ್ನು ಗುಣಾಧಿಕರಾದ ಉತ್ತಮಾಧಿಕಾರಿಗಳಿಗೆ ಉಪದೇಶಮಾಡಿ ಅವರನ್ನು ಕೃತಾರ್ಥರನ್ನಾಗಿ ಮಾಡಿರುತ್ತಾನೆ. ಇನ್ನು ಸಂಪ್ರದಾಯವಿದರಾದ ಆಚಾರ್ಯಪುರುಷರು ಇದ್ದುಕೊಂಡು ತಮ್ಮ ಶಿಷ್ಯರಿಗೆ ಉಪದೇಶಿಸುತ್ತಿರುವ ಕಾಲದಲ್ಲಿಯೂ ಆ ಉಪದೇಶವು ಫಲಕಾರಿಯಾಗುವಂತೆ ಮಾರ್ಗದರ್ಶನ ಮಾಡುವದಕ್ಕಾಗಿ ತಾನು ಅಂಥ ಆಚಾರ್ಯರ ಹೃದಯದಲ್ಲಿಯೇ ನೆಲೆಸಿ ಜ್ಞಾನಪ್ರಕಾಶನದಿಂದ ಅವರ ಮೋಹವನ್ನು ಕಳೆದು ಅನುಗ್ರಹಿಸುತ್ತಾನೆ. ಆದ್ದರಿಂದ ವೇದಾಂತಸಂಪ್ರದಾಯಕ್ಕೆ ಅವನೇ ಪರಮಗುರುವೆನಿಸಿರುತ್ತಾನೆ. ಏಕೆಂದರೆ ಅವನ ಅನುಗ್ರಹವಿಲ್ಲದೆ ದೇವತೆಗಳಿಗಾಗಲಿ ಋಷಿಗಳಿಗಾಗಲಿ ಪರಮಾರ್ಥತತ್ತ್ವವು ಎಂದಿಗೂ ತಿಳಿಯಲಾರದು.

ಇನ್ನು ಭಗವಂತನು ಜಗತ್ತಿನ ಉತ್ಪತ್ತಿಸ್ಥಿತಿಪ್ರಲಯಗಳಿಗೆ ಕಾರಣನಾಗಿರುತ್ತಾನೆಂಬುದೂ ಅವನ ವಿಭೂತಿಗಳೇ ಆದ ಪರಾ, ಅಪರಾ - ಎಂಬ

ಎರಡು ಪ್ರಕೃತಿಗಳ ಮೂಲಕವೇ- ಎಂದು ತಿಳಿಯಬೇಕು. ಇದನ್ನು 'ಭೂಮಿರಾಪಃ' ಇತ್ಯಾದಿಶ್ಲೋಕಗಳಿಂದ ಸ್ಪಷ್ಟಪಡಿಸಿರುತ್ತಾನೆ. ಈ ಪರಾಪರಪ್ರಕೃತಿಗಳೇ ಭಗವಂತನ ಅಂಶಗಳು- ಎಂದೂ ವ್ಯವಹರಿಸಲ್ಪಟ್ಟು ಅನಾದಿಯಾದವುಗಳೆಂದು ಗೀತೆಯಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತವೆ. ಇವುಗಳ ಮೂಲಕವೇ ಭಗವಂತನು 'ಈಶ್ವರ'ನೆನಿಸಿರುತ್ತಾನೆ. ಇನ್ನು ಕೇವಲ ಭಗವಂತನೇ ಜಗತ್ಕಾರಣನೆಂದು ನಿರ್ದೇಶಮಾಡಿರುವ ಸ್ಥಳಗಳಲ್ಲಿಯೂ ಅಥವಾ ಪ್ರಕೃತಿಯೇ ಪ್ರಪಂಚದ ಸೃಷ್ಟ್ಯಾದಿಗಳೆಲ್ಲಕ್ಕೂ ಕಾರಣವೆಂದು ಹೇಳಿರುವ ಸ್ಥಳಗಳಲ್ಲಿಯೂ ಸಮನ್ವಯವು ಹೇಗೆಂದರೆ : ಭಗವಂತನಿಗೆ ಉಪಾಧಿಭೂತವಾದ ಅವನ ಪ್ರಕೃತಿಯ ಮೂಲಕವೇ ಕಾರಣತ್ವವೆಂದು ತಿಳಿಯಬೇಕೇ ಹೊರತು ಸ್ವತಃ ಕಾರಣತ್ವವು ಭಗವಂತನಲ್ಲಿಲ್ಲ. ಇನ್ನು ಪ್ರಕೃತಿಯೂ ಸ್ವತಂತ್ರವಾಗಿ ಕಾರಣವಲ್ಲ. ಮತ್ತೇನೆಂದರೆ ಆ ವಾಸು-ದೇವನ ಅಧ್ಯಕ್ಷತೆ (ಸನ್ನಿಧಾನ)ಯಲ್ಲಿ ಮಾತ್ರವೇ ಅದು ಕಾರಣವೆನಿಸುತ್ತದೆ. ಇಷ್ಟೇ ಹೊರತು ಕೇವಲ ಭಗವಂತನೇ ಆಗಲಿ, ಕೇವಲ ಪ್ರಕೃತಿಯೇ ಆಗಲಿ ಕಾರಣರಲ್ಲ. ಏಕೆಂದರೆ ಕಾರ್ಯಕಾರಣಭಾವವು ಮಾಯಿಕವೇ ಹೊರತು ಪರಮಾರ್ಥವಲ್ಲ- ಎಂಬಿದೇ ಸಿದ್ಧಾಂತವು.

ಇನ್ನು ಬ್ರಹ್ಮವು ಪರಾಪರಪ್ರಕೃತಿಗಳಿಂದ ವಿಶಿಷ್ಟವಾಗಿದೆ- ಎಂದು ಗೀತೆಯಲ್ಲಿ ಹೇಳಿರುವದು ಅವಿದ್ಯಾದೃಷ್ಟಿಯಿಂದಲೇ- ಎಂದು ತಿಳಿಯಬೇಕು. ಮತ್ತು ಈ ಎರಡು ಪ್ರಕೃತಿಗಳಿಗೆ ಭಗವಂತನು ಈಶ್ವರನು (ಒಡೆಯನು) ಎಂಬಿದೂ ಅವಿದ್ಯಾವ್ಯವಹಾರವೇ ಆಗಿರುತ್ತದೆ. ಹೇಗೆಂದರೆ ಭಗವಂತನ ಪರಾಪ್ರಕೃತಿಯು ವಾಸುದೇವನ 'ಅಂಶ'ವೆಂದು ಗೀತೆಯಲ್ಲಿ ತಿಳಿಸಿದೆ. ಇದು ನಿಜ, ಆದರೆ ಈ ಅಂಶತ್ವವು ನಿಜವೇ - ಎಂದೇನೂ ಅಲ್ಲ. ಏಕೆಂದರೆ 'ನನ್ನ ಅಂಶವೇ' ಎಂದು ಅವಧಾರಣೆಮಾಡದೆ 'ಮಮೈವಾಂಶಃ' (ನನ್ನದೇ ಅಂಶ) ಎಂದು ತಿಳಿಸಿರುತ್ತದೆ. ಆದ್ದರಿಂದ ಅಂಶವು ಪರಮಾರ್ಥವಾಗಿ ಭಗವಂತನೇ ಎಂದು ಏಕತ್ವವನ್ನು ದೃಢಗೊಳಿಸುವದಕ್ಕಾಗಿ ನನ್ನದೇ ಎಂಬ ಮಾತನ್ನು ಬಳಸಿದೆ ಎಂದು ತಿಳಿದುಬರುತ್ತದೆ. ಇದರ ವಿವರವು ಹೀಗಿದೆ. ''ಯಾವ ಪದವಿಯನ್ನು ಪಡೆದವರು ಮತ್ತೆ ಹಿಂದಿರು

ಗುವದಿಲ್ಲವೋ ಅದೇ ನನ್ನ ಪರಮಸ್ಥಾನವು'' ಎನ್ನುವಲ್ಲಿ ಈ ಅಪುನರಾವೃತ್ತಿಯು ಹೇಗೆ ಆಯಿತು ? ಎಂಬ ಶಂಕೆಯ ಪರಿಹಾರಕ್ಕಾಗಿಯೇ ''ಮಮೈವಾಂಶಃ'' ಎಂಬ ಉಪದೇಶವು ಬಂದಿದೆ. ಒಂದು ವೇಳೆ ಅಂಶತ್ವವೇ ನಿಜವಾಗಿದ್ದರೆ ಮೇಲೆ ತಿಳಿಸಿರುವ ''ಯದ್ಗತ್ವಾ..... ಪರಮಂ ಮಮ'' ಎಂಬುದು ಹೇಗೆ ಸರಿಯಾದೀತು ? ಎಂಬ ಸಂದೇಹವು ಪರಿಹಾರವಾಗುತ್ತಿರಲಿಲ್ಲ. ಏಕೆಂದರೆ ಹೇಗೆ ಈಗ ಅಂಶಿಯಾದ ಪರಮಾತ್ಮನಿಂದ ಭ್ರಷ್ಟನಾಗಿರುವ ಜೀವನು ಮುಂದೆ ಆ ಅಂಶಿಯನ್ನೇ ಸೇರಿದರೂ ಮತ್ತೊಮ್ಮೆ ಜಾರಿಬೀಳುವದೇ ಸರಿ- ಎಂದು ತೀರ್ಮಾನವಾಗಿಬಿಡುತ್ತಿತ್ತು. ಆದ್ದರಿಂದ ಭಾಷ್ಯಕಾರರು ಜಲಸೂರ್ಯಕನ ದೃಷ್ಟಾಂತವನ್ನು ಕೊಟ್ಟು ಕಲ್ಪಿತಸೂರ್ಯ (ಆಭಾಸನು) ನಿಜವಾದ ಸೂರ್ಯನನ್ನು ಸೇರಿದಂತೆ - ಎಂದೇ ಸಮನ್ವಯಗೊಳಿಸಿದ್ದಾರೆ.

'ಮಮೈವಾಂಶೋ ಜೀವಲೋಕೇ' ಎಂಬಲ್ಲಿ ಜೀವನು ನನ್ನದೇ ಅಂಶನಾಗಿರುತ್ತಾನೆ- ಎಂದು ಏವಕಾರದಿಂದ ದೃಢಪಡಿಸಿರುವದನ್ನು ಈಗಾಗಲೇ ತಿಳಿಸಲಾಗಿದೆ. ಇನ್ನು ಸುಸ್ಪಷ್ಟವಾಗಿಯೇ ಬಾಯಿಬಿಟ್ಟು ಹೇಳಿರುವ ಈ ವಾಕ್ಯವನ್ನು ನೋಡಿರಿ. ''ಎಲೈ ಭರತವಂಶೋತ್ಪನ್ನನೆ, ಕ್ಷೇತ್ರಜ್ಞ (ಜೀವ)ನನ್ನೂ ನಾನು ಎಂದೇ ತಿಳಿ''- ಎಂಬುದಾಗಿ ಭಗವಂತನು ಹೇಳಿರುತ್ತಾನೆ. ಇಲ್ಲಿ ಕ್ಷೇತ್ರ, ಹಾಗೂ ಕ್ಷೇತ್ರಜ್ಞರ ನಿಜವನ್ನು ನಿರ್ಣಯಿಸುವದಕ್ಕಾಗಿಯೇ ಹದಿಮೂರನೆಯ ಅಧ್ಯಾಯವು ಬಂದಿರುತ್ತದೆ. ಆದರೆ ಬೇರೆಯ ಅಧ್ಯಾಯದಲ್ಲಿ ಬಂದಿರುವ ಅಂಶ- ಎಂಬ ಶಬ್ದದ ಸಾಮರ್ಥ್ಯದಿಂದ ಜೀವನನ್ನು ಪರಮಾತ್ಮನ ಏಕದೇಶವೆಂದು ಕಲ್ಪಿಸಲು ಸಾಧ್ಯವಾಗುವಂತೆ ಇಲ್ಲಿ ಹಾಗೆ ಕಲ್ಪಿಸಲು ಸಾಧ್ಯವೇ ಇರುವದಿಲ್ಲ. ಆದ್ದರಿಂದಲೇ ಶ್ರೀ ಶಂಕರಾಚಾರ್ಯರು ಸಂಬಂಧೋಕ್ತಿಯನ್ನು ಇಲ್ಲಿ (೧೩ನೆಯ ಅಧ್ಯಾಯದಲ್ಲಿ) ಹೀಗೆ ಬರೆದಿದ್ದಾರೆ.

''ಏಳನೆಯ ಅಧ್ಯಾಯದಲ್ಲಿ ಈಶ್ವರನಿಗೆ ಎರಡು ಪ್ರಕೃತಿಗಳೆಂದು ಸೂಚಿಸಲಾಗಿದೆ. ಪರಾ ಮತ್ತು ಅಪರಾ- ಎಂಬಿವೇ ಅವುಗಳು. ಇವುಗಳಲ್ಲಿ ಅಪರಾಪ್ರಕೃತಿಯು ಸಂಸಾರಕ್ಕೆ ಕಾರಣವಾಗಿರುತ್ತದೆ. ಪರಾ

ಎಂಬಿದೇ ಕ್ಷೇತ್ರಜ್ಞರೂಪವಾದ ಚೇತನವಾದ ಈಶ್ವರಾತ್ಮಕಪ್ರಕೃತಿಯು. ಹೀಗೆ ಭಗವಂತನು ಈ ಪರಾಪರಪ್ರಕೃತಿಗಳ ಮೂಲಕ ಜಗತ್ತಿನ ಉತ್ಪತ್ತಿ ಸ್ಥಿತಿಲಯಗಳಿಗೆ ಕಾರಣನಾಗಿರುತ್ತಾನೆ. ಹೀಗೆ ಈಶ್ವರನ ಈ ಎರಡು ಪ್ರಕೃತಿಗಳನ್ನು ವಿವರಿಸುವ ಮೂಲಕ ಇವುಗಳಿಗೆ ಆಧಾರನಾದ ಭಗವಂತನ ತತ್ತ್ವವನ್ನು ನಿರ್ಧಾರಣೆಮಾಡುವದಕ್ಕಾಗಿ ಈ ಕ್ಷೇತ್ರಾಧ್ಯಾಯವು ಆರಂಭ ವಾಗಿದೆ''.

ಈ ಅಭಿಪ್ರಾಯವನ್ನು ಪರಿಶೀಲಿಸಿದಾಗ ೧೨ನೆಯ ಅಧ್ಯಾಯದಲ್ಲಿ ಹೇಳಿರುವ ಅಕ್ಷರೋಪಾಸನೆ ಮತ್ತು ೧೩ನೆಯ ಅಧ್ಯಾಯದಲ್ಲಿ ಹೇಳಿರುವ ಕ್ಷೇತ್ರಜ್ಞನೇ ಪರಮಾತ್ಮನು ಎಂಬ ಜ್ಞಾನ- ಇವು ಕೇವಲ ಮನೋವೃತ್ತಿ ರೂಪವಾದ ಭಾವನಾತ್ಮಕವಾದ ಚಿಂತನವಲ್ಲ. ಮತ್ತೇನೆಂದರೆ ವಸ್ತುನಿಷ್ಠ ವಾದ ಸ್ವತಂತ್ರವಾದ ಜ್ಞಾನವೇ ಎಂದು ತಿಳಿದುಬರುತ್ತದೆ.

ಈ ರೀತಿಯಲ್ಲಿ ವಿಚಾರಮಾಡಿದಾಗ ಪರಾಪ್ರಕೃತಿಯು ನಿಜವಾಗಿ ಭಗವಂತನ ಸ್ವರೂಪವೇ ಆಗಿದ್ದು ಆತನಿಗಿಂತ ಬೇರೆಯಾಗಿರುವದಿಲ್ಲ- ಎಂದು ತಿಳಿದುಬರುತ್ತದೆ. ಹೀಗೆಯೇ ಅಪರಾಪ್ರಕೃತಿಯೂ ಕೂಡ ವ್ಯವ ಹಾರದೃಷ್ಟಿಯಿಂದ ಅನಾದಿಯೆನಿಸಿದ್ದು ನಿಜವಾಗಿ ಪರಮೇಶ್ವರನಿಗಿಂತ ಎಂದಿಗೂ ಬೆರೆಯಾಗಿರುವದಿಲ್ಲ. ಹೇಗೆಂದರೆ ಅದು ತೋರುವಿಕೆಯ ರೂಪದಿಂದ ಅಪರಾಪ್ರಕೃತಿಯೆನಿಸಿದ್ದು ಆ ಮೂಲಕ ಪರಮೇಶ್ವರನನ್ನು ಜಗತ್ತಿನ ಉತ್ಪತ್ತಿಸ್ಥಿತಿಲಯಾದಿಗಳಿಗೆ ಕಾರಣನೆಂದು ಕರೆಯಲಾಗಿದೆ. ನಿಜ ವಾಗಿ ಹೇಳಬೇಕೆಂದರೆ ಆ ಅಪರಾಪ್ರಕೃತಿಯ ತಿರುಳೂ ಭಗವಂತನೇ ಆಗಿರುತ್ತಾನೆ. ಏಕೆಂದರೆ ಭಗವಂತನೇ ಹೀಗೆ ತಿಳಿಸುತ್ತಿದ್ದಾನೆ : ''ಎಲೈ ಪಾರ್ಥನೆ, ಈ ಅಪರಾಪ್ರಕೃತಿ ಎಂಬಿದು ದೇವನಾದ ನನ್ನ ಮಾಯೆಯೇ ಆಗಿದೆ. ಇದು ಗುಣಮಯವಾಗಿದ್ದು ದಾಟಲು ಅಸಾಧ್ಯವಾಗಿದೆ. ಆದರೆ ಯಾರು ನನ್ನನ್ನೇ ಶರಣುಹೊಂದುವರೋ ಅವರು ಮಟ್ಟಿಗೆ ಈ ಮಾಯೆ ಯನ್ನು ದಾಟುವರು. ಇಲ್ಲಿ ಭಾಷ್ಯಕಾರರ ವಿವರಣೆ ಹೀಗಿದೆ : ''ಹೀಗಿರುವಲ್ಲಿ ಯಾರು ಎಲ್ಲಾ ಧರ್ಮಾಧರ್ಮಗಳನ್ನೂ ಬಿಟ್ಟು ಮಾಯಾವಿಯಾದ ನನ್ನೊಬ್ಬನನ್ನೇ ಎಲ್ಲಾ ರೀತಿಯಿಂದಲೂ ಶರಣು

ಹೊಂದುವರೋ ಅವರು ಈ ಸರ್ವಭೂತಮೋಹಿನಿಯಾದ ಮಾಯೆಯನ್ನು ದಾಟುವರು- ಎಂದರೆ ಈ ಸಂಸಾರಬಂಧನದಿಂದ ಬಿಡುಗಡೆಯನ್ನು ಹೊಂದುವರು.'' ಹೀಗೆ ಭಾಷ್ಯಕಾರರು ಪ್ರಕೃತಿಯನ್ನು ಮಾಯೆಯೆಂದು ಹೆಸರಿಸಿ ಅದನ್ನು ದಾಟುವ ಸಾಮರ್ಥ್ಯವನ್ನು ತನ್ನ ಭಕ್ತರಾದ ಜ್ಞಾನಿಗಳಿಗೆ ಉಪದೇಶಿಸಿರುತ್ತಾನೆ. ಇಲ್ಲಿ ''ಮಮ ಮಾಯಾ'' ಎಂಬಿದು ಮಹಾವಿಷ್ಣುವಾದ ತನ್ನ ಸ್ವಭಾವಕ್ಕೆ ಸೇರಿದ್ದಾಗಿರುವ ಮಾಯೆಯು - ಎಂದು ಎಚ್ಚರಿಸಿರುತ್ತಾನೆ. ಹಾಗೂ ತನ್ನನ್ನು ಬಿಟ್ಟರೆ ಮಾಯೆಗೆ ಏನೇನೂ ಅಸ್ತಿತ್ವವಿಲ್ಲವೆಂದೂ ತಿಳಿಸಿರುತ್ತಾನೆ. ಹೀಗೆಯೇ ೧೫ನೆಯ ಅಧ್ಯಾಯದಲ್ಲಿ 'ನ ರೂಪಮಸ್ಯೇಹ', 'ತತಃ ಪದಂ ತತ್ಪರಿಮಾರ್ಗಿತವ್ಯಂ' ಎಂಬೀ ಶ್ಲೋಕಗಳಲ್ಲಿಯೂ ಭಾಷ್ಯಕಾರರ ವಿವರಣೆಯಂತೆ ಈ ಸಂಸಾರ ಮಾಯಾವೃಕ್ಷವು- ಹೇಗೆ ಇಂದ್ರಜಾಲವಿದ್ಯೆಯನ್ನು ಬಲ್ಲವನು ಜನರಿಗೆ ಕಣ್ಣು ಕಟ್ಟು ಮಾಡಿ ತಾನಿದ್ದಲ್ಲಿಯೇ ದೊಡ್ಡಮರವನ್ನು ಪ್ರದರ್ಶಿಸಿ ಬಿಡುವನೋ ಹಾಗೆ ಮಹಾಮಾಯಾವಿಯಾದ ಭಗವಂತನೂ ಆದಿಮಧ್ಯಾನ್ತರಹಿತವಾದ ಸಂಸಾರವೃಕ್ಷವನ್ನು ತೋರ್ಪಡಿಸಿ ತನ್ನನ್ನು ಶರಣುಹೊಂದಿದವರಿಗೆ ಮಾತ್ರ ಅದರ ಅಸತ್ಯತ್ವವನ್ನು ಮನಗಾಣಿಸಿ ಕೊಡುತ್ತಾನೆ.

ಹೀಗೆ ಭಗವಂತನ ಕಡೆಯಿಂದಲೇ - ಹೇಗೆ ಮಾಯಾವಿಯಿಂದಲೇ ಮಾಯೆಯು ಹೊರತೋರಿಕೊಳ್ಳುವದೋ ಹಾಗೆ ಜಗತ್ತು ತೋರುತ್ತದೆ. ಆ ಭಗವಂತನನನ್ನು ಅರಿತುಕೊಳ್ಳುವದರಿಂದಲೇ ಪ್ರಪಂಚವು ಇಲ್ಲವಾಗುವದು. ಅಂಥ ಮುಕ್ತಿಯನ್ನು ಪಡೆದು ಜ್ಞಾನಿಗಳು ಅಮೃತರಾಗುವರು- ಎಂದು ಭಾಷ್ಯಕಾರರು ತಿಳಿಸಿದ್ದಾರೆ.

-------

## ೭. ಪರಮಪುರುಷಾರ್ಥವಿವೇಕ -೧

ಈಗ ಈ ಗೀತಾಶಾಸ್ತ್ರದಲ್ಲಿ ಪರಮಪುರುಷಾರ್ಥವು ಯಾವದೆಂದು ಗೊತ್ತುಮಾಡಲ್ಪಟ್ಟಿದೆ ? ಎಂಬಿದನ್ನು ವಿವೇಚನೆಮಾಡಬೇಕಾಗಿದೆ ಮತ್ತು

ಅದು ಯಾವ ಸಾಧನದಿಂದ ದೊರಕುತ್ತದೆ. ಇದನ್ನೂ ವಿಚಾರಿಸತಕ್ಕದ್ದಿದೆ. ಇವುಗಳಲ್ಲಿ ಅಮೃತತ್ವವೆಂಬ ಪರಮಪುರುಷಾರ್ಥವು ಬ್ರಹ್ಮಜ್ಞಾನದಿಂದ ದೊರಕುತ್ತದೆ- ಎಂದು ಸುಸ್ಪಷ್ಟವಾಗಿ ಭಗವಂತನು ಪ್ರತಿಜ್ಞೆಮಾಡಿ ಹೇಳಿರುತ್ತಾನೆ. ''ಎಲೈ ಪಾರ್ಥನೆ ಯಾವದನ್ನು ಅರಿತುಕೊಂಡಲ್ಲಿ ಮಾನವನು ಅಮೃತತ್ವವನ್ನು ಹೊಂದುವನೋ ಆ ಜ್ಞೇಯವನ್ನು ಹೇಳುವೆನು'' (೧೩. ೧೨) ಎಂದು ಭಗವಂತನ ವಚನವಿದೆ. ಈ ಅಮೃತತ್ವವನ್ನು 'ಅನಾಮಯಪದ' (೨. ೫೧) 'ಶಾಂತಿ' (೨.೭೧) 'ಪರಾಶಾಂತಿ' (೪.೩೯) 'ಪರಾಸಿದ್ಧಿ' 'ಪರಮಾಸಿದ್ಧಿ' (೮-೧೫, ೧೪) 'ಮುಕ್ತಿ' 'ಮೋಕ್ಷ' (೫-೨೮) ಎಂಬುದಾಗಿ ಬೇರೆ ಬೇರೆಯ ಹೆಸರುಗಳಿಂದ ಗೀತೆಯಲ್ಲಿ ನಿರ್ದೇಶಮಾಡಿ ಹೇಳಿರುತ್ತದೆ.

**ಮೋಕ್ಷವು ಎರಡು ಬಗೆ** : ಜೀವನಿಗೆ ಸ್ವಾಭಾವಿಕವೇ ಆಗಿರುವ ಮೋಕ್ಷವು ಎಂದರೆ ಬ್ರಹ್ಮಾತ್ಮಭಾವವು ಜ್ಞಾನದಿಂದ ಹೊರತೋರಿಕೊಳ್ಳುತ್ತದೆ. ಹಾಗೂ ಅವಿದ್ಯಾಕೃತವಾದ ಬಂಧವು ಬ್ರಹ್ಮವಿದ್ಯೆಯ ಪ್ರಾಪ್ತಿಯಿಂದ ಹೋಗಿಯೇಬಿಡುತ್ತದೆಯಾದರೂ ಮುಕ್ತರಾದವರಿಗೆ ಮತ್ತೆ ಶರೀರ ಗ್ರಹಣವಿರುವದಿಲ್ಲವೆಂದು ಇಟ್ಟುಕೊಂಡು ವಿದೇಹಮುಕ್ತಿಯನ್ನೂ ಇಲ್ಲಿಯೂ ಉಪದೇಶಮಾಡಿರುತ್ತದೆ. ಅದನ್ನು 'ಬ್ರಹ್ಮನಿರ್ವಾಣ' 'ಪರಾಗತಿ' 'ಶಾಶ್ವತ ಪದವಿ' 'ಶಾಶ್ವತಸ್ಥಾನ' ಮುಂತಾದ ಹೆಸರುಗಳಿಂದ ಇಲ್ಲಿ ನಿರ್ದೇಶಮಾಡಿರುತ್ತದೆ. ಈ ವಿದೇಹಮುಕ್ತಿಯನ್ನು ಉಪಾಸನೆಯಿಂದಲೂ ಪಡೆಯಬಹುದಾದ್ದರಿಂದ 'ನನ್ನನ್ನು ಹೊಂದುತ್ತಾನೆ' (೪-೬) 'ನನ್ನ ಸಾಧರ್ಮ್ಯವನ್ನು ಹೊಂದಿರುತ್ತಾರೆ' 'ನನ್ನ ಭಾವವನ್ನು ಪಡೆಯುತ್ತಾನೆ' (೮.೫) 'ನನ್ನನ್ನು ಸೇರುತ್ತಾನೆ' (೭-೨೩) 'ನನ್ನಲ್ಲಿಯೇ ವಾಸಮಾಡುವೆ' (೧೨.೮) ಇವೇ ಮುಂತಾದ ವಾಕ್ಯಗಳಲ್ಲಿ ಮತ್ತು 'ಅವನು ಮತ್ತೆ ಹುಟ್ಟುವದಿಲ್ಲ' (೧೩- ೨೩) 'ಮೃತ್ಯುವನ್ನು ದಾಟಿಯೇತೀರುತ್ತಾರೆ.' (೧೩-೨೫) 'ಅಂಥವರು ಪರಗತಿಯನ್ನು ಹೊಂದುತ್ತಾರೆ'. (೧೩-೩೫) ಇವೇ ಮುಂತಾದ ಸ್ಥಳಗಳಲ್ಲಿ ನಿರ್ದೇಶಮಾಡಿದೆ. ಈ ಎರಡು ಬಗೆಯ (ಜೀವನ್ಮುಕ್ತಿ, ವಿದೇಹಮುಕ್ತಿ) ಮೋಕ್ಷಗಳನ್ನೂ ಒಂದೇ ಬಾರಿಗೆ ಕೆಲವು

ಸ್ಥಳಗಳಲ್ಲಿ ಪರಾಮರ್ಶ ಮಾಡಿರುವದೂ ಗೀತೆಯಲ್ಲಿ ಕಂಡುಬರುತ್ತದೆ. ಹೇಗೆಂದರೆ: ಯೋಽನ್ತಃ ಸುಖೋ'' (೫.೨೯) ಎಂಬ ಶ್ಲೋಕಕ್ಕೆ ಶಂಕರಾಚಾರ್ಯರು ಬರೆದಿರುವ ಭಾಷ್ಯದಲ್ಲಿ ಹೀಗಿದೆ :- ''ಆ ಯೋಗಿಯು ಬ್ರಹ್ಮನಿರ್ವಾಣ ವನ್ನು ಎಂದರೆ ಬ್ರಹ್ಮದಲ್ಲಿಯೇ ನೆಲೆಯನ್ನು (ಮೋಕ್ಷವನ್ನು) ಇಲ್ಲಿಯೇ ಬದುಕಿರುವಾಗಲೇ ಬ್ರಹ್ಮಭೂತನಾಗಿ ಪಡೆಯುತ್ತಾನೆ''- ಎಂದಿದೆ.

**ಸದ್ಯೋಮುಕ್ತಿವಿಚಾರ :** ಪುನರಾವೃತ್ತಿರಹಿತವಾದ ಪರಮಪದದ ಪ್ರಾಪ್ತಿಗೆ ಮುಂಚೆ ತತ್ತ್ವಜ್ಞಾನದಿಂದ ಯಾವ ಪರಮಾರ್ಥವಾದ ತನ್ನ ನಿಜ ಸ್ವರೂಪದಲ್ಲಿಯೇ ನೆಲೆನಿಲ್ಲುವ ಸ್ಥಿತಿಯುಂಟೋ ಅದು ಸದ್ಯೋಮುಕ್ತಿ ಯೆನಿಸುವದು. ಏಕೆಂದರೆ ಅದು ಜ್ಞಾನಸಮಕಾಲದಲ್ಲಿಯೇ ಉಂಟಾಗಿರು ತ್ತದೆ. ಅದೇ ಜೀವನ್ಮುಕ್ತಿಯೆಂದೂ ಕರೆಯಲ್ಪಡುತ್ತದೆ. ಬದುಕಿರುವಾಗಲೇ ದೊರೆತಿರುವ ಈ ಮುಕ್ತಿಯನ್ನು ''ಸ್ಥಿತಪ್ರಜ್ಞತಾ'' ''ಬ್ರಾಹ್ಮೀಸ್ಥಿತಿ'' ''ನೈಷ್ಕರ್ಮ್ಯತೆ'' ''ಸಿದ್ಧಿ'' ''ಬ್ರಹ್ಮಭಾವ'' ''ಯುಕ್ತತೆ'' ''ಅಶುಭಗಳಿಂದ ಮೋಕ್ಷ'' ''ಮಾಯಾತರಣ'' ''ಏಕ ಭಕ್ತಿತೆ'' ''ಪರಾಭಕ್ತಿಲಾಭ'' ''ಗುಣಾತೀತತ್ವ'' ''ಬ್ರಹ್ಮಸಂಪತ್ತಿ''- ಮುಂತಾದ ಅನೇಕಶಬ್ದಗಳಿಂದ ಗೀತೆಯಲ್ಲಿ ಕರೆದಿರುತ್ತದೆ. ಇಂಥ ಜೀವನ್ಮುಕ್ತಿಯನ್ನು ಪಡೆದವರೇ ತತ್ತ್ವ ದರ್ಶಿಗಳೆನಿಸಿದ್ದು ಇಂಥವರಿಂದ ಉಪದೇಶಿಸಲ್ಪಟ್ಟ ಜ್ಞಾನವೇ ಮೋಹ ವನ್ನು ಕಳೆಯುವ ಸಾಮರ್ಥ್ಯವನ್ನು ಹೊಂದಿರುತ್ತದೆ- ಎಂದು ಭಗವಂತನು ತಿಳಿಸಿರುತ್ತಾನೆ.

**ಮುಕ್ತಿಯನ್ನು ಹೇಳುವ ಶಬ್ದಗಳು :** ಗೀತೆಯಲ್ಲಿ ಬ್ರಹ್ಮನಿರ್ವಾಣ, ಅಮೃತತ್ವ, ಶಾಂತಿ, ಸಂಸಿದ್ಧಿ - ಇವುಗಳು ಜೀವನ್ಮುಕ್ತಿಯನ್ನೇ ತಿಳಿಸುವ ಶಬ್ದಗಳಾಗಿವೆ. ಅಪುನರಾವೃತ್ತಿರೂಪವಾದ ಗತಿಯನ್ನು ಹೇಳುವ ಶಬ್ದವು ಗೌಣವು- ಎಂದರೆ ಗೌಣಮುಕ್ತಿಯನ್ನು ತಿಳಿಸುತ್ತದೆ. ಹೇಗೆಂದರೆ : 'ಕಾಮಕ್ರೋಧವಿಯುಕ್ತಾನಾಂ' (೫-೨೬) ಎಂಬ ಶ್ಲೋಕಕ್ಕೆ ಶಂಕರಾ- ಚಾರ್ಯರು ಬರೆದಿರುವ ಭಾಷ್ಯದ ಅಭಿಪ್ರಾಯವು ಹೀಗಿದೆ ''ಅಭಿತೋ ಬ್ರಹ್ಮನಿರ್ವಾಣಂ'' ಎಂಬಲ್ಲಿ ಅಭಿತಃ ಎಂದರೆ ಬದುಕಿರುವಾಗಲೂ, ದೇಹ

ವನ್ನು ಬಿಟ್ಟಮೇಲೂ ಇಂಥ ಮಹನೀಯರಿಗೆ ಮುಕ್ತಿಯು ಲಭಿಸಿರುತ್ತದೆ. ಇಲ್ಲಿರುವ 'ವಿದಿತಾತ್ಮನಾಮ್' ಎಂಬ ಶಬ್ದಕ್ಕೆ ಯಾರು ಆತ್ಮನನ್ನು ಅರಿತು ಕೊಂಡಿದ್ದಾರೆಯೋ ಅವರಿಗೆ ಎಂದು ಭಾಷ್ಯಕಾರರು ವಿವರಣೆಯನ್ನು ನೀಡಿದ್ದಾರೆ. ಇವರೇ ಸಮ್ಯಗ್ದರ್ಶಿಗಳು. ಇವರು ಜೀವನ್ಮುಕ್ತರೇ ಸರಿ. ಇನ್ನು ''ಭೋಕ್ತಾರಂ ಯಜ್ಞತಪಸಾಮ್'' (ಗೀ. ೫.೨೯) ಎಂಬ ಶ್ಲೋಕಕ್ಕೆ ಆಚಾರ್ಯರು ಬರೆದಿರುವ ವಿವರಣೆ ಹೀಗಿದೆ :- ''ಸರ್ವಪ್ರಾಣಿಗಳಿಗೂ ಪ್ರತ್ಯುಪಕಾರದ ಅಪೇಕ್ಷೆಯಿಲ್ಲದೆ ಉಪಕಾರಮಾಡುವವನಾದ, ಹಾಗೂ ಎಲ್ಲಾ ಜೀವರುಗಳ ಹೃದಯದಲ್ಲಿದ್ದು ಸರ್ವಕರ್ಮಗಳ ಅಧ್ಯಕ್ಷನಾಗಿರುವ, ಸರ್ವಪ್ರತ್ಯಯಸಾಕ್ಷಿಯೂ ನಾರಾಯಣನೂ ಆದ ನನ್ನನ್ನು ಅರಿತವನಾಗಿ ಶಾಂತಿಯನ್ನು ಎಂದರೆ ಸಕಲವಿಧವಾದ ಸಂಸಾರಬಂಧಗಳಿಂದಲೂ ಬಿಡುಗಡೆಯನ್ನು ಪಡೆಯುವನು''. ಇಲ್ಲಿ ಶಾಂತಿಶಬ್ದವು ಜೀವನ್ಮುಕ್ತಿ, ಕಾಲಾಂತರಮುಕ್ತಿ- ಎರಡನ್ನೂ ಪರಾಮರ್ಶಿಸುತ್ತದೆ. ಇದೇ ರೀತಿಯಲ್ಲಿ 'ಯತೇಂದ್ರಿಯಮನೋಬುದ್ಧಿಃ' (೫.೨೬) ಎಂಬಲ್ಲಿರುವ ಮೋಕ್ಷ ಶಬ್ದವೂ ಉಭಯವಿಧವಾದ ಮುಕ್ತಿಯನ್ನೂ ಪರಾಮರ್ಶಿಸುತ್ತದೆ.

--------

## ಪರಮಪುರುಷಾರ್ಥವಿವೇಕ-೨

**ಕ್ರಮಮುಕ್ತಿ - ಸದ್ಯೋಮುಕ್ತಿ ,** ಜ್ಞಾನಸಮಕಾಲದಲ್ಲಿಯೇ ದೊರಕುವ ಮುಕ್ತಿಯೇ ಸದ್ಯೋಮುಕ್ತಿ- ಎಂದು ಹಿಂದೆ ಹೇಳಿದೆ. ಇದು ಕರ್ಮಯೋಗಾದಿಗಳಿಂದ ಮುಂದೆ ಪಡೆಯಬಹುದಾದ ಕ್ರಮಮುಕ್ತಿಗಿಂತ ವಿಲಕ್ಷಣವಾದದ್ದು. ಕ್ರಮಮುಕ್ತಿಯಾದರೊ, ಅಂತಃಕರಣಶುದ್ಧಿಯ ಮೂಲಕ ಪಡೆದುಕೊಂಡ ಜ್ಞಾನದ ಫಲವಾಗಿ ದೊರಕತಕ್ಕದ್ದು- ಮತ್ತು ಉಪಾಸನಾದಿಗಳಿಂದ ಪುಣ್ಯಲೋಕಾಂತರಗಳನ್ನು ಹೊಂದಿ ಅಲ್ಲಿ ಜ್ಞಾನವನ್ನು ಹೊಂದಿದಮೇಲೆ ದೊರಕತಕ್ಕದಾಗಿದೆ. ಹೀಗೆ ಎರಡು ಪ್ರಕಾರವಾಗಿರುವ ಕ್ರಮಮುಕ್ತಿಯ ವಿವರವು ಹೀಗಿದೆ : ಗೀತೆಯ ''ಯತೇಂದ್ರಿಯಮನೋಬುದ್ಧಿಃ (೫.೨೮) ಎಂಬ ಶ್ಲೋಕಕ್ಕೆ ಶಂಕರಾಚಾರ್ಯರು ಬರೆದಿರುವ ವಿವರಣೆಯೇನೆಂದರೆ : ''ಈಶ್ವರಾರ್ಪಣ

ಬುದ್ಧಿಯಿಂದ ಕರ್ಮಗಳನ್ನು ಮಾಡಿ ಅಂತಃಕರಣಶುದ್ಧಿಯನ್ನು ಹೊಂದಿದಮೇಲೆ ಜ್ಞಾನಕ್ಕಾಗಿ ಪ್ರಯತ್ನಮಾಡುತ್ತಾ ಇದ್ದು ಕಡೆಯಲ್ಲಿ ಜ್ಞಾನಸಮಕಾಲ ದಲ್ಲಿಯೇ ಭಗವಂತನನ್ನು ಸೇರಿ ಮುಕ್ತನಾಗುವಿಕೆ- ಇದೊಂದು ಕ್ರಮವು. ಮತ್ತೊಂದು ಕ್ರಮವು ಹೇಗೆಂದರೆ: ''ಅಗ್ನಿರ್ಜ್ಯೋತಿರಹಃ'' (೮.೨೪) ಎಂಬಲ್ಲಿ ಹೇಳಿರುವದು. ಶ್ರೀಶಂಕರರು ಇದಕ್ಕೆ ಬರೆದಿರುವ ಭಾಷ್ಯದ ಅಭಿಪ್ರಾಯವು ಹೀಗಿದೆ : ಬ್ರಹ್ಮೋಪಾಸಕ ರಾದ ಸಾಧಕರು ದೇಹಾವಸಾನ ಕಾಲದಲ್ಲಿ ಅಗ್ನಿ, ಜ್ಯೋತಿ- ಮುಂತಾದ ದೇವತೆಗಳ ಮೂಲಕ ಉತ್ತರ ಮಾರ್ಗದಲ್ಲಿ ಹೊರಟು ಬ್ರಹ್ಮಲೋಕವನ್ನು ಸೇರಿ ಅಲ್ಲಿ ಬ್ರಹ್ಮನೊಡನೆ ಇದ್ದು ಅವನ ಅಧಿಕಾರವು ಪೂರೈಸಿ ಮುಕ್ತನಾಗುವಾಗ ಇವರೂ ಅವನೊಡನೆ ಪರಬ್ರಹ್ಮನನ್ನು ಸೇರುತ್ತಾರೆ. ಆದರೆ ಬದುಕಿರುವಾಗಲೇ ಇಲ್ಲಿಯೇ ಬ್ರಹ್ಮಜ್ಞಾನದಿಂದ ಸದ್ಯೋಮುಕ್ತಿ ಯನ್ನು ಹೊಂದಿದವರು ಎಲ್ಲಿಗೂ ಹೋಗುವ ಸಂಭವವಿಲ್ಲ. ಅವರು ಇಲ್ಲಿಯೇ ಬ್ರಹ್ಮದಲ್ಲಿ ಜ್ಞಾನದಿಂದ ಪರಬ್ರಹ್ಮದಲ್ಲಿ ಒಂದಾಗಿಬಿಟ್ಟಿರುತ್ತಾರೆ. ಹೀಗಾಗಿ ಅವರಿಗೆ ಯಾವ ಗತಿಯೂ ಇರುವದಿಲ್ಲ. ಆದರೂ ಗೀತೆಯಲ್ಲಿ 'ಆ ಬ್ರಹ್ಮಭುವನಾಲ್ಲೋಕಾಃ' ಎಂಬ ಶ್ಲೋಕದಲ್ಲಿ ಬ್ರಹ್ಮಲೋಕಕ್ಕೆ ಹೋದವರೂ ಹಿಂದಿರುಗಿ ಬರುತ್ತಾರೆ- ಎಂದು ಹೇಳಿದೆಯಲ್ಲ ? ಎಂದರೆ ಹಾಗಲ್ಲ- ಅಗ್ನ್ಯಾದಿ ಮಾರ್ಗದಿಂದ ಹೋದವರಿಗೆ ಮಾತ್ರವೇ ಅನಾವೃತ್ತಿಯೇ ಹೊರತು ಉಳಿದವರಿಗಲ್ಲ. ಏಕೆಂದರೆ ಶುಕ್ಲಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋದವರಿಗೆ ಅವರ ಚಿತ್ತದಲ್ಲಿ ಕಾಮಗಳೇನೂ ಇರುವದಿಲ್ಲವಾಗಿ ಅಲ್ಲಿಯೇ ಅವರಿಗೆ ಜ್ಞಾನವು ಪ್ರಾಪ್ತವಾಗಿಬಿಡುತ್ತದೆ. ಆದ್ದರಿಂದ ಅಂಥ ಉತ್ತಮಾಧಿಕಾರಿಗಳಿಗೆ ಪುನರಾವೃತ್ತಿಯಿಲ್ಲ ಎಂದು ತಿಳಿಯಬೇಕು. ಬ್ರಹ್ಮ ಸೂತ್ರಭಾಷ್ಯದಲ್ಲಿಯೂ ಈ ವಿಷಯವನ್ನು ಸ್ಪಷ್ಟಗೊಳಿಸಲಾಗಿದೆ. 'ಭೋಕ್ತಾರಂ ಯಜ್ಞತಪಸಾಮ್' (ಗೀ. ೫-೨೦) ಎಂಬ ಶ್ಲೋಕಭಾಷ್ಯ ದಲ್ಲಿಯೂ ಶ್ರೀಶಂಕರಾಚಾರ್ಯರು ಸದ್ಯೋಮುಕ್ತಿ ಯನ್ನೇ ಪ್ರಸ್ತಾಪಿಸಿ ಉತ್ತಮಾಧಿಕಾರಿಗಳಿಗೆ ಬದುಕಿರುವಾಗಲೇ ಬ್ರಹ್ಮ ಪ್ರಾಪ್ತಿಯನ್ನು ಘೋಷಿಸಿರುತ್ತಾರೆ.

---------

# ೮. ಶಾಸ್ತ್ರಾರ್ಥೋಪಸಂಹಾರ

ಈಗ ಗೀತಾಶಾಸ್ತ್ರದ ಉಪದೇಶಗಳನ್ನು ಒಂದು ಕಡೆ ಕೇಂದ್ರೀಕರಿಸಿ ಗ್ರಂಥವನ್ನು ಉಪಸಂಹಾರ ಮಾಡಲಾಗುವದು. ಜಿಜ್ಞಾಸುಗಳಿಗೆ ಗೀತಾರ್ಥವನ್ನು ಮನನಮಾಡಲು ಅನುಕೂಲವಾಗಲೆಂದು ಈ ಪ್ರಯತ್ನ ವನ್ನು ಮಾಡಲಾಗಿದೆ. ಈ ಶಾಸ್ತ್ರದಲ್ಲಿ ಎರಡು ಬಗೆಯ ಧರ್ಮಗಳನ್ನು ಮೋಕ್ಷವೆಂಬ ಪ್ರಯೋಜನಕ್ಕಾಗಿ ಹೇಳುತ್ತಾ ವಾಸುದೇವ- ಎಂಬ ಹೆಸರಿ ನಿಂದ ಪರಬ್ರಹ್ಮವನ್ನು ಪ್ರತಿಪಾದಿಸಿ ತಿಳಿಸಲಾಯಿತು. ಅದರಲ್ಲಿಯೂ ವಾಸುದೇವತತ್ತ್ವಪ್ರಾಪ್ತಿಗೆ ಸಾಧನವಾಗಿ ಪ್ರಧಾನವಾಗಿ ನಿವೃತ್ತಿಧರ್ಮ ವನ್ನೂ ಅದಕ್ಕೆ ಉಪಾಯವಾಗಿ ಪ್ರವೃತ್ತಿಧರ್ಮವನ್ನೂ ಪ್ರತಿಪಾದಿಸಲಾ ಯಿತು. ಈ ನಿವೃತ್ತಿಧರ್ಮವೇ ಪ್ರಧಾನವಾಗಿ ಮುಕ್ತಿಯೆಂಬ ಪರಮ ಪುರುಷಾರ್ಥವನ್ನು ಉಂಟುಮಾಡುತ್ತದೆ.

ಈ ಶಾಸ್ತ್ರದಲ್ಲಿ ಜ್ಞಾನನಿಷ್ಠಾರೂಪವಾದ, ಸಂನ್ಯಾಸಸಹಿತವಾದ- ಹಾಗೂ ಕರ್ಮಯೋಗವೆಂಬ ಉಪಾಯದಿಂದ ಲಭಿಸುವ ಜ್ಞಾನವನ್ನೇ ಯೋಗವೆಂದು ಮುಖ್ಯವಾಗಿ ಕರೆದಿದೆ. ಇಲ್ಲಿ ಉಪೇಯಭೂತ (ಪಡೆಯ ಬೇಕಾಗಿರುವ) ಯೋಗವೂ ಮತ್ತು ಇದನ್ನು ಪಡೆಯುವದಕ್ಕೆ ಸಾಧನವಾಗಿ ರುವ ಯೋಗವೂ ಎಂದರೆ ಕರ್ಮಯೋಗ ಜ್ಞಾನಯೋಗಗಳೆರಡೂ ಈ ಭಗವಂತನ ಸಂಬಂಧದಿಂದಲೇ ಯೋಗಗಳೆನಿಸಿಕೊಂಡಿವೆ. ಇನ್ನು ಜ್ಞಾನಕ್ಕೆ ಉಪಾಯವಾಗಿರುವ ಕರ್ಮಯೋಗಧ್ಯಾನಯೋಗಗಳಲ್ಲಿ ಕರ್ಮ ಯೋಗವು ಬಹಿರಂಗವೆಂದೂ ಧ್ಯಾನಯೋಗವು ಅಂತರಂಗವೆಂದೂ ತಿಳಿಯಬೇಕು. ಈ ಎರಡೂ ಸಾಧನಗಳೂ ಭಗವಂತನನ್ನು ಗುರಿಯಾ ಗಿಟ್ಟುಕೊಂಡೇ ಮಾಡಲ್ಪಡುವವಾದ್ದರಿಂದ ಸಾಮಾನ್ಯರೀತಿಯಿಂದ ಇವು ಗಳನ್ನು 'ಭಕ್ತಿಯೋಗ'ವೆಂದು ಕರೆಯಬಹುದಾಗಿದೆ. ಆದರೆ ಕರ್ಮ ಪ್ರಧಾನವಾಗಿದ್ದರೆ ಕರ್ಮಯೋಗವೆಂದೂ ಧ್ಯಾನವು ಪ್ರಧಾನವಾಗಿದ್ದರೆ ಧ್ಯಾನಯೋಗವೆಂದೂ ಕರೆಯಲ್ಪಡುತ್ತವೆ. ಈ ಶಾಸ್ತ್ರದ ಕಡೆಯಲ್ಲಿ ಇವುಗಳನ್ನು 'ಯೋಗನಿಷ್ಠಾ' 'ಜ್ಞಾನನಿಷ್ಠಾ' ಎಂದು ಉಪಸಂಹಾರ ಮಾಡಿರುತ್ತದೆ. ಹೇಗೆಂದರೆ : ''ಮನ್ಮನಾ ಭವ ಮದ್ಭಕ್ತಃ'' ಎಂಬಿದು

ಯೋಗನಿಷ್ಠೆಯ ಉಪಸಂಹಾರಾಗಿದೆ. ಇಲ್ಲಿ ''ಮದ್ಯಾಜೀ'' ಎಂಬುದು ಕರ್ಮಯೋಗವನ್ನೂ ''ಮನ್ಮನಾಭವ'' ಎಂಬುದು ಧ್ಯಾನಯೋಗವನ್ನು ''ಮದ್ಭಕ್ತಃ'' ಎಂಬಿದು ಭಕ್ತಿಯೋಗವನ್ನೂ ತಿಳಿಸುತ್ತವೆ. ಹೀಗೆ ಮೂರು ಯೋಗಗಳ ಉಲ್ಲೇಖವಿದೆಯಾದರೂ ಈ ಎಲ್ಲಾಯೋಗಗಳೂ ಭಗವಂತನೊಬ್ಬನಿಗೇ ಸಂಬಂಧಪಟ್ಟಿರುವವಾಗಿದ್ದು ಯೋಗಶಬ್ದಾರ್ಹ ವಾಗಿವೆ- ಹೀಗೆಂದು ಭಗವಂತನು 'ಮನ್ಮನಾಭವ' (೧೮-೬೫) ಎಂಬ ಶ್ಲೋಕದಲ್ಲಿ ತಿಳಿಸಿದ್ದಾನೆ. ಇಲ್ಲಿ ಆಚಾರ್ಯರು ಕೊಟ್ಟಿರುವ ವಿವರಣೆ ಹೀಗಿದೆ : ''ಹೀಗೆ ವಾಸುದೇವನಲ್ಲಿಯೇ ತನ್ನ ಸರ್ವಸ್ವವನ್ನೂ ಸಮರ್ಪಣೆ ಮಾಡಿದವನಾದರೆ ನೀನು ನನ್ನನ್ನೇ ಸೇರುತ್ತೀಯೆ. ಈ ವಿಷಯದಲ್ಲಿ ನಿನಗೆ ಸತ್ಯವಾಗಿ ಆಣೆಮಾಡಿ ಹೇಳುತ್ತೇನೆ. ಏಕೆಂದರೆ ನೀನು ನನಗೆ ಪ್ರೀತಿಪಾತ್ರ ನಾಗಿರುವೆ''- ಎಂದಿರುತ್ತಾನೆ. ಹೀಗೆ ಭಗವಂತನು ಸತ್ಯಪ್ರತಿಜ್ಞನೆಂಬು ದನ್ನು ಮನಗಂಡು ಭಗವದ್ಭಕ್ತಿಗೆ ಮೋಕ್ಷವೆಂಬ ಫಲವು ಅವಶ್ಯವಾಗಿ ಆಗಿಯೇತೀರುತ್ತದೆ- ಎಂದು ದೃಢವಾಗಿ ನಂಬಿ ಭಗವಂತನಿಗೇ ಶರಣು ಹೊಂದಿದವನಾಗಿ ಅದೇ ನಿಷ್ಠೆಯಲ್ಲೇ ಇದ್ದುಕೊಂಡಿರಬೇಕು- ಎಂದಭಿಪ್ರಾಯ. ಹೀಗೆಂದು ಭಾಷ್ಯಕಾರರು ತಿಳಿಸಿದ್ದಾರೆ. ಆದ್ದರಿಂದ ಇಲ್ಲಿ ''ವಾಸುದೇವನಲ್ಲಿಯೇ ತನ್ನ ಸಾಧ್ಯಸಾಧನ ಭಾವವನ್ನು ಸಮರ್ಪಿಸಿ ದವನು'' ಎಂದು ಉಲ್ಲೇಖವಿರುವದರಿಂದ ಭಗವಂತನ ಪ್ರೀತಿಗಾಗಿ ಮಾಡಿದ ಪ್ರವೃತ್ತಿಧರ್ಮಕ್ಕೂ ನಿವೃತ್ತಿಧರ್ಮದ ಸಾರವು ಹೇಗೆ ಹೊಂದಿ ಕೊಂಡಿದೆಯೆಂಬುದನ್ನೂ ಸೂಚಿಸಿದಂತಾಗಿದೆ.

ಈಗ ಜ್ಞಾನನಿಷ್ಠೆಯನ್ನು ಉಪಸಂಹಾರಮಾಡಲಾಗುತ್ತದೆ. ಗೀತೆಯ ೧೮-೬೬ನೆಯ ಶ್ಲೋಕದಲ್ಲಿ ''ಸರ್ವಧರ್ಮಾನ್ ಪರಿತ್ಯಜ್ಯ'' ಎಂಬ ಉಪದೇಶವಿದೆ. ಇದು ಗೀತೋಪದೇಶದ ಕೊನೆಯ ಶ್ಲೋಕವು. ಇಲ್ಲಿರುವ ಪರಿತ್ಯಜ್ಯ- ಎಂಬ ಮಾತು ಸರ್ವಕರ್ಮಸಂನ್ಯಾಸವನ್ನು ಉಪ ದೇಶಿಸುತ್ತದೆ. 'ಶರಣಂ ವ್ರಜ' ಎಂಬಿದು ಪರಭಕ್ತಿ ಎಂಬ ಶಬ್ದದಿಂದ ಹೇಳಲ್ಪಡುವ ಜ್ಞಾನನಿಷ್ಠೆಯು. ಭಾಷ್ಯಕಾರರು ಕೂಡ ಹೀಗೆ ವಿವರಿಸಿ ದ್ದಾರೆ. ಏನೆಂದರೆ : ಇಲ್ಲಿ ಧರ್ಮಶಬ್ದದಿಂದ ಅಧರ್ಮವೂ ಸ್ವೀಕರಿಸಲ್ಪಡ ಬೇಕು. ಏಕೆಂದರೆ ನೈಷ್ಕರ್ಮ್ಯವು ಪ್ರಕೃತವಾಗಿದೆ. ''ದುಶ್ಚರಿತಗಳಿಂದ

ಹಿಂತಿರುಗದೆ ಇರುವವನು (ಆತ್ಮನನ್ನು ಕಂಡುಕೊಳ್ಳಲಾರನು)'' ಎಂಬ ಶ್ರುತಿಯೂ ''ಧರ್ಮವನ್ನೂ ಅಧರ್ಮವನ್ನೂ ಬಿಡು'' ಎಂಬ ಸ್ಮೃತಿವಾಕ್ಯವೂ ಇದಕ್ಕೆ ಆಧಾರವಾಗಿದೆ. ಸರ್ವಧರ್ಮಗಳನ್ನೂ ತ್ಯಾಗಮಾಡಿ - ಎಂದರೆ ಎಲ್ಲಾ ಕರ್ಮಗಳನ್ನೂ ಸಂನ್ಯಾಸಮಾಡಿ- ಎಂದಭಿಪ್ರಾಯ. ಮುಂದುವರೆದು ''ಮಾಮೇಕಂ ಶರಣಂ ವ್ರಜ'' ಎಂದರೆ ಗರ್ಭಜನ್ಮಜರಾಮರಣಾದಿಗಳಿಲ್ಲದ ಸರ್ವಾತ್ಮನೂ ಸರ್ವಭೂತಸ್ಥನೂ ಆದ ಈಶ್ವರನಾದ ನನ್ನನ್ನೇ ಶರಣುಹೊಂದುವವನಾಗು- ಎಂದರೆ 'ಭಗವಂತನಿಗಿಂತ ಬೇರೊಂದು ಎಂಬುದು ಇಲ್ಲವೇ ಇಲ್ಲ' ಎಂದು ದೃಢಪಡಿಸಿಕೊ ಎಂದಭಿಪ್ರಾಯ. ಹಾಗಾದಲ್ಲಿ ನಾನು ನಿಶ್ಚಿತಬುದ್ಧಿಯಾದ ನಿನ್ನನ್ನು ಧರ್ಮಾಧರ್ಮರೂಪವಾದ ಸಕಲಪಾಪಗಳಿಂದಲೂ ಬಿಡುಗಡೆ ಮಾಡಿ ಆತ್ಮಭಾವವನ್ನು ಪ್ರಕಾಶನಗೊಳಿಸುವೆನು'' ಹೀಗೆಂದು ಭಗವಂತನು ಅರ್ಜುನನಿಗೆ ಕಡೆಯ ಉಪದೇಶವನ್ನುಮಾಡಿ 'ಮಾ ಶುಚಃ' ಶೋಕಪಡಬೇಡ- ಎಂದೂ ತಿಳಿಸಿರುತ್ತಾನೆ. ಇನ್ನು ಈ ಶಾಸ್ತ್ರವನ್ನು ಶ್ರವಣ ಮಾಡುವದಕ್ಕೆ ಭಗವದ್ಭಕ್ತರೇ ಅಧಿಕಾರಿಗಳು ಎಂಬಿದನ್ನು ಮುಂದೆ ತಿಳಿಸಿದೆ.

-------

## ಉಪಸಂಹಾರ

ಈ ಶಾಸ್ತ್ರದಲ್ಲಿ ಭಗವದ್ಭಕ್ತರೇ ಮುಖ್ಯವಾಗಿ ಅಧಿಕಾರಿಗಳು- ಎಂದು ಭಗವಂತನು ಕೊನೆಯ ಉಪದೇಶದಲ್ಲಿ ಹೀಗೆ ತಿಳಿಸಿದ್ದಾನೆ. ''ಈ ಗೀತಾಶಾಸ್ತ್ರವನ್ನು ತಪಸ್ವಿಯಲ್ಲದವನಿಗೆ, ಭಕ್ತನಲ್ಲದವನಿಗೆ, ತತ್ತ್ವೋಪದೇಶವನ್ನು ಶ್ರದ್ಧೆಯಿಂದ ಕೇಳಲು ಇಷ್ಟವಿಲ್ಲದವನಿಗೆ, ಮತ್ತು ಭಗವಂತನಾದ ನನ್ನನ್ನು ದ್ವೇಷಮಾಡುವವನಿಗೆ ಹೇಳಕೂಡದು'' (ಗೀ. ೧೮-೬೭) ಈ ಶ್ಲೋಕಕ್ಕೆ ಶ್ರೀ ಶಂಕರಭಗವತ್ಪಾದರು ಬರೆದಿರುವ ಭಾಷ್ಯದಲ್ಲಿ ಹೀಗಿದೆ: ''ಭಗವಂತನಲ್ಲಿ ಅಸೂಯೆಯಿಲ್ಲದವನೂ ತತ್ತ್ವವನ್ನು ಆಲೈಸಿ ಕೇಳಲಿಚ್ಛಿಸುವವನೂ ಆದವನಿಗೇ ಹೇಳತಕ್ಕದ್ದು. ಯಾಸ್ಕರ ನಿರುಕ್ತಗ್ರಂಥದಲ್ಲಿರುವಂತೆ ಮೇಧಾ (ಧಾರಣಾ) ಶಕ್ತಿಯುಳ್ಳವನಿಗಾಗಲಿ, ತಪಸ್ವಿಯಾದವನಿಗಾಗಲಿ ಉಪದೇಶಮಾಡಬೇಕು- ಎಂದಿದೆ. ಆದರೆ ಇಲ್ಲಿ ಮೇಧಾವಿ

ಅಥವಾ ತಪಸ್ಸಿಗೆ- ಎಂದು ವಿಕಲ್ಪವಿರುವುದರಿಂದ ಶುಶ್ರೂಷಾಭಕ್ತಿಗಳುಳ್ಳ ಮೇಧಾವಿಗಾಗಲಿ, ತಪಸ್ವಿಗಾಗಲಿ- ಹೇಳಬೇಕು- ಎಂದು ಅಭಿಪ್ರಾಯ. ಆದರೆ ಶುಶ್ರೂಷೆ, ಭಕ್ತಿಗಳಿಲ್ಲದ ಮೇಧಾವಿಗೇ ಆಗಲಿ, ತಪಸ್ಸಿಗೇ ಆಗಲಿ ಹೇಳಬಾರದು- ಎಂದು ಅಭಿಪ್ರಾಯ. ಇನ್ನು ಭಗವಂತ ನಲ್ಲಿ ಭಕ್ತಿಯಿಲ್ಲದ ಹಾಗೂ ಅಸೂಯೆಯುಳ್ಳವನಿಗೆ - ಒಂದು ವೇಳೆ ಉಳಿದ ಒಳ್ಳೆಯ ಗುಣಗಳಿದ್ದರೂ ಹೇಳಬಾರದು. ಆದರೆ ಭಕ್ತಿ, ಗುರು ಶುಶ್ರೂಷೆಗಳುಳ್ಳವನಿಗೆ ಹೇಳತಕ್ಕದ್ದು- ಎಂಬುದೇ ಇಲ್ಲಿ ಶಾಸ್ತ್ರ ಸಂಪ್ರದಾಯವಿಧಿಯು'' ಎಂದು ಭಾಷ್ಯಕಾರರು ತಿಳಿಸಿರುತ್ತಾರೆ.

ಮತ್ತೆ ಮುಂದುವರೆದು ''ಯ ಇಮಂ ಪರಮಂ ಗುಹ್ಯಮ್'' (೧೮-೬೮) ಎಂಬ ಶ್ಲೋಕದ ಭಾಷ್ಯದಲ್ಲಿ ಹೀಗೆ ತಿಳಿಸಿದ್ದಾರೆ : ''ಈ ಶ್ಲೋಕದಲ್ಲಿ ಮತ್ತೊಮ್ಮೆ ಭಕ್ತಿಶಬ್ದವನ್ನು ಸ್ವೀಕರಿಸಿರುವದರಿಂದ ಕೇವಲ ಭಕ್ತಿಯೊಂದೇ ಇದ್ದ ಮಾತ್ರದಿಂದಲೇ ಈ ಗೀತಾಶಾಸ್ತ್ರವನ್ನು ಗುರುವಿನಿಂದ ಪಡೆಯಲು ಅಧಿಕಾರಿಯಾಗುವನು- ಎಂದು ಕಂಡುಬರುತ್ತದೆ. ಇದು ಹೇಗೆ? ಎಂದರೆ ಮುಂದಿನ ವಾಕ್ಯದಲ್ಲಿ ''ಭಕ್ತಿಂ ಮಯಿ ಪರಾಂ ಕೃತ್ವಾ''- ಎಂದರೆ ಪರಮಗುರುವಾದ ಭಗವಂತನಾದ ನನ್ನಲ್ಲಿ ಹೆಚ್ಚಿನ ಭಕ್ತಿ (ಪ್ರೇಮ) ಯನ್ನು ಅಳವಡಿಸಿಕೊಂಡು ಪರಮಗುರುವೂ ಅಚ್ಯುತನೂ ಆದ ಭಗವಂತನ ಸೇವೆಯನ್ನು ನಾನು ಮಾಡುತ್ತಿರುವೆನು- ಎಂದು ಭಾವಿಸಿ ಕೊಂಡು ಪ್ರವರ್ತಿಸುವವನಿಗೆ ಗೀತೋಪದೇಶವನ್ನು ಹೇಳಬೇಕು- ಎಂದಭಿಪ್ರಾಯ. ಹೀಗೆಂದು ಭಾಷ್ಯಕಾರರು ತಿಳಿಸಿರುತ್ತಾರೆ.

ಗೀತಾಶಾಸ್ತ್ರದ ಅಧ್ಯಯನ ಮತ್ತು ಶ್ರವಣ (ಕೇಳುವದು) ಗಳಿಗೆ ಫಲವನ್ನು ಈ ರೀತಿಯಾಗಿ ಕೀರ್ತನೆಮಾಡಿದೆ : ''ಯಾವನು ಈ ನಮ್ಮಿಬ್ಬರ ಸಂವಾದರೂಪವಾದ ಧರ್ಮೋಪದೇಶವನ್ನು ಪಠನಮಾಡುವನೋ ಅವನು ಜ್ಞಾನಯಜ್ಞದಿಂದ ನನ್ನನ್ನು ಆರಾಧಿಸಿದವನಾಗುವನು- ಎಂದು ನನ್ನ ಅಭಿಪ್ರಾಯವು.'' ಇಲ್ಲಿ ಜ್ಞಾನಯಜ್ಞವೆಂದರೆ ಆತ್ಮಜ್ಞಾನವು- ಎಂದಭಿಪ್ರಾಯವಿಲ್ಲ. ಏಕೆಂದರೆ ಕೇವಲ ಗೀತಾಶ್ಲೋಕಪಠನದಿಂದ ಆ ಭಗವಂತನ ಪ್ರಾಪ್ತಿಯಾಗಲಾರದು. ಭಾಷ್ಯಕಾರರೂ ಹೀಗೆಂದಿರುತ್ತಾರೆ :

"ಶಾಸ್ತ್ರವಿಧಿಯಂತೆ ದ್ರವ್ಯ, ಮಂತ್ರಗಳು, ಋತ್ವಿಜರುಗಳಿಂದ ಕೂಡಿ ಮಾಡುವ ಯಜ್ಞ, ಅಥವಾ ಜಪಯಜ್ಞ ಅಥವಾ ಮಾನಸಯಜ್ಞ (ಮನಸ್ಸಿನಲ್ಲೇ ಭಗವಂತನ ಉಪದೇಶಗಳನ್ನು ಅನುಸಂಧಾನಮಾಡುವದು) ಇವುಗಳಲ್ಲಿ ಮಾನಸಯಜ್ಞವು ಉತ್ಕೃಷ್ಟವಾದದ್ದು. ಆದ್ದರಿಂದ ಗೀತಾಶಾಸ್ತ್ರದ ಅಧ್ಯಯನವನ್ನು ಹೊಗಳಿದೆ. ದೇವತೆಗಳನ್ನು ಕುರಿತು ಮಾಡುವ ಯಜ್ಞದ ಫಲಕ್ಕೆ ಸಮಾನವಾದ ಫಲವೇ ಗೀತಾಪಾರಾಯಣದಿಂದ ಲಭಿಸುತ್ತದೆ- ಎಂದು ಪ್ರಶಂಸೆಮಾಡಿದೆ. ಇನ್ನು ಶ್ರದ್ಧಾವಂತನೂ ಅಸೂಯಾರಹಿತನೂ ಆಗಿ ಗೀತೆಯನ್ನು ಕೇಳಿದರೂ ಸಾಕು, ಅಂಥವನೂ ಪಾಪಗಳಿಂದ ಬಿಡುಗಡೆಹೊಂದಿ ಪುಣ್ಯಲೋಕಗಳನ್ನು ಪಡೆಯುತ್ತಾನೆ- ಎಂದು ಹೇಳಿರುವದು ಸಾಮಾನ್ಯಾಧಿಕಾರಿಗಳ ವಿಷಯವು. ಮುಖ್ಯಾಧಿಕಾರಿಗಳಿಗೆ ಹೀಗೆ ಫಲವನ್ನು ಹೇಳಿದೆ : "ಎಲೈ ಪಾರ್ಥನೆ, ಈಗ ಹೇಳಿದ್ದನ್ನೆಲ್ಲ ಏಕಾಗ್ರಚಿತ್ತದಿಂದ ಕೇಳಿದೆಯಷ್ಟೆ ? ಇನ್ನು ಅಜ್ಞಾನದ ಮುಸುಕು ಹರಿಯಿತಷ್ಟೆ!" ಎಂದು ಹೇಳಿದ್ದಾನೆ.

ಕೊನೆಯದಾಗಿ ಅರ್ಜುನನ ಉತ್ತರವು ಹೀಗಿದೆ : 'ಭಗವಂತನೆ, ನನ್ನ ಮೋಹವು ಹೋಯಿತು. ಆತ್ಮತತ್ತ್ವದ ನೆನಪು ಉಂಟಾಗಿದೆ. ಈಗ ನಾನು ಎಲ್ಲಾ ಸಂಶಯಗಳನ್ನೂ ಪರಿಹರಿಸಿಕೊಂಡಿದ್ದೇನೆ. ಇನ್ನು ನಿನ್ನ ಮಾತಿನಂತೆ ನಡೆಯುತ್ತೇನೆ' ಹೀಗೆ ಅರ್ಜುನನ ಪ್ರಶ್ನೆಗಳು ಹಾಗೂ ಭಗವಂತನ ಉತ್ತರಗಳು- **ಈ ರೂಪವಾದ ವಿವರಣೆಯಿಂದ ಮೋಹ ವನ್ನು ಕಳೆಯುವದೇ ಶಾಸ್ತ್ರದ ತಾತ್ಪರ್ಯವೆಂದು ಸಿದ್ಧವಾಗುತ್ತದೆ.** ಈ ತತ್ತ್ವವನ್ನು ಶಾಂಕರಭಾಷ್ಯಾನುಗುಣವಾಗಿ ಈಗಾಗಲೇ ಪ್ರತಿಪಾದನೆ ಮಾಡಿದ್ದಾಗಿದೆ. ಈ ಮೋಹಾಪನಯನವು ಜ್ಞಾನದಿಂದ ಲಭ್ಯವಾಗುತ್ತದೆ ಯಾದರೂ ಈ ಪರಮಾರ್ಥಜ್ಞಾನಕ್ಕೆ ಸಾಧನರೂಪವಾಗಿ ಕರ್ಮಸಂನ್ಯಾಸವೂ ಆತ್ಮನಿಷ್ಠೆಯೂ ಹಿನ್ನೆಲೆಯಾಗಿರುವದು. ಹೀಗೆ ಗೀತಾಶಾಸ್ತ್ರಾರ್ಥವಿವೇಕವನ್ನು ಯಾವ ಭಗವಂತನ ಕೃಪೆಯಿಂದ ಈವರೆಗೆ ವ್ಯಾಖ್ಯಾನಮಾಡಲಾಯಿತೋ ಆ ಗೀತಾಚಾರ್ಯನನ್ನು ನಮಸ್ಕರಿಸುತ್ತಾ ಗ್ರಂಥವನ್ನು ಮುಕ್ತಾಯ ಮಾಡುವೆವು.

-------

ಸಂಪುಟದಲ್ಲಿ ಮೂರನೆಯ ಬಾರಿಗೆ ಪ್ರಕಟಿಸಲಾಯಿತು. 1984ರಲ್ಲಿ **ನಾಲ್ಕನೆಯ,** 1989ರಲ್ಲಿ **ಐದನೆಯ** ಮತ್ತು 1997ರಲ್ಲಿ **ಆರನೆಯ** ಮುದ್ರಣವನ್ನೊಳಗೊಂಡ ಉತ್ತಮವಾದ ಗ್ರಂಥವಿದು.

ಭಗವದ್ಗೀತೆಯ ಹೆಚ್ಚುಗಾರಿಕೆ, ಅದರಲ್ಲಿಯೂ **ಶ್ರೀಶಾಂಕರಭಾಷ್ಯ ಸಮೇತ**ವಾದ ಈ ಗ್ರಂಥದ ಮಹಿಮೆಯನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ. ಪ್ರವೃತ್ತಿ, ನಿವೃತ್ತಿ - ಎಂಬ ಎರಡು ಬಗೆಯ ಧರ್ಮಗಳ ಸ್ವರೂಪವನ್ನೂ, ಪ್ರವೃತ್ತಿ ಧರ್ಮವು ನಿವೃತ್ತಿ ಧರ್ಮಕ್ಕೆ ದ್ವಾರವಾಗುವ ಬಗೆಯನ್ನೂ ಇಲ್ಲಿ ತಿಳಿಸಿಕೊಟ್ಟಿದೆ. ಸರ್ವಕರ್ಮಸಂನ್ಯಾಸಪೂರ್ವಕವಾಗಿ ಆತ್ಮಜ್ಞಾನನಿಷ್ಠೆಯನ್ನು ಪಡೆಯುವವರಿಗೆ ಸಂಸಾರ ಬಂಧನದಿಂದ ಆತ್ಯಂತಿಕವಾಗಿ ಬಿಡುಗಡೆಯಾಗುವುದೆಂಬುದನ್ನು ಪ್ರತಿಪಾದಿಸುವದರ ಮೂಲಕ ಸಾಧನ-ಸಿದ್ಧಾಂತಗಳ ಸಂಬಂಧವನ್ನು ವಿಶದಗೊಳಿಸುವ ಗ್ರಂಥವಿದು. **ಆರನೆಯ** ಬಾರಿಗೆ ಮುದ್ರಣವನ್ನು ಕಂಡಿದೆಯೆಂದರೆ ಅದರ ಮಹತ್ವವನ್ನು ವಾಚಕರೇ ಊಹಿಸಿಕೊಳ್ಳಬಹುದು. **(ಆರನೆಯ ಮುದ್ರಣ : 1997, ಪು. ಡೆಮ್ಮಿ 40 + 1168)**

**೪. ಭಗವದ್ಗೀತೆಯ ಉಪನ್ಯಾಸಗಳು :** ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು ಹೊಳೆನರಸೀಪುರದ ಕಾರ್ಯಾಲಯದಲ್ಲಿ 9. 6. 1946 ರಿಂದ 17. 12. 1950 ವರೆಗೆ ಪ್ರತಿಭಾನುವಾರವೂ ಉಪನ್ಯಾಸಗಳನ್ನು ಮಾಡುತ್ತಾ ಬಂದು ಅವುಗಳನ್ನು ಸಂಸ್ಕರಿಸಿ ಪುಸ್ತಕರೂಪದಲ್ಲಿ 1953ರಲ್ಲಿ ಮೊದಲನೆಯ ಬಾರಿಗೆ ಪ್ರಕಟಿಸಿರುವ ಗ್ರಂಥ. ಒಟ್ಟು ೨೦೦ ಉಪನ್ಯಾಸಗಳನ್ನು ಮಾಡಿದ ತಾರೀಖು ಮತ್ತು ಸಂಬಂಧಪಟ್ಟ ಶ್ಲೋಕಗಳನ್ನು ಸೂಚಿಸಿ ಒಂದೊಂದು ತಲೆಬರಹವನ್ನು ಹಾಕಿರುತ್ತದೆ. ಭಗವದ್ಗೀತೆಯ 700 ಶ್ಲೋಕಗಳನ್ನೂ ಅದರ ಅರ್ಥವನ್ನೂ ಕ್ರಮವಾಗಿ ಅಳವಡಿಸಿದೆ. ಉಪನ್ಯಾಸಗಳು ಭಾಷ್ಯದ ಅರ್ಥವನ್ನು ವಿಶದ ಗೊಳಿಸುವದಲ್ಲದೆ **ಗೀತೆಯ ಹೃದಯ**ವನ್ನು ಮನಗಂಡು ಅಧ್ಯಾತ್ಮಪಥದಲ್ಲಿ ನಡೆಯಬೇಕೆಂಬ ಮುಮುಕ್ಷುಗಳಿಗೆ ಒಂದು ಸುಗಮವಾದ ಮಾರ್ಗವನ್ನು ತಿಳಿಸುವದು. ಇದನ್ನು ಓದಿದವರೆಲ್ಲರೂ ಕೊಂಡಾಡಿರುತ್ತಾರೆ. 1953ರಲ್ಲಿ ಮೊದಲನೆಯ ಮುದ್ರಣದಲ್ಲಿ ಏಳು ಸಂಪುಟಗಳಲ್ಲಿ ಹೊರತಂದಿತ್ತು. ಎರಡನೆ (1987ರಲ್ಲಿ) ಮತ್ತು ಮೂರನೆಯ (1999) ಮುದ್ರಣಗಳಲ್ಲಿ ಎರಡು ಸಂಪುಟಗಳಲ್ಲಿ ಅಳವಡಿಸಿದೆ. ಮೊದಲನೆಯ ಸಂಪುಟದಲ್ಲಿ ೧ರಿಂದ ೧೨ ಅಧ್ಯಾಯಗಳು ಎರಡನೆಯ ಸಂಪುಟದಲ್ಲಿ ೧೩ರಿಂದ ೧೮ನೆಯ ಅಧ್ಯಾಯ ಪೂರಾ ಒಳಗೊಂಡಿದೆ. ಸಾಮಾನ್ಯ ಜನರಿಗೂ ಅರ್ಥವಾಗುವ ಗ್ರಂಥ.

**(ಮೂರನೆಯ ಮುದ್ರಣ 1999, ಸಂಪುಟ ೧, ೨, ಪು. ಒಟ್ಟು 1192.)**

# ವೇ|| ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳ ಕಿರುಪರಿಚಯ

ಶ್ರೀ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತಪ್ರಯೋಗ ಉಭಯ ವಿದ್ವಾನ್ ದಿ|| ಶೃಂಗೇರಿ ಶ್ರೀಕಂಠಘನಪಾಠಿಗಳವರು ಮತ್ತು ಕಮಲಮ್ಮನವರ ಸೀಮಂತಪುತ್ರ **ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹ ಮೂರ್ತಿಗಳು** ತಾ|| 2-6-1928ರಲ್ಲಿ ಜನಿಸಿದರು. ಒಂಭತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಿಂದಲೇ ವೇದಾಧ್ಯಯನ ಕಾಲೋಚಿತಭಾಗಗಳನ್ನು ಅಭ್ಯಾಸ ಮಾಡಿದರು. 14ನೆಯ ವಯಸ್ಸಿನಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅದೇ ಸಂದರ್ಭದಲ್ಲಿ ಪಿತೃವಿಯೋಗವಾದ್ದರಿಂದ ಆಂಗ್ಲವಿದ್ಯಾಭ್ಯಾಸದಿಂದ ನಿವೃತ್ತರಾಗಿ ಬೇಲೂರಿನಲ್ಲಿ ಸಂಸ್ಕೃತಪಾಠಶಾಲೆಗೆ ಸೇರಿ ನಾಲ್ಕು ವರ್ಷಗಳ ಕಾಲ ಸಂಸ್ಕೃತಾಭ್ಯಾಸ ಮಾಡಿ ಚಂಪೂ ನಾಟಕ (ಸಾಹಿತ್ಯ) ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ 1947ರಲ್ಲಿ ಹೊಳೆನರಸೀಪುರಕ್ಕೆ ಬಂದು ಅಧ್ಯಾತ್ಮವಿದ್ಯಾನಿಲಯಕ್ಕೆ ಸೇರಿ ಐದು ವರ್ಷಗಳ ಕಾಲ ಶಾಂಕರ ವೇದಾಂತಾಧ್ಯಯನವನ್ನು ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಸನ್ನಿಧಿಯಲ್ಲಿ ಅಭ್ಯಾಸಮಾಡಿ 1952ರಲ್ಲಿ ''ಅಧ್ಯಾತ್ಮವಿದ್ಯಾಪ್ರವೀಣ'' ಎಂಬ ಪ್ರಶಸ್ತಿಯನ್ನು ಪಡೆದರು. ಅನಂತರ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿಯೇ ಪಂಡಿತರಾಗಿ ನೇಮಿಸಲ್ಪಟ್ಟು ಪಾಠ ಪ್ರವಚನಗಳು ಉಪನ್ಯಾಸಗಳು ಹಾಗೂ ಸಂಸ್ಥೆಯ ಆಡಳಿತ ವಿಭಾಗದಲ್ಲಿಯೂ ಸೇವೆಯನ್ನು ಸಲ್ಲಿಸುತ್ತಾ ಈಗಲೂ ಸಂಸ್ಥೆಯಲ್ಲಿ ಸೇವಾತತ್ಪರರಾಗಿದ್ದಾರೆ.

ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಂಸ್ಥಾಪಕರಾದ ಪೂಜ್ಯ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು 1975ರಲ್ಲಿ ಬ್ರಹ್ಮೀಭೂತರಾದ ಮೇಲೆ ಇವರು **'ಅಧ್ಯಾತ್ಮಪ್ರಕಾಶ'** ಮಾಸಪತ್ರಿಕೆಯ ಸಂಪಾದಕರೂ, ಲೇಖಕರೂ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಅಧ್ಯಾತ್ಮಗ್ರಂಥಗಳ ಬರಹಗಾರರೂ ಪ್ರಕಾಶಕರೂ ಆಗಿ ಸೇವೆ ಸಲ್ಲಿಸುತ್ತಾ ಪ್ರಧಾನಕಾರ್ಯಾಲಯದಲ್ಲಿಯೇ ಕಳೆದ 48 ವರ್ಷಗಳಿಂದಲೂ ಸೇವಾನಿರತರಾಗಿದ್ದಾರೆ. ಶ್ರೀಶ್ರೀಗಳವರನಂತರ ಈವರೆಗೆ 26 ಅಧ್ಯಾತ್ಮಗ್ರಂಥಗಳನ್ನು ಹೊರತಂದಿದ್ದಾರೆ. ನಾಲ್ಕು ಪರ್ಯಾಯಗಳಲ್ಲಿ ಬ್ರಹ್ಮಸೂತ್ರ ಶಾಂಕರಭಾಷ್ಯದ ಮೇಲೆ 120 ಪ್ರವಚನಗಳನ್ನು ನೀಡಿದ್ದಾರೆ. ಇವು 108 ಕ್ಯಾಸೆಟ್‌ಗಳಲ್ಲಿ ಅಡಕವಾಗಿದ್ದು ಜನಪ್ರಿಯವಾಗಿವೆ. ಹೀಗೆ ಪೂಜ್ಯ ಶ್ರೀಶ್ರೀಗಳವರ ಶಿಷ್ಯರಲ್ಲಿ ಗಣ್ಯರಾಗಿದ್ದು ಈಗಲೂ ತಮ್ಮ ಅಮೋಘಸೇವೆಯಿಂದ ಸಂಸ್ಥೆಯ ಅಭಿವೃದ್ಧಿಗೆ ಕಾರಣರಾಗಿದ್ದಾರೆ - ಎಂದು ತಿಳಿಸಲು ಸಂತೋಷಪಡುತ್ತೇವೆ.

**ತಾ || 29-7-2000** **ಅಧ್ಯಕ್ಷರು**